UNIVERSAL
LIBRARY
OU_200715
UNIVERSAL
LIBRARY

## ಮುಂದಿನ ಪ್ರಕಟನೆಗಳು

೧ ಫಾರ್ಸಿ ಕವೀಂದ್ರರು
ಶ್ರೀ. ಮಧುಗಿರಿ ವಾಸುದೇವ
ಮೂರ್ತಿಗಳಿಂದ
ಮಾರಾಟಗಾರರು :
ಸಾಹಿತ್ಯ ಭಾಂಡಾರ, ಹುಬ್ಬಳ್ಳಿ

೨ ರತ್ನಾಕರ ಪ್ರಶಸ್ತಿ
ರತ್ನಾಕರನ ಕಾವ್ಯ ಪ್ರಶಂಸೆ
ಕನ್ನಡನಾಡಿನ ಎಲ್ಲ ಭಾಗದ
ಲೇಖಕರಿಂದ

೩ ಇಕ್ಬಾಲ್‌ರ ಗೀತೆಗಳು
ಅನುವಾದಕರು :
ಮೂನ್ವಿ ನರಸಿಂಗರಾವ್

**ಕರ್ನಾಟಕ ಸಂಘ,**
**ಕೊಪ್ಪಳ**

ನಮ್ಮ ಒಡೆತನದ
## ಪುಸ್ತಕಗಳು

**ಅಭ್ಯುದಯ**
ಪ್ರೊ. ಗೋಕಾಕ ರೂ. ೧-೮

**ಕನ್ನಡಯಾತ್ರೆ**
ಶ್ರೀ. ಮೂನ್ವಿ ನರಸಿಂಗರಾವ ೧-೮

**ವೈಜ್ಞಾನಿಕ ಪ್ರಬಂಧಗಳು**
ಶ್ರೀ. ಪದ್ಮನಾಭ ಪುರಾಣಿಕ ೧-೮

**ಹಳ್ಳಿಯ ವೈದ್ಯ**
ಶ್ರೀ. ವೈದ್ಯ ಬುರ್ಲಿ ೪-೦

ಒಟ್ಟಾಗಿ ನಾಲ್ಕು ಪುಸ್ತಕ ತರಿಸುವವರಿಗೆ ಅಂಚೆವೆಚ್ಚವಿಲ್ಲ.

ಕನ್ನಡ ಕಥೆ, ಕವನ, ಕಾದಂಬರಿ, ನಾಟಕಗಳು ನಮ್ಮಲ್ಲಿ ಸಿಗುತ್ತವೆ.

ವ್ಯಾಪಾರಿಗಳಿಗೆ ಸುಸಮಯ

**ಬಿ. ಜಿ. ಚಿನ್ಮಲಗಿ,**
ಕರ್ನಾಟಕ ಬುಕ್ ಡಿಪೊ
ಗವಳೀಗುಡಾ,
ಹೈದರಾಬಾದ (ದಕ್ಷಿಣ)

# ಅಭ್ಯುದಯ

ವಿನಾಯಕ

೧೯೪೬

ಪ್ರಕಾಶಕರು :

ಕರ್ನಾಟಕ ಸಂಘ, ಕೊಪ್ಪಳ

ಪ್ರಕಾಶಕರು
**ಜನಾರ್ದನರಾವ ವಕೀಲ,**
**ಅಧ್ಯಕ್ಷ,**
ಕರ್ನಾಟಕ ಸಂಘ, ಕೊಪ್ಪಳ

ಮಾರಾಟದ ಪೂರ್ಣಾಧಿಕಾರಿಗಳು :
**ಬಿ. ಜಿ. ಚಿಮ್ಮಲಗಿ,**
ಹೈದರಾಬಾದ (ದ)

**ಬೆಲೆ :** ರೂ. ೧-೮-೦ (ಬಿ. ಜಿ.)

ಮುದ್ರಕರು -
**ಹ. ರಾ. ಮೊಹರೆ,**
ಸಂಯುಕ್ತ ಕರ್ನಾಟಕ ಮುದ್ರಣಾಲಯ,
ಹುಬ್ಬಳ್ಳಿ

## ಒ ಡ ನು ಡಿ

ಶ್ರೀ. ವಿ. ಕೃ. ಗೋಕಾಕರು ನನ್ನ ಮಾನ್ಯ ಗೆಳೆಯರು. ಅವರ ಈ '**ಅಭ್ಯುದಯ**' ವನ್ನು ಕುರಿತು ನಾಲ್ಕು ಮಾತು ಹೇಳಬೇಕೆಂದು ನನಗೆ ಅಪ್ಪಣೆ ಮಾಡಿದ್ದಾರೆ. ಒಲ್ಲದಿರಲು ಅವಕಾಶವಾಗಲಿ ವಿಳಂಬ ವಾಗಲಿ ಇಲ್ಲ. ಆದ್ದರಿಂದ ಈ ಎರಡು ಮಾತನ್ನು ಓದುಗರಲ್ಲಿ ಬಿನ್ನವಿಸುತ್ತೇನೆ.

ಗೋಕಾಕರು ಸುಮಾರು ೧೫ ವರ್ಷಗಳಿಗೆ ಮೇಲ್ಪಟ್ಟು ಹೊಸ ಕನ್ನಡ ಸಾಹಿತ್ಯಕ್ಕಾಗಿ ದುಡಿದಿದ್ದಾರೆ; ಕಾದಂಬರಿ, ನಾಟಕ, ವಿಮರ್ಶೆ, ಪ್ರಬಂಧ, ಕವಿತೆಗಳು—ಇವೆಲ್ಲ ಅವರ ಬೆಳಸಿನ ಹೂವು ಹಣ್ಣು. ವೇದಿಕೆಗಳ ಮೇಲಿಂದ ಮೇಲ್ತರದ ಭಾಷಣಗಳನ್ನು ಮಾಡಿ ದ್ದಾರೆ. ಕಾಲೇಜುಗಳಲ್ಲಿ ಉತ್ತಮ ಶಿಕ್ಷಕರಾಗಿದ್ದು ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನೂ ಮಾರ್ಗದರ್ಶನವನ್ನೂ ಕೊಟ್ಟಿದ್ದಾರೆ. ಮುಖ್ಯಾಧಿ-ಕಾರಿಗಳಾಗಿ ಕಾರ್ಯದಕ್ಷತೆಯನ್ನು ಮೆರೆದಿದ್ದಾರೆ. ನಮ್ಮ ಮತ್ತು ಪಾಶ್ಚಾತ್ಯ ಸಾಹಿತ್ಯ ಸಂಪ್ರದಾಯಗಳನ್ನು ಚೆನ್ನಾಗಿ ಬಲ್ಲವರು. ನೇರ ವಾಗಿ ಸ್ವಾನುಭವದಿಂದಲೂ, ಉತ್ತಮ ಸ್ನೇಹ ಸಹವಾಸಗಳಿಂದಲೂ ದೊರೆತ ಒಂದು ವಿಶೇಷ ಸಂಸ್ಕಾರ ಅವರಿಗೆ ಇದೆ. ಅವರ ಕವಿತೆಯ ಸ್ವರೂಪ ಈಗಾಗಲೆ ನಮ್ಮ ಜನಕ್ಕೆ ತಿಳಿದಿದೆ; ಅವರ ಕಲೋಪಾಸಕ, ಪಯಣ, ಸಮುದ್ರಗೀತಗಳು ಮುಂತಾದವು ಅವರ ಸೂಕ್ಷ್ಮವಾದ ಬುದ್ಧಿಶಕ್ತಿಯನ್ನೂ ನಿರೂಪಣ ರೀತಿಯನ್ನೂ ತೋರಿಸಿಕೊಟ್ಟಿವೆ. ಆಕಾಶಗಂಗೆಯೆಂಬ ಹೆಸರಿನಲ್ಲಿ ಅವರು ಬರೆದಿರುವ ಕವಿಮನಸ್ಸಿನ ಬೆಳವಣಿಗೆಯ ಗ್ರಂಥವಾಗಲಿ, ಬ್ರೌನಿಂಗ್, ಚಾಸರ ಕವಿಗಳ ಜಾಡಿ ನಲ್ಲಿ ಬರೆದ ವ್ಯಕ್ತಿಚಿತ್ರಗಳನ್ನುಳ್ಳ ಗ್ರಂಥವಾಗಲಿ ಇನ್ನೂ ಹೊರ ಬಿದ್ದಿಲ್ಲವಾದರೂ ಅವುಗಳ ಸ್ಥೂಲ ಪರಿಚಯ ಕನ್ನಡಿಗರಿಗೆ ಆಗಿದೆ.

ವಿಷಯವಿಸ್ತಾರ, ವಿವಿಧತೆ, ಬಳಸುವ ಮಾತು, ಭಾವದ ಆಳ, ರಂಗು ಇವುಗಳಲ್ಲಿ ಅವರ ಬರವಣಿಗೆಯ ಕೆಲವು ಭಾಗ, ನನಗೆ ತಿಳಿದ ಮಟ್ಟಿಗೆ, ಕನ್ನಡ ಸಾಹಿತ್ಯಕ್ಕೆ ಹೊಸದು. ಅವರ ಅನುಭವ-ಪ್ರಪಂಚ ಸಾಮಾನ್ಯವಾಗಿ ಈವರೆಗೆ ಕಾವ್ಯಕ್ಕೆ ಬಾರದಿದ್ದ ಕೆಲವು

ಬಗೆಯ ವಸ್ತು, ವಿಷಯ, ಭಾವಗಳನ್ನು ಸಂಗ್ರಹಿಸುತ್ತದೆ. ಕಡಲು, ಹಡಗು, ಕಪ್ತಾನ, ಮರಳುಕಾಡು, ಜಲಸಂಧಿ. ಮೂಡುಪಡುವಲ ನಾಡುಗಳ ಸಂಬಂಧ, ಸರಸವಿರಸಗಳು, ಲೌಕಿಕ ವ್ಯವಹಾರದ ರೀತಿ-ನೀತಿಗಳು, ಮಾನವ ಚರಿತ್ರೆಯಲ್ಲಿ ಬೆಳೆದಿರುವ ಮತ್ತು ಬಲಿಯುತ್ತಿರುವ ನ್ಯಾಯಾನ್ಯಾಯಗಳು, ಟ್ರಾಂ, ಮೋಟರು, ಪೆಟ್ರೋಲ್, ಗಣಿ, ಶಸ್ತ್ರಚಿಕಿತ್ಸೆ, ಗಿರಣಿ, ಅಗ್ನಿಪರ್ವತ, ನಿರುದ್ಯೋಗ, ಸಾಮ್ರಾಜ್ಯವಾದ, ಮಾನವರ ರಕ್ಕಸತೆ, ಸಮತಾದೃಷ್ಟಿ, ಗಂಡು-ಹೆಣ್ಣುಗಳ ಸಾಮಾಜಿಕ ಮತ್ತು ಆಂತರಂಗಿಕ ಸಮಸ್ಯೆಗಳು ಈಅಲ್ಲೆಲ್ಲ ಎಷ್ಟೋ ಬಗೆಯಲ್ಲಿ ಅವರ ಮನಸ್ಸು ಕಾದಿದೆ, ಕುದಿದಿದೆ. ಅದರ ಫಲಪಾಕವೆಲ್ಲ ಅವರ ಕವಿತೆಗಿಳಿದಿದೆ. ಇಂಗ್ಲೀಷಿನಲ್ಲಿ ಅವರು ಓದಿದ ಛಂದೋರೀತಿ, ಕವಿತಾಮಾರ್ಗಗಳೂ ಬಿಡಿವೃತ್ತ, ವಿಷಮವೃತ್ತಗಳೂ ನಮ್ಮ ವಚನ ಸಾಹಿತ್ಯದ ಲಯಗಳೂ ಅವರ ರಸಾಯನಗಳಲ್ಲಿ ಸೇರಿದ ರುಚಿಗಳು ಲೋಕದಲ್ಲಿ ಇವೊತ್ತು ಯಾವ ಆಶೋತ್ತರಗಳು— ಒಳಗಿನವು ಹೊರಗಿನವು, ರಾಷ್ಟ್ರದವು ಪರಕೀಯವಾದವು, ಅಂತರ್ ರಾಷ್ಟ್ರೀಯವಾದವು, ವ್ಯಕ್ತಿಗಳವು, ಸಮಷ್ಟಿಯವು— ಪ್ರಬಲಿಸಿವೆಯೊ ಆ ಎಲ್ಲದರ ಕಡೆ ಅವರ ಒಲವು ಒಲಿತ ಹೇಗೆ ನಡೆದಿದೆ ಎಂಬುದರ ದರ್ಶನ ಅಲ್ಲಿ ಸೇರಿಕೊಂಡಿದೆ. ಹೀಗಾಗಿ ಚುರುಕಾದ ಒಂದು ವಿಶೇಷ ಬಗೆಯ ಜೀವಚ್ಚೈತನ್ಯ ಅವರ ಕವಿತೆಗಳಲ್ಲಿಂದ ಎದ್ದು ಕಾಣುವುದು ಅದಕ್ಕೆ ಸ್ವಾಗತ ಕೊಡುವಾಗ ಒಂದು ಆಧುನಿಕ ಸತ್ವದ ಪ್ರಕಾಶಕ್ಕೂ ಪ್ರಭಾವಕ್ಕೂ ಕೊಟ್ಟಂತಾಗುವುದು.

ಅವರು ಕನಸಿಗರು ಹೇಗೋ ನನಸಿಗರೂ ಹಾಗೆಯೆ; ಅವರ ಕೃತಿಗಳಲ್ಲಿ ಮೃದುತೆ ಲಾಲಿತ್ಯಗಳು ಹೆಚ್ಚಾಗಿ ಇಲ್ಲದೆ ಇಲ್ಲವಾದರೂ ಒಂದು ಗಂಡುತನ ಧೈರ್ಯಗಳ ಹೊಮ್ಮುಗೆ ವಿಶೇಷವಾಗಿ ಕಾಣುತ್ತದೆ. ಒಬ್ಬ ಸಾಧಕನ ವೃತ್ತಿ, ನಚ್ಚು ನಿಶ್ಚಯಗಳು, ಒಂದು ಉದಾರವಾದ ದರ್ಶನ ಇವೆ ಅವುಗಳ ಅಡಿಯಲ್ಲಿ. ಅದಕ್ಕೆ ಸ್ವಾಗತ ಕೊಟ್ಟಿರುವ ಕನ್ನಡನಾಡು ಈ ಕವನಗಳ ಪುಸ್ತಕವನ್ನೂ ಒಲಿದು ಬರಮಾಡಿ-ಕೊಂಡೀತು.

ಇಲ್ಲಿನ ಮೊದಲ ಹನ್ನೆರಡು ಕೃತಿಗಳು ಹೊಸ ಮತ್ತು ಹಳೆಯ ಜಾಡಿನವು ಮೊಟ್ಟಮೊದಲ ಕವಿತೆ ಮಾತ್ರ ಅವರ

ಸಮುದ್ರಗೀತೆಗಳಲ್ಲಿ ಹೊರಕ್ಕೆ ತಂದ ರೀತಿಯದು. ಕಡೆಯ ಎಪ್ಪತ್ತು ಕವಿತೆಗಳು ಇಂಗ್ಲೀಷಿನಲ್ಲಿ 'ಸಾನೆಟ್' ಎಂಬ ಚೌದಶಪದಿಗಳು. ಇವೆಲ್ಲ ಭಾವಕವಿತೆಗಳೇ. ಪ್ರತಿಯೊಂದೂ ಒಂದು ಸನ್ನಿವೇಶದಲ್ಲಿ ಹುಟ್ಟಿ ಅದನ್ನು ನಿರ್ದೇಶಿಸುತ್ತವೆ, ಪ್ರತಿಪಾದಿಸುತ್ತವೆ, ಅಥವಾ ಬೆಳಸಿ ಕವಿಯ ಮನಸ್ಸನ್ನು ರೂಪಿಸುತ್ತವೆ ಇಲ್ಲಿ ವಿಷಯ ಅಥವಾ ವಸ್ತುಗಿಂತ ಕವಿಮನಸ್ಸು ಅದನ್ನು ಕುರಿತೂ ಸುತ್ತಲೂ ಹೇಗೆ ಆಡುತ್ತದೆ, ವಿಷಯವನ್ನು ಹೇಗೆ ಪ್ರವೇಶಿಸಿ ಸತ್ಯದ ಯಾವ ಮುಖವನ್ನು ಕಾಣಿಸುತ್ತದೆ ಎಂಬುದು ಹೆಚ್ಚು ಮುಖ್ಯ ಇಂತಹ ಸಂದರ್ಭದಲ್ಲಿ ಒಂದು ಸಮಗ್ರತೆಯ ಅಥವಾ ಸಾಕಲ್ಯದ ದೃಷ್ಟಿಯನ್ನು ಇಂಥಲ್ಲಿ ನಿರೀಕ್ಷಿಸಬಾರದು ಮನಸ್ಸು ಒಂದು ಬಗೆಯ ಆವೇಶಗೊಂಡಾಗ ಆದರ ಅನುಭವ ಸಂಸ್ಕಾರಗಳೂ, ರೀತಿ ದರ್ಶನಗಳೂ, ಹೇಗೆ ಪ್ರಕಾಶವಾಗುತ್ತವೆಯೊ ಅವಕ್ಕೆ ತಕ್ಕಂತೆ ಅವುಗಳ ವಾಹಕವಾಗಿ ಒಂದು ಲಯದ ನಡೆ ಕಾಣುವುದು ಇಲ್ಲಿ ಏಕಾಗ್ರತೆ, ತೀವ್ರತೆ ಮುಖ್ಯ ಲಕ್ಷಣಗಳು; ಮತ್ತು ಆ ಗುಣಗಳಿಗೆ ಹೊಂದುವ ಬೆಡಗು ವಿಲಾಸವೂ, ಕೆಲವು ವೇಳೆ ಆ ವೈಕೃತಿ ಕೂಡ, ಇಲ್ಲಿ ಕಾಣಬಹುದಾಗಿರುತ್ತದೆ.

ಒಟ್ಟಿನಲ್ಲಿ, ಇಲ್ಲಿ ಕವಿಯ ಮನಸ್ಸು ಬಹು ದೊಡ್ಡ ಆಸೆಗಳನ್ನು ಬೆಳಸಿ ಆ ಆಸೆಗಳು ಫಲಿಸುವುದಕ್ಕೆ ಸುತ್ತಲ ಆವರಣದಲ್ಲಿ ಅವಕಾಶವಾಗಲಿ ಅನುಕೂಲ ಸನ್ನಿವೇಶಗಳಾಗಲಿ ಇಲ್ಲದಿರುವಾಗ, ವಿರಸವನ್ನು ದಾರುಣವಾಗಿ ಅನುಭವಿಸಿ ವ್ಯಗ್ರವಾಗಿರುವಂತೆ ಕಾಣುತ್ತದೆ. ನಾಲ್ಕಾರು ಸಂದರ್ಭಗಳನ್ನು ಬಿಟ್ಟರೆ ಇಲ್ಲಿ ಇನ್ನೆಲ್ಲಿಯೂ ಕಾಣುವುದು ಜನರ ವ್ಯಕ್ತಿಜೀವನದಲ್ಲಿಯೂ ಸಾಮೂಹಿಕ ಜೀವನದಲ್ಲಿಯೂ ಎದ್ದು ತೋರುವ ಒಡಕು, ನೋವು, ಕಹಿ, ಕಾರ್ಪಣ್ಯ, ಅನ್ಯಾಯ, ಅಸಮತೆ, ದೌರ್ಜನ್ಯ, ಕುಹಕ, ಶುಭಕ್ಕೆ ಒಲಿಯದ ಪ್ರವೃತ್ತಿ, ಭಂಗ ಈ ಚಿತ್ರಗಳೇ. ಹಿಂದಿನವರ ರೀತಿ ನೀತಿ, ಇವೊತ್ತಿನ ತದ್ವಿರುದ್ಧವಾದ ಪ್ರವೃತ್ತಿ, ಪ್ರಕೃತಿಜೀವನಕ್ಕೂ ಮಾನವ ಜೀವನಕ್ಕೂ ಇರುವ ವ್ಯತ್ಯಾಸ, ಆಗಬೇಕಾಗಿರುವುದಕ್ಕೂ ಅದನ್ನು ತಡೆಯುತ್ತಿರುವ ಪ್ರಭಾವಗಳಿಗೂ ಇರುವ ವಿಷಮತ, ಚಲುವು ಒಲವು, ಸ್ನೇಹ, ಸವಿಗನಸು, ಹಿರಿಯಾಸೆ ಇವುಗಳನ್ನೆಲ್ಲ ಮೆಟ್ಟುವಂತೆ ಬಲಿಯುತ್ತಿರುವ ಪ್ರವೃತ್ತಿಗಳ ಮತ್ತು ಪ್ರಪಂಚಗಳ ವರ್ಣನೆ ಇದೆ. ಆದರೂ

ಕೋಗಿಲದ ಸವಿಗಾನ ಮತ್ತು ಸಂದೇಶ, ಗುಬ್ಬಿಮರಿಗೂ ಬೇಡತಿಯ ಹೆಣ್ತನಕ್ಕೂ ಮರುಕ, ಕ್ರಾಂತಿದರ್ಶನದಲ್ಲಿನ ಶುಭದ ಕಣ್ಣು, ಈ ಪುಸ್ತಕಕ್ಕೆ ಹೆಸರು ಕೊಟ್ಟಿರುವ 'ಅಭ್ಯುದಯ' ದಲ್ಲಿನ ಉಜ್ವಲ ಚೈತನ್ಯ ಪ್ರಕಾಶ, ಹೊಸ ಹೊಂಚನ್ನು ಹಾಕುತ್ತಿರುವ ಶ್ರಾವಣಾದಿಗಳ ಉತ್ಸಾಹ ಇವುಗಳಲ್ಲಿಯೂ ಅಷ್ಟಷಟ್ಪದಿಗಳಲ್ಲಿ ವರ್ಣಿತವಾಗಿರುವ ಪ್ರಕೃತಿಶಕ್ತಿಗಳ ಮತ್ತು ವ್ಯಕ್ತಿಚಿತ್ರಗಳ ಶಕ್ತಿಸೌಂದರ್ಯಗಳಲ್ಲಿಯೂ ಗೋಕಾಕರ ಮನಸ್ಸು ಎಷ್ಟು ದೊಡ್ಡ ಲೋಕಹಿತಕ್ಕೂ ಸೌಭಾಗ್ಯಕ್ಕೂ ಹಾರೈಸಿ ಹಾತೊರೆಯುತ್ತಿದೆ ಎಂಬುದನ್ನು ಕಾಣಬಹುದು. ಅವರು,

ಹೋಗಿಬರುವೆನು ಕನಸೆ, ಹೋಗಿಬರುವೆನು ಸೊಗಸೆ
ನನ್ನ ಮರೆಯಲಿ ನಿನ್ನ ಕಂಗಳಾ ಬೊಗಸೆ

ಎಂದು ಹೇಳಿದರೆ ನಂಬಬೇಕು ಯಾರು? ಸದ್ಯಕ್ಕೆ ಕನಸು ಮುರಿದು, ನನಸು ಕಹಿಯಾಗಿ

ಸಾಕಿನ್ನು ಕನಸಿಗನ ದಿವ್ಯದೀವಟಿಗೆ!
ಸಾಕು ವಂದನೆಯಿನ್ನು ಒಲವೆಂಬ ನಟಿಗೆ!

ಎಂದು ರೋಸಿದಂತೆ ಕಂಡರೆ ಅದೇ ಮನಸ್ಸು ತಿರುಗಿ 'ದೈವ' ವೆಂಬ ಸಾನೆಟ್ಟುಗಳಲ್ಲಿ

ಇಂದೊರ್ವ ದೇವಿಯ ಪರಮ ಕೋಮಲ ಸ್ಪರ್ಶ–
ದಿಂದ ಬಂದಿತು ಫಲೋನ್ಮುಖತೆ ಈ ಬಾಳಿಗೆ
ನೀನು ಬೆಳಸಿದ ಹಣ್ಣು—ಸಿಸ್ನಿಚ್ಚೆಯಿಂದಿಹೆನು

—ಎಂಬ ಮಾತಿನಿಂದ ಕೊನೆಗಾಣುವುದನ್ನು ನೋಡಿ ಮನಸ್ಸಿಗೆ ಧೈರ್ಯವಾಗುತ್ತಿದೆ. ಹಾಗೆಯೇ ಪ್ರತೀಕ್ಷಣೆಯ ಎರಡನೆಯ ಖಂಡದಲ್ಲಿ ಕಾಣುವ ಸಾಧು ಸಾಂತ್ವನ ಅವರನ್ನಂತೆಯೇ ನಮ್ಮನ್ನೂ ಸ್ವಲ್ಪಮಟ್ಟಿಗೆ ಸಮಾಧಾನಗೊಳಿಸಬಲ್ಲದ್ದಾಗಿದೆ.

ಕಾಯುತಿರು ಓ ಜೀವ! ಮಾಯುಬಹುದೀ ವ್ರಣವು
ಆಗಬಹುದೀ ಬಾಳು ಧ್ಯೇಯಗಳ ಮೊಗಸಾಲೆ
ಇಳೆಯು, ಮನೆ–ಮನವ ತುಂಬುತ್ತ ಬರಬಹುದೊಲವು.

ಎಂಬ ಅಲ್ಲಿಯ ಮಾತುಗಳು ಈ ಮುಂಚಿನ ಹಲವು ಕವಿತೆಗಳಲ್ಲಿ ಪ್ರಕಟವಾಗುವ ನೋವು ಕಾವುಗಳಿಗೂ ಭಂಗನಿರಾಸೆಗಳಿಗೂಬಂದು

ತಾಳ್ಮೆಯ ಉತ್ತರವನ್ನು ಕೊಡುತ್ತಿವೆ. ಎಲ್ಲ ಸಾಧಕರಿಗೂ ನೆರವು ಕೊಡುವಂತಹ ಮಾತು ಅದು. ಆ ವಿವರಗಳನ್ನೆಲ್ಲ ಕವಿತೆಗಳನ್ನು ಓದಿಯೇ ಸವಿಯಬೇಕು. ಅಲ್ಲಲ್ಲಿ ಯಾವುದೊ ಕಠಿಣತೆ, ಕರ್ಕಶತೆ ತಲೆಹಾಕುತ್ತದೆ. ಬೆಡಗಿಯೆಂಬ ಕವಿತೆಯ ತುಂಬ ಆ ಕರ್ಕಶತೆ ಇದೆ. ಚೆಲುವೆ ಹೆಣ್ಣು ಸಿಂಗಾರ ಮಾಡಿಕೊಂಡರೆ ಗಂಡೇಕೆ ಅದಕ್ಕೆ ಬಲೆಬೀಳಬೇಕು ? ಆಕ್ರೋಶಗೊಳ್ಳಬೇಕು ? ನಾಶವಾಗಬೇಕು ? ಆ ರೀತಿ ಕೆರಳುತ್ತ ಹೋದರೆ ಬದುಕಿನಲ್ಲಿ ಮಿತಿಯೆಲ್ಲಿ ? ಬಡತನ, ನಿರಲಂಕೃತಿ ಯಾವ ತಳವುಟ್ಟ ಬಲ್ಲದು ? ಎನ್ನಿಸುತ್ತದೆ. ಆದರೆ ಅವರ ಮನಸ್ಸು ಅಂತಹ ವಿಷಯದಲ್ಲಿ ಏಕೆ ತ್ವೇಷಗೊಂಡಿದೆ ಎಂಬುದನ್ನು ಅರ್ಥ ಮಾಡಿಕೊಂಡರೆ ಆದರ ವಿಷವೂ ಸ್ವಲ್ಪ ಮುರಿದೀತು. ವರ್ಣನೆಯ ಸೊನೆ, ಪ್ರಾಸ ಮತ್ತು ಭಾವಬಂಧ, ರಚನೆಯ ವಿಶೇಷತೆ ಇವುಗಳ ಬೆಡಗು ಹರಿತದಲ್ಲಿ ಮರೆತುಬೀಳುವಷ್ಟು ಕವಿತೆ ಚೆನ್ನಾಗುತ್ತದೆ. ಮುಂಗಾರು, ಹಿತ್ತಲ ತುಳಸಿ, ಕಮ್ಮಟ, ಗೆಳೆಯ, ಪ್ರಥಮ ಪ್ರಯತ್ನದ ಕವಿ, ಪ್ರಶ್ನೆ, ನಲ್ಲ-ನಲ್ಲೆ, ಇಬ್ಬಗೆ, ಇನ್ನೂ ಹೀಗೇ ಹಲವು ಚೌದಶಪದಿಗಳು ಬಹು ಚೆಲುವಾಗಿವೆ ಅಭ್ಯುದಯ, ಗೆಲವುಗಳಲ್ಲಿ ಅವರ ಉತ್ಸಾಹಕ್ಕೆ ಕಳೆಕೊಡುವ ಜೀವದರ್ಶನ ವಾವುದು ಇನ್ನುಮುಂದೆ ತಾವು ಕನಸು ಕಾಣುವುದಿಲ್ಲವೆಂದರೂ ನನಸಿನಲ್ಲಿ ಈ ಕನಸು ರೂಪಗೊಳ್ಳದಿದೆಯಲ್ಲಾ, ಎಂಬ ಆತುರವೂ ಅದಕ್ಕಾಗಿ ಇವರು ಪಡುವ ಕಾತರವೂ ಈ ಪುಸ್ತಕದಲ್ಲಿನ ಚಿತ್ರಣ.

ಭೋಂಗಾನಾದ ಎಂಬ ಮೊದಲ ಕವಿತೆಯನ್ನು ಓದುವಾಗ ಅರ್ಥಕ್ಕೆ ತಕ್ಕಂತೆ ಇಲ್ಲಿ ಉಸಿರಿನ ಲಯ ಯತಿ ನಡೆದುಕೊಂಡು ಹೋಗುವಂತೆ ಎಳೆದು, ತಡೆದು, ನಿಂತು ಓದಬೇಕು. ಸಂಸ್ಕೃತದವರು ಕೂಡ ವಿಷಮವೃತ್ತವೆಂಬ ಒಂದು ಜಾತಿಯ 'ಛಂದಸ್ಸಿ' ಗೆ ಅವಕಾಶ ಕೊಟ್ಟಿದ್ದರು. ಸಾಮಾನ್ಯವಾಗಿ ಅವರೆಲ್ಲ ವೃತ್ತಗಳಂತೆ ಅದೂ ನಾಲ್ಕು ಪಾದಗಳದು ನಾಲ್ಕು ನಾನ್ನೂರಾದಾಗಲೂ ಆ ತತ್ತ್ವವನ್ನನುಸರಿಸಿ ಇವೊತ್ತಿನ ಜೀವನದ ಲಯಗಳನ್ನು ಇವೊತ್ತಿನ ಕಾರ್ಯಗಳಿಗೂ ವಿಷಯಗಳಿಗೂ ಹೊಂದಿಸಿ ಕೃತಿಗಳನ್ನು ನಿರ್ಮಾಣ ಮಾಡಬಹುದೇನೋ. ಒಂದು ಕ್ರಮ, ನಿಯತಿ, ಸಂಪೂರ್ಣತೆ, ಒಂದು ದಿಕ್ಕಿನ ಓಟ, ನಿಶ್ಚಯ, ಬದುಕಿನಲ್ಲೇ ಇಲ್ಲ

ದಿರುವಾಗ, ಅಕ್ರಮ, ಅಶಾಂತಿ, ಅನೇಕಮುಖತೆ, ಒಡಕು, ವಿರಸ ಗಳನ್ನು ಛಂದಸ್ಸಿನಲ್ಲಿ ಕೂಡ ಪ್ರತಿಬಿಂಬಿಸುವಂತಾದರೆ ವಿಷಯ, ರೀತಿ, ನಾದ ಲಯ ನಡೆ ಹೊಂದಿಯಾವೇನೋ. ಅಲ್ಲಿಯೂ ಬಿಗಿ- ಪನ್ನು ಕಾಪಾಡಿಕೊಳ್ಳಬೇಕಾದೀತು. ಪ್ರತಿ ಪಾದದ ಒಳನೆಯ್ಗೆ, ರಚನೆಗಳನ್ನೂ ಪಾದಪಾದಗಳಿಗಿರುವ ಲಯದ ಒಯ್ಯಲನ್ನೂ, ಇವೆಲ್ಲ ಒಂದು ಅರ್ಥಕ್ಕೆ ತಕ್ಕಂತೆ ತೂಗುವ—ಬೇಕಾದಂತೆ ಹಿಗ್ಗುವ, ಕುಗ್ಗುವ—ಒಂದು ಧಾರಾಳದ ನಡಗೆಯ ಸ್ವಾತಂತ್ರ್ಯವನ್ನೂ ಹದ- ವರಿತು ನಡಸಿಕೊಂಡರೆ ಇಂಥ ಕೃತಿಗಳು ಇನ್ನೂ ಚೆನ್ನಾಗುತ್ತವೆ. ಹೊಸ ಬಗೆಯ ಅವಯವಿಗಳು ಛಂದಃಪ್ರಕಾರಗಳಲ್ಲಿಯೂ ಹುಟ್ಟಿಕೊಳ್ಳುತ್ತವೆ ಹಿಂದಿನ ಛಂದಸ್ಸಿನ ಧಾಟಿಗಳಲ್ಲಿ ಓಟ ಗೊತ್ತಾ ದುದು; ಗೊತ್ತಾದ ಕ್ರಮವರಿತು ಅದನ್ನು ಓದಬಹುದಾಗಿದೆ. ಕವಿಯ ನಾಡಿ ಹೇಗೆ ನುಡಿಯುತ್ತದೆಯೋ, ಹಾಗೆ ನಿಂತು, ಅಥವಾ, ನೂಕಿ ನಡೆಯುತ್ತದೆಯೊ ಹಾಗೆ ನಿಂತು ನಡೆದು ಓದಬೇಕಾಗಿರುವ (Free Verse) ಬಿಡಿ ವೃತ್ತ, ಪಾಶ್ಚಾತ್ಯರಲ್ಲಿ ಬಳಕೆಯಲ್ಲಿದೆ. ಆ ಲಯವನ್ನೆ ಭಾವ, ರಕ್ತ, ನುಡಿಯುತ್ತದೆ. ಉಸಿರು, ಕೊರಲು ಧ್ವನಿಸುತ್ತದೆ; ಕಿವಿ ಕೇಳುತ್ತದೆ ಅದರ ಸ್ವರೂಪವನ್ನು ಸೌಹಾರ್ದ ದಿಂದ ಅರಿತುಕೊಂಡರೆ ಈ ಮೊದಲ ಕವನದ ಮತ್ತು ಸಮುದ್ರಗೀತ ಗಳ ಹಲವು ಕವಿತೆಗಳ ಸ್ವಾರಸ್ಯವನ್ನು ಅನುಭವಿಸಬಹುದಾಗುವುದು.

‘ಸಾನೆಟ್’ ಹದಿನಾಲ್ಕು ಸಾಲಿನ ಪದ್ಯ. ಅದನ್ನು ಬಗೆ ಬಗೆಯಾಗಿ ಬರೆಯುವರು. ಇಲ್ಲಿ ಅದರ ಎರಡು ಪ್ರಕಾರಗಳು ಕಾಣುವುವು. ಮೊದಲಿನದರಲ್ಲಿ ಎರಡು ಗೊತ್ತಾದ ಭಾಗಗಳಿವೆ. (i) ಎಂಟು ಸಾಲಿನ ಖಂಡ, (ii) ಆಮೇಲೆ ಆರು ಸಾಲಿನ ಖಂಡ. ಈ ಎಂಟು ಸಾಲಿನ ನಡಗೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಪ್ರಾಸಬಂಧ ಒಂದು ಕ್ರಮವನ್ನು ಅನುಸರಿಸುತ್ತದೆ. ಎರಡನೆಯ ಭಾಗದ ಪ್ರಾಸರಚನೆ ಬೇರೆ ಇಂಥ ಕಡೆಯಲ್ಲಿಯೂ ಕೆಲವರು ಮೂರು ಮೂರು ಪಾದಗಳ ಎರಡು ಖಂಡಗಳನ್ನಾಗಿಯೊ ಎರಡೆರಡರ ಮೂರು ಖಂಡಗಳನ್ನಾಗಿಯೊ ರಚಿಸಿ, ನಾದಲಯ, ಪ್ರಾಸ, ಅರ್ಥ ಭಾವಗಳ ನಡಗೆ ಇವುಗಳನ್ನು ಆಯಾ ಭಾಗಕ್ಕೆ ಹೊಂದುವಂತೆ, ಅವನ್ನು ಎತ್ತಿ ತೋರಿಸುವಂತೆ, ರಚಿಸಿ ಕಾರ್ಯ ಸಾಧಿಸುವುದೋ

ಪದ್ಧತಿ. ಹದಿನಾಲ್ಕು ಪಾದಗಳ ಮಿತಿಯಲ್ಲಿ ಭಾವಾರ್ಥಗಳ ಒಂದು ವಾಸ್ತುಶಿಲ್ಪದಂತೆ, ಹಿಡಿತ ಹಿತ ಮಿತಗಳಲ್ಲಿ, ನಿಷ್ಠುರ ನಿಯಮದಲ್ಲಿ ಸಾನೆಟ್ ಬೆಳೆಯಬೇಕಾಗುವುದು. ಇವನ್ನು ಪೂರ್ಣವಾಗಿ ಸಾಧಿಸುವುದು ಕಷ್ಟ. ಮೊದಲ ಭಾಗದ ಅರ್ಥ ಒಂದು ಧಾರೆಯಾಗಿ ಬೆಳೆಯಬಹುದು. ಅಥವಾ, ಮೊದಲು ನಾಲ್ಕು ಪಾದದಲ್ಲಿ ಆರಂಭ ಮಾಡಿದುದನ್ನು ಬೆಳಸಿಯೋ ವಿವರಿಸಿಯೋ, ತುಂಬಿಯೋ, ಸಡಿಲಿಸಿಯೋ ಎರಡನೆಯ ನಾಲ್ಕು ಪಾದಗಳಲ್ಲಿ ಕಾಣಿಸುವುದೂ— ಈ ಬೆಳವಣಿಗೆಯ ಕ್ರಿಯೆ ಕಾಣುವಂತೆ ಪಾದಗಳ ನಡಗೆಯಲ್ಲಿಯೂ ಪ್ರಾಸಗಳ ರಚನೆಯಲ್ಲಿಯೂ ಅದು ಪ್ರತಿಫಲಿಸುವಂತೆ ಮಾಡುವುದುಂಟು. ಈ ಎಂಟು ಪಾದಗಳ ತರುವಾಯದಲ್ಲಿ ಭಾವ, ಅರ್ಥ, ಮುರಿದು ಅದರಿಂದ ಉತ್ಪನ್ನವಾದ ಅಥವಾ ಸೂಚಕವಾದ ಬೇರೆಯ ಒಂದು ಮನೋವಿಲಾಸವನ್ನೂ ದರ್ಶನವನ್ನೂ ಸಾನೆಟ್ ತೋರಿಸಬೇಕು. ಈ ಭಾವದ ತಿರುಗು, ಮುರಿವು ಸಾನೆಟ್ಟಿಗೆ ಸ್ವರೂಪ ಲಕ್ಷಣ; ಆ ಶಿಲ್ಪದಲ್ಲಿ ನಿರ್ಬಂಧ. ಅದು ಬಹು ವಿಚಕ್ಷಣೆಯಿಂದ ಬಹು ಕುಶಲತೆಯಿಂದ ಆಗಬೇಕಾಗುತ್ತದೆ. ಅದನ್ನು ಎರಡು ಮಜಲುಗಳಲ್ಲಿಯೊ, ಮೂರರಲ್ಲಿಯೊ ಏರ್ಪಡಿಸಿ ಒಟ್ಟು ಸಾನೆಟ್ಟಿನ ಅರ್ಥವನ್ನು ಸಾಧಿಸಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಪಾದಗಳನ್ನು ನಡಸುವ ರೀತಿ ಅವುಗಳ ಬಿಗಿವಾಗಲೀ ಧಾರಾಳವಾಗಲೀ ಕೆಡದಂತೆ ಅರ್ಥವನ್ನು ನಿಲ್ಲಿಸಿಕೊಳ್ಳುವ ಮತ್ತು ಏಕಾಗ್ರದಲ್ಲಿ ನಡಸುವ ಚಮತ್ಕಾರ, ಬೇರೆಗೆ ತಿರುಗುವಾಗ ತಿರುಗುವ ಸೊಗಸು, ಕಡೆಯ ಪಾದಗಳಲ್ಲಿ ಒಟ್ಟಿಗೆ ಅರ್ಥವೂ ಭಾವವೂ ಪಾದದ ಲಯವೂ ಸಂಪೂರ್ಣವಾಗಿ ಇಲ್ಲಿಗೆ ಮುಕ್ತಾಯವಾಯಿತು ಎಂಬಂತೆ ನಡಸುವ ಜಾಣ್ಮೆ, ಸಿದ್ಧಿಸುವುದು ಬಹು ಕಷ್ಟ. ಅವುಗಳನ್ನು ಬರೆಯುವುದರಲ್ಲಿ ಹೆಸರಾದ ಪಾಶ್ಚಾತ್ಯ ಕವಿಗಳಲ್ಲಿಯೇ ಇದು ಎಷ್ಟೋ ವೇಳೆ ನೆರವೇರಿಲ್ಲ. ನಮ್ಮಲ್ಲಿ ಈ ಸಾನೆಟ್ ಬರವಣಿಗೆ ಹಲವು ಮೇಧಾವಿಗಳಾದ ಕವಿಗಳ ಕೃತಿಗಳಲ್ಲಿ ರೂಪಗೊಳ್ಳುತ್ತಿದೆ. ಅಂತಹ ಪ್ರಯತ್ನಗಳಿಗೆ ಗೋಕಾಕರ ಈ ಎಪ್ಪತ್ತು ಸಾನೆಟ್ಟುಗಳೂ ಸಾಕ್ಷಿ ರಚನೆ, ನಡಗೆ, ಮುಕ್ತಾಯಗಳ ರಹಸ್ಯವನ್ನು ಸಾನೆಟ್ ಬರೆಯುವವರು ಗಮನದಲ್ಲಿ ಇಟ್ಟುಕೊಂಡು ಸಾಧಿಸಬೇಕೆನಿಸುತ್ತದೆ ಎರಡನೆಯ ಬಗೆಯ

ಸಾನೆಟ್‌ಗಳಲ್ಲಿ ನಾಲ್ಕು ಪಾದದ ಮೂರು ಖಂಡಗಳೂ, ಕಡೆಯಲ್ಲಿ ಅವುಗಳ ಅರ್ಥವನ್ನು ಕವಿ ಜಡತಿ ಮಾಡಿಯೊ, ಸೂಚಿಸಿಯೊ, ರೂಡಿಸಿಯೊ ಮುಡಿಯಿಡುವಂತೆ ಎರಡು ಪಾದಗಳಲ್ಲಿ ನಿರ್ಣಯಿಸುವ ಪದ್ಧತಿ ಇರುತ್ತದೆ. ಅದರಲ್ಲಿಯೂ ಅನುಕೂಲ ಪ್ರತಿಕೂಲ ಎರಡೂ ಉಂಟು. ಹಾಗಲ್ಲದೆ ಹದಿನಾಲ್ಕು ಸಾಲುಗಳನ್ನೂ ಒಂದೇ ಎರಕದಲ್ಲಿ ನಡಸಿಕೊಂಡು ಹೋಗಿ ಕಾರ್ಯ ಸಾಧಿಸುವ ಸಾನೆಟ್ಟುಗಳೂ ಕನ್ನಡದಲ್ಲುಂಟು. ಎಷ್ಟು ಜನ ಎಷ್ಟು ಬಗೆಯ ಮನಸ್ಸಿನ ಅಗತ್ಯಗಳಿಗೂ ಬನಿಗಳಿಗೂ ಈ ಪ್ರಕಾರವನ್ನು ಉಪಯೋಗಿಸುತ್ತಾರೊ ಅಷ್ಟು ಬಗೆಯ ವಿತರಣೆ ವಿಚಕ್ಷಣೆಯನ್ನು ಈ ಸಾನೆಟ್ ಶಿಲ್ಪದಲ್ಲಿ ರೂಪಿಸಬಹುದಾಗಿದೆ. ಒಂದು ಭಾವಕ್ಕಾಗಿ ಒಂದು ಶಿಲ್ಪ; ಈ ಪ್ರಕಾರದ ಶಿಲ್ಪಕ್ಕಾಗಿಯೇ ಈ ಭಾವ ರೂಪ ತಾಳಿತೋ ಎಂಬಂತೆ ಭಾವ ಆದಿ ಮಧ್ಯ ಅಂತ್ಯ ಹೊಂದಬೇಕು. ಮೇಲ್ತರದ ಸಾನೆಟ್ಟುಗಳು ಹಲವನ್ನಾದರೂ ಸಾಧಿಸಿರುವ ಗೋಕಾಕರ ರಚನಾಶಕ್ತಿಗೆ ನಾನು ಕೈಮುಗಿಯುತ್ತೇನೆ.

ಕನ್ನಡಿಗರ ವಿಶ್ವಾಸ ಪಡೆಯಲೆಂದು ನನ್ನ ಗೆಳೆಯರು ಇದನ್ನು ಬರೆದಿದ್ದಾರೆ. ಹೈದರಾಬಾದು ಸಂಸ್ಥಾನದ ಯಾವುದೋ ಒಂದು ಪ್ರಾಂತದಲ್ಲಿ ಕನ್ನಡದ ನಂದಾದೀವಿಗೆ ಹಚ್ಚಿ ತಾಯ್ನುಡಿಯ ಸೇವೆ ಮಾಡುತ್ತಿರುವ ಕೊಪ್ಪಳ ಕರ್ನಾಟಕ ಸಂಘದ ಕನ್ನಡ ನಾಡ ಭಕ್ತರು ಈ ಪುಸ್ತಕವನ್ನು ಅಚ್ಚು ಹಾಕಿಸಿ ಅರ್ಪಿಸುತ್ತಿದ್ದಾರೆ. ಈ 'ಅಭ್ಯುದಯ'ದ ಆಸೆ ಕಾಣಿಕೆಗಳು ನಮ್ಮ ಜನಕ್ಕೆ ಲಭಿಸಬೇಕಾದ ಎಲ್ಲ ಬಗೆಯ ಸಂಸ್ಕಾರಕ್ಕೂ ಏಳ್ಗೆಗಳಿಗೂ ಮಾರ್ಗದರ್ಶಕವಾಗಲಿ; ನೆರವಾಗಲಿ.

೨೮-೩-೧೯೪೭ — ವಿ. ಸೀ.

# ಅರಿಕೆ

ಕೊಪ್ಪಳದ ಕರ್ನಾಟಕ ಸಂಘದವರು ನನ್ನ ಈ ಕವನಸಂಗ್ರಹ ವನ್ನು ಪ್ರಕಟಿಸುತ್ತಿರುವದು ನನಗೊಂದು ಸಂತೋಷದ ವಿಷಯ ವಾಗಿದೆ. ಕನ್ನಡ ನಾಡು ಉದಯವಾಗಲಿರುವ ಈ ಕಾಲದಲ್ಲಿ ಉದಯರಾಗವು ನಿಝಾಮ ಕರ್ನಾಟಕದಲ್ಲಿಯೂ ಕೇಳಿಬರುತ್ತಿದೆ. ನಿಝಾಮ ಕರ್ನಾಟಕ ಹಾಗು ಉತ್ತರ ಕರ್ನಾಟಕದ ಭಾಗಗಳನ್ನು ಸಾಂಸ್ಕೃತಿಕವಾಗಿ ಹೊಂದಿಸುವ ಮಂತ್ರವನ್ನು ಜಪಿಸುತ್ತಿರುವ ಕೊಪ್ಪಳದಲ್ಲಿ ಈ ಎರಡು ಭಾಗಗಳಲ್ಲಿಯೂ ಇರುವ ಪರಂಪರೆಗಳ ಸಂಗಮವಾಗಿದೆ. ಅನೇಕ ವರ್ಷಗಳ ಹಿಂದೆ ಬರೆದಿದ್ದ ಈ ಕವನಗಳ ಸಂಗ್ರಹವಿದು ಕೊಪ್ಪಳಕ್ಕೆ ಮೀಸಲಾಗಿತ್ತೆನ್ನಬಹುದು. ಕೊಪಣ ನಗರದ ನವಿನೆನಪಿಗೆ ನಾನಿತ್ತ ಪುಷ್ಪಾಂಜಲಿಯಿದು.

'ಅಭ್ಯುದಯ' ವೆಂಬ ಕವನವೊಂದು ಈ ಸಂಗ್ರಹದಲ್ಲಿದ್ದರೂ ಅದರಿಂದ ಈ ಸಂಗ್ರಹಕ್ಕೆ ಹೆಸರು ಬಂದಿಲ್ಲ. ಆ ಕವನ, ಗುಬ್ಬಿಮರಿ, ಕೃಪಣರ ಬಾಳು ಹಾಗು ಬೇಡತಿ ಎಂಬವುಗಳನ್ನು ನಾನು ಹನ್ನೊಂದು ಹನ್ನೆರಡು ವರ್ಷಗಳ ಹಿಂದೆ ಬರೆದಿದ್ದೆ. ಯಾವುದನ್ನು ನಾವು 'ಪ್ರಗತಿಪರ' ಸಾಹಿತ್ಯವೆಂದು ಕರೆಯುತ್ತಿರುವೆವೋ ಅದನ್ನು ಆಂಧ್ರ ದೇಶದಲ್ಲಿ 'ಅಭ್ಯುದಯ' ದ ಸಾಹಿತ್ಯವೆಂದು ಹೇಳುತ್ತಾರೆ. ಅಭ್ಯು ದಯದ ವಿಚಾರವು ಆಂಗ್ಲ ಸಾಹಿತ್ಯದಲ್ಲಿ ಈಗ ಇಪ್ಪತ್ತು ವರ್ಷಕ್ಕೆ ಮೇಲ್ಪಟ್ಟು ತಲೆಯೆತ್ತಿದೆ. ನಾನು ಆಕ್ಸಫರ್ಡಿನಲ್ಲಿದ್ದಾಗ ಅಲ್ಲಿಯ ವಾತಾವರಣವು ಈ 'ಅಭ್ಯುದಯ'ದ ವಿಚಾರದಿಂದ ತುಂಬಿ ತುಳುಕು ತ್ತಿತ್ತು. ಆ ವಿಚಾರಗಳ ಗುಂಗಿನಲ್ಲಿಯೇ ನಾನು ೧೯೩೭ರಲ್ಲಿ ಸ್ವ- ದೇಶಕ್ಕೆ ಮರಳಿದೆ. ಗೆ. ಮುಗಳಿಯವರೂ ನಾನೂ ಕೂಡಿ ಜೀವನದ ಆ ಪರಿಗೆ ದನಿಕೊಡುವ ಒಂದು ಕವನಸಂಗ್ರಹವನ್ನು ಪ್ರಕಟಿಸ ಬೇಕೆಂದು ಮಾತನಾಡಿಕೊಂಡೆವು. ಆದರೆ ಬೇರೆ ಅನೇಕ ಯೋಜನೆ

ಗಳಲ್ಲಿ ಈ ಯೋಜನೆಯು ಮುಂದೆ ಬಿದ್ದಿತು. ಆ ವೇಳೆಗೆ ಒಂದು ವರ್ಷದ ಅವಧಿಯಲ್ಲಿ ಬರೆದ ಕವನಗಳನ್ನೆಲ್ಲ 'ಅಭ್ಯುದಯ' ಎಂಬ ಭಾಗದಲ್ಲಿ ಸೇರಿಸಿದ್ದೇನೆ. 'ಅಭ್ಯುದಯ' ಎಂಬ ಶಬ್ದದ ವಿಶಿಷ್ಟ ಪ್ರಯೋಗದ ಪರಿಚಯ ಹೈದ್ರಾಬಾದಿಗೆ ಬಂದ ಮೇಲೆ ನನಗಾಯ್ತು.

ಈ ಸಂಗ್ರಹದಲ್ಲಿಯ ಎರಡನೆಯ ಭಾಗವು ಅಷ್ಟಷಟ್ಪದಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಆರೇಳನ್ನು ಬಿಟ್ಟು ಉಳಿದವುಗಳೆಲ್ಲ ಹನ್ನೊಂದು ವರ್ಷಗಳ ಹಿಂದೆಯೇ ರಚಿತವಾಗಿವೆ. ಪುಣೆಯಲ್ಲಿ ಬೇಂದ್ರೆಯವರೂ ನಾನೂ ಇದ್ದಾಗ ರಜೆಯ ದಿನಗಳಲ್ಲಿ ಒಂದೊಂದು ಷಟ್ಪದಿಯನ್ನು ಬರೆದು ಒಬ್ಬರಿಗೊಬ್ಬರು ಓದಿ ತೋರಿಸುತ್ತಿದ್ದೆವು. ಅವರ ಷಟ್ಪದಿಗಳು <u>ಉಯ್ಯಾಲೆ</u>ಯಲ್ಲಿ ಪ್ರಕಟವಾಗಿವೆ. ನನ್ನವು ಇಲ್ಲಿ ಇದೀಗ ಹೊರಗೆ ಬಂದಿವೆ.

'ಅಷ್ಟಷಟ್ಪದಿ' ಎಂಬ ಹೆಸರು ಈ ಕವನಪ್ರಕಾರಕ್ಕೆ ಎಷ್ಟರ ಮಟ್ಟಿಗೆ ಉಚಿತವೆಂಬುದು ವಿಚಾರಾಸ್ಪದವಾಗಿದೆ. ಒಂದು 'ಸುನೀತ' ದಲ್ಲಿ ಎರಡು ವಿಚಾರತರಂಗಗಳಿರುವದು ವಾಡಿಕೆಯಷ್ಟೆ. ಒಮ್ಮೊಮ್ಮೆ ಈ ಎರಡನೆಯ ತರಂಗವು ಅಂತ್ಯಪ್ರಾಸವುಳ್ಳ ಕೊನೆಯ ದ್ವಿಪದಿಯಲ್ಲಿ ಮಾತ್ರ ಕಾಣಿಸಿಕೊಳ್ಳಬಹುದು. ಹೀಗಿದ್ದಾಗ 'ಚೌದಶಪದಿ'ಯಂತೆ 'ಅಷ್ಟಷಟ್ಪದಿ'ಯೂ ಅಷ್ಟೊಂದು ಉಚಿತವಾದ ಹೆಸರಾಗಲಾರದು. Sonnet ಇದರ ತದ್ಭವವನ್ನು 'ಸುನೀತ' ಎಂದಾಗಿಸಿ ಅದನ್ನೇ ಏಕೆ ಬಳಿಸಬಾರದು? ಮರಾಠಿಯಲ್ಲಿ ಹೀಗೆ ಮಾಡಿದ್ದುಂಟು. ಆದರೂ ನಮ್ಮ ಹಿಂದಿನ ಛಂದಸ್ಸಿನ ನಾಮಾವಲಿಯ ಪರಂಪರೆಯ ಗುರುತು 'ಅಷ್ಟಷಟ್ಪದಿ'ಯಲ್ಲಿ ಇದ್ದ ಕಾರಣ ಅದನ್ನೇ ನಾನು ಉಪಯೋಗಿಸಿದ್ದೇನೆ.

'Sonnet' ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿತೋ ಆ ಭಾಷೆಯ ಕವಿಗಳು ತಮ್ಮ ಸುನೀತಗಳನ್ನು ಅಲಂಕರಿಸಲು ರಚಿಸಿದ ಬೇರೆ ಬೇರೆ ಪ್ರಾಸ-ಮಾಲಿಕೆಗಳ ರಚನೆಗಳನ್ನು ಕನ್ನಡಕ್ಕೆ ತಿರುಗಿಸಲು ಈ ಸುನೀತಗಳಲ್ಲಿ ಹವಣಿಸಿದ್ದೇನೆ. ಇವೆಲ್ಲವುಗಳಲ್ಲಿ

ಇಂಗ್ಲೀಷಿನಂತೆ ಕನ್ನಡಕ್ಕೂ ಎರಡೇ ಪ್ರಾಸ-ಬಂಧಗಳು ಹೆಚ್ಚು ಹಿಡಿಯುವಂತೆ ಕಾಣುತ್ತದೆ :

೧. ಅ-ಆ-ಆ-ಅ; ಅ-ಆ-ಆ-ಅ; ಇ-ಈ-ಉ; ಇ-ಈ-ಉ.

೨. ಅ-ಆ-ಅ-ಆ; ಇ-ಈ-ಇ-ಈ; ಉ-ಊ-ಉ-ಊ; ಎ-ಎ.

ಮೊದಲನೆಯದರಲ್ಲಿ ಕೆಳಗೆ ಕಾಣಿಸಿದ ವಿಧಾನವು ಇನ್ನೂ ಹೆಚ್ಚಾಗಿ ಕನ್ನಡಕ್ಕೆ ಹೊಂದಿಕೊಳ್ಳುವಂತೆ ತೋರುತ್ತದೆ :

ಅ-ಆ-ಆ-ಅ; ಇ-ಈ-ಈ-ಇ; ಉ-ಊ-ಎ; ಉ-ಊ-ಎ.

ಮೊದಲನೆಯ ಹನ್ನೊಂದು ಅಷ್ಟಷಟ್ಪದಿಗಳಲ್ಲಿ ವ್ಯಕ್ತಿಚಿತ್ರಗಳೂ ಕಲ್ಪನಾಚಿತ್ರಗಳೂ ಇವೆ ಹನ್ನೆರಡರಿಂದ ಇಪ್ಪತ್ತುನಾಲ್ಕರ ವರೆಗಿನ ಅಷ್ಟಷಟ್ಪದಿಗಳು ರೂಪಕ - ಸುನೀತಗಳು, ಇಪ್ಪತ್ತೈದರಿಂದ ಮೂವತ್ತುನಾಲ್ಕರ ವರೆಗಿನ ಸುನೀತಗಳು ಮಾನವ-ಸ್ವಭಾವದ ಕೆಲವೊಂದು ನಿರಂತರ ಪ್ರಕಾರಗಳನ್ನು ಅರಳಿಸಿ ತೋರಿಸುತ್ತವೆ. 'ಗೊಂಬೆಯಾಟ'ದಿಂದ 'ಕೊಳಲಿ'ನ ವರೆಗೆ ಸನ್ನಿವೇಶ-ಸುನೀತಗಳನ್ನು ಕಾಣಬಹುದು. 'ತೋಳ'ದಿಂದ 'ನವ್ಯ ಸಾಹಿತಿ'ಯ ವರೆಗೆ ವಿಡಂಬನ-ಹಾಸ-ಪರಿಹಾಸಗಳ ಮೋಡಿಯಿದೆ. 'ನವ್ಯ ಸಾಹಿತಿ'ಯಿಂದ 'ಉತ್ತರ'ದ ವರೆಗಿನ ಅಷ್ಟಷಟ್ಪದಿಗಳು ಬಹುತರವಾಗಿ ದೃಶ್ಯಾತ್ಮಕ ಇಲ್ಲವೆ ಸಂಭಾಷಣ-ಸುನೀತಗಳಾಗಿವೆ. 'ಕನಸು-ನನಸಿ'ನಿಂದ ಕೊನೆಯತನಕ ವಿವಿಧ ವಿಷಯಗಳನ್ನು ಮುಸುಕುವ ಭಾವನಾ ಲಹರಿಗಳ (moods) ನಿರೂಪಣೆಯಿದೆ.

೧೯, ಮಾರೆಡ್ಡಿಪಲ್ಲಿ, ಸಿಕಂದ್ರಾಬಾದು
೨೩—೧೧—೧೯೪೫

—ವಿನಾಯಕ

# ಪ್ರಕಾಶಕರ ಮಾತು

ನಮ್ಮ ಕರ್ನಾಟಕ ಸಂಘದ ಪ್ರಕಟನ ವಿಭಾಗವನ್ನು ಶ್ರೀ ಗೋಕಾಕರ ಕವಿತಾ ಸಂಗ್ರಹದೊಡನೆ ಪ್ರಾರಂಭಿಸುವ ಅವಕಾಶ ದೊರೆತದ್ದು ನಮ್ಮ ಸೌಭಾಗ್ಯವೆಂದೇ ಹೇಳಬೇಕು. ಲಬ್ಧಪ್ರತಿಷ್ಠ ಕವಿಗಳಾದ ಇವರನ್ನು ಓದುಗರಿಗೆ ಪರಿಚಯ ಮಾಡಿಕೊಡಬೇಕಾದ ಅವಶ್ಯಕತೆಯೇ ಇಲ್ಲ. ಕವಿಗಳಾಗಿ, ಲೇಖಕರಾಗಿ, ಕಾದಂಬರಿಕಾರರಾಗಿ ಮತ್ತು ಶಿಕ್ಷಣಜ್ಞರಾಗಿ ಇವರು ಕರ್ನಾಟಕಕ್ಕೆ ಚಿರಪರಿಚಿತರಾಗಿದ್ದಾರೆ. ನಮ್ಮ ಎಳೆಯ ಸಂಘಕ್ಕೆ ತಮ್ಮ ಕವಿತಾ ಸಂಗ್ರಹವನ್ನು ಪ್ರಕಟಿಸಲು ಅನುಮತಿಯಿತ್ತು ಅವರು ಉಪಕಾರ ಮಾಡಿದ್ದಾರೆ.

ಈ ಸಂಗ್ರಹದಲ್ಲಿನ ಕವಿತೆಗಳ ಮತ್ತು ಅವುಗಳ ಲಕ್ಷಣಾದಿಗಳ ಬಗೆಗೆ ನಾವೇನೂ ಹೇಳತಕ್ಕದ್ದಿಲ್ಲ. ಅದನ್ನು ಕುರಿತು ಕವಿಗಳೂ ಶ್ರೀ ವಿ. ಸೀ. ಯವರೂ ತಮ್ಮ ಅರಿಕೆ ಒಡನುಡಿಗಳಲ್ಲಿ ಸಾಕಷ್ಟು ಚರ್ಚಿಸಿದ್ದಾರೆ ಅಷ್ಟ ಷಟ್ಪದಿ ಛಂದೋರೂಪವನ್ನು ದೊಡ್ಡ ಪ್ರಮಾಣದಲ್ಲಿ ಪ್ರಯೋಗ ಮಾಡಿದ ಕೆಲವೇ ಕನ್ನಡ ಕವಿಗಳಲ್ಲಿ ಶ್ರೀ ಗೋಕಾಕರೊಬ್ಬರು. ಅವರ ಈ ಪ್ರಯೋಗಗಳು ಈ ಚೈತನ್ಯಪೂರ್ಣ ಕಾವ್ಯರೂಪವನ್ನು ಹೆಚ್ಚು ಜನಪ್ರಿಯವಾಗಿ ಮಾಡಲು ಸಮರ್ಥವಾಗುವವೆಂದು ಭರವಸೆಯುಂಟು.

ಕೊನೆಯದಾಗಿ, ಈ ಪುಸ್ತಕವನ್ನು ಪ್ರಕಟಿಸುವ ಅವಕಾಶವಿತ್ತುದಕ್ಕಾಗಿ ಶ್ರೀ ಗೋಕಾಕರಿಗೂ, ಮುನ್ನುಡಿಕಾರರಾದ ಶ್ರೀ ವಿ. ಸೀ. ಅವರಿಗೂ, ಅಚ್ಚಿನ ಪ್ರತಿ ತಿದ್ದುವುದರಲ್ಲಿ ನೆರವಾದ ನರೇಗಲ್ ಪ್ರಲ್ಹಾದರಾವ ಅವರಿಗೂ ಮಂಗಳೂರ ಗೋವಿಂದರಾವ ಅವರಿಗೂ ದೇಸಾಯಿ ದತ್ತಮೂರ್ತಿಯವರಿಗೂ, ಮುದ್ದಾಗಿ ಅಚ್ಚುಮಾಡಿದ ಸಂಯುಕ್ತ ಕರ್ನಾಟಕದ ಮುದ್ರಣಾಲಯದ ವ್ಯವಸ್ಥಾಪಕರಿಗೂ, ಮಾರಾಟದ ಪೂರ್ಣಾಧಿಕಾರ ಪಡೆದ ಶ್ರೀ. ಬಿ. ಜಿ. ಚಿಮ್ಮಲಗಿಯವರಿಗೂ ಸಂಸ್ಥೆ ಋಣಿಯಾಗಿದೆ.

ಈ ಗ್ರಂಥವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುವರೆಂದೂ ಆ ಮೂಲಕ ನಮ್ಮ ಮುಂದಿನ ಪ್ರಕಟನೆಗಳಿಗೆ ದಾರಿಮಾಡಿಕೊಡುವರೆಂದೂ ಹಾರೈಸುತ್ತೇನೆ.

ಕೊಪ್ಪಳ<br>
ಯುಗಾದಿ ಪ್ರತಿಪದೆ<br>
೩–೪–೧೯೪೬

**—ಜನಾರ್ದನರಾವ ವಕೀಲ**<br>
ಅಧ್ಯಕ್ಷ, ಕರ್ನಾಟಕ ಸಂಘ

# ಪರಿವಿಡಿ


| ಅಭ್ಯುದಯ : | | ಪುಟ |
|---|---|---|
| ೧ | ಭೋಂಗನಾದ | ೧ |
| ೨ | ನಮಸ್ತೇ ! | ೨ |
| ೩ | ಬಣ್ಣದ ಚಿಟ್ಟೆ | ೩ |
| ೪ | ಗಿಳಿವಿಂಡು | ೪ |
| ೫ | ಗುಬ್ಬಿಮರಿ | ೭ |
| ೬ | ಬೇಡತಿ | ೧೦ |
| ೭ | ಕೃಪಣರ ಬಾಳಿಕೆ | ೧೩ |
| ೮ | ಬೆಡಗಿ | ೧೪ |
| ೯ | ಚಂದ್ರಗ್ರಹಣ | ೧೭ |
| ೧೦ | ಕ್ರಾಂತಿದರ್ಶಿ | ೨೦ |
| ೧೧ | ಅಭ್ಯುದಯ | ೨೨ |
| ೧೨ | ಗೆಲುವು | ೨೫ |

| ಅಷ್ಟಷಟ್ಪದಿಗಳು : | | |
|---|---|---|
| ೧ | ವಿಶ್ವಾಮಿತ್ರ | ೩೧ |
| ೨ | ದಮಯಂತಿ | ೩೨ |
| ೩ | ಮಾಸತಿ | ೩೩ |
| ೪ | ಮಹಾಪುರುಷ, ಮಹಾವನಿತೆ | ೩೪ |
| ೫ | ಅಶ್ವಾರೋಹಿ | ೩೫ |
| ೬ | ಶೆಲ್ಲಿ | ೩೬ |
| ೭ | ಕನ್ನಡ ಕಾವ್ಯದ ಅಭಿಮನ್ಯು | ೩೭ |
| ೮ | ತ್ಯಾಪಣನಾಯಕ (೧) | ೩೮ |
| ೯ | ,, (೨) | ೩೯ |
| ೧೦ | ,, (೩) | ೪೦ |
| ೧೧ | ,, (೪) | ೪೧ |
| ೧೨ | ಮುಂಗಾರು | ೪೨ |
| ೧೩ | ಮರುಭೂಮಿ | ೪೩ |

| | | ಪುಟ |
|---|---|---|
| ೧೪ | ಚಂದ್ರೋದಯ | ೪೪ |
| ೧೫ | ಬೆಳುದಿಂಗಳು | ೪೫ |
| ೧೬ | ರೋಹಿಣಿ | ೪೬ |
| ೧೭ | ಮುದಿಯಾನೆ | ೪೭ |
| ೧೮ | ಗರುಡಪಕ್ಷಿ | ೪೮ |
| ೧೯ | ರಾಜಹಂಸ | ೪೯ |
| ೨೦ | ಹಿತ್ತಲ ತುಳಸಿ | ೫೦ |
| ೨೧ | ರಾಮಲಿಂಗ ದೇವಾಲಯ | ೫೧ |
| ೨೨ | ಬೋಳಗುಮ್ಮಟ | ೫೨ |
| ೨೩ | ಶಿಲಾವೃಕ್ಷ | ೫೩ |
| ೨೪ | ಏಸಿಯ–ಯುರೋಪು | ೫೪ |
| ೨೫ | ಕಾದಲ | ೫೫ |
| ೨೬ | ಸೌಂದರ್ಯಾರಾಧಕ | ೫೬ |
| ೨೭ | ಕನ್ನಡಿಗನ ಹೃದಯಂದಾಗ | ೫೭ |
| ೨೮ | ಕಮ್ಮಟ | ೫೮ |
| ೨೯ | ಕವಿ | ೫೯ |
| ೩೦ | ಹುಟ್ಟುಗುರುಡ | ೬೦ |
| ೩೧ | ಆದರ್ಶವಾದಿ | ೬೧ |
| ೩೨ | ತಂದೆ | ೬೨ |
| ೩೩ | ಗೆಳೆಯ | ೬೩ |
| ೩೪ | ವಿದ್ವಾಂಸ | ೬೪ |
| ೩೫ | ಗೊಂಬೆಯಾಟ | ೬೫ |
| ೩೬ | ಚಲಚ್ಚಿತ್ರಮಂದಿರ | ೬೬ |
| ೩೭ | ಹೊಸೂರು | ೬೭ |
| ೩೮ | ನಾಗರಪಂಚಮಿ | ೬೮ |
| ೩೯ | ಕೊಳಲು | ೬೯ |
| ೪೦ | ತೋಳ | ೭೦ |
| ೪೧ | ಚರ್ಚಿಲ್ ವಿರೋಧಿಯ ಉದ್ಗಾರಗಳು | ೭೧ |
| ೪೨ | ಲಕ್ಷ್ಮೀಭಕ್ತ | ೭೨ |
| ೪೩ | ಕಾಮಿ | ೭೩ |
| ೪೪ | ಕಾಮುಕ | ೭೪ |
| ೪೫ | ಗೃಹಸ್ಥ | ೭೫ |

| | | |
|---|---|---|
| | | ಪುಟ |
| ೪೬ | ಜಂತು ; ವಿತಂತು | ೭೬ |
| ೪೭ | ಪ್ರಥಮ ಪ್ರಯತ್ನದ ಕವಿ | ೭೭ |
| ೪೮ | ವಿಮರ್ಶಕ, ೧೯೩೩ | ೭೮ |
| ೪೯ | ನವ್ಯಸಾಹಿತಿ | ೭೯ |
| ೫೦ | ಮದುವೆ | ೮೦ |
| ೫೧ | ಎರಡು ದನಿಗಳು | ೮೧ |
| ೫೨ | ಸೆರೆಯಾಳು ; ದಾರಿಹೋಕ | ೮೨ |
| ೫೩ | ಪ್ರಶ್ನೆ | ೮೩ |
| ೫೪ | ಉತ್ತರ | ೮೪ |
| ೫೫ | ಕನಸು—ನನಸು | ೮೫ |
| ೫೬ | ಸ್ತ್ರೀ | ೮೬ |
| ೫೭ | ನಲ್ಲ—ನಲ್ಲೆ | ೮೭ |
| ೫೮ | ಪ್ರೀತಿ | ೮೮ |
| ೫೯ | ಇಬ್ಬಗೆ | ೮೯ |
| ೬೦ | ರಿಂಗಣ | ೯೦ |
| ೬೧ | ಪ್ರಕೃತಿಯಲ್ಲಿಯ ಪುರುಷ | ೯೧ |
| ೬೨ | ಬಿನದ | ೯೨ |
| ೬೩ | ಎರಡು ಜ್ಯೋತಿಗಳು | ೯೩ |
| ೬೪ | ಧ್ಯೇಯ | ೯೪ |
| ೬೫ | ತಿರುಗಿ ಬಾ ! ಹೃದಯವೇ ! | ೯೫ |
| ೬೬ | ಪ್ರತೀಕ್ಷಣೆ | ೯೬ |
| ೬೭ | ಕರುಣೆ | ೯೭ |
| ೬೮ | ಅಹಮಹಮಿಕೆ | ೯೮ |
| ೬೯ | ದೈವ (೧) | ೯೯ |
| ೭೦ | ದೈವ (೨) | ೧೦೦ |
| ೭೧ | ದೈವ (೩) | ೧೦೧ |

# ಒಲುಮೆಯ ಮುಡಿಪು

ನನಗೆ ದಾರಿ ಕಾಣದಾಗ
ತಮ್ಮ ಹೆಮ್ಮರದ ನೆಳಲಿನಲ್ಲಿ ಆಸರವಿತ್ತ
ಮಾನ್ಯ ಸ್ನೇಹಿತರಾದ
**ಶ್ರೀ. ದೀಕ್ಷಿತ ನರಸಿಂಗರಾಯರಿಗೆ**

ಭಿನ್ನ ವೃತ್ತಿ, ಭಿನ್ನ ವಯವು,
ಆದರೇನಭಿನ್ನ
ಆತ್ಮದೃಷ್ಟಿ, ಜೀವದೊಲವು
ಅಂದು ನನ್ನ-ನಿನ್ನ

ಹೊಂದಿಸಿತ್ತು ಸಂಧಿಸಿತ್ತು
ಒಂದೆ ಹೃದಯರಾಗ
ನಲುಮೆಯಿಂದ ಬಂಧಿಸಿತ್ತು
ಒಂದೆ ಅಮೃತಯೋಗ

ಆ ಬೆಳಕೇ ಬಾಳ ಪಥದಿ
ಇಂದು – ಮುಂದು ಮೂಡಿದೆ;
ಮತ್ತೆ ಹೂಡಿ ನಿಂತ ರಥದಿ
ಉದಯರಾಗ ಹಾಡಿದೆ

— ವಿನಾಯಕ

# ಅಭ್ಯುದಯ

# ಭೋಂಗಾನಾದ

ಕೋಳಿ ಕೂಗಿ ನಸುಕನೆಚ್ಚರಿಸುವ ಮುನ್ನ,
ಹೊಂಗದಿರನೆದ್ದು ವಸುಧೆಯ ನೋಡಿ ನಗುವ ಮುನ್ನ,
ಹಗಲ ಮುಗಿಲುಗನಸಿನಲಿ ಬೆಂಗದಿರ ಮಾಯವಾಗುವ ಮುನ್ನ,
ನನ್ನ ಕಿಟಕಿಯ ಬಳಿ ರೆಂಬೆಯ ಮೇಲೆ ಕುಳಿತು
ಕೊಂಬು ಹಿಡಿದಿತ್ತು ಕೋಗಿಲೆಯೊಂದು

ನಿದ್ದೆ ತೊಲಗಿತು; ಕಿವಿ ಸೋತವು; ಮನಸ್ಸು ಹಾತೊರೆಯಿತು,
‘ ಕುಹೂ ಕುಹೂ ’ ಎಂದು ಗಾನದ ಮಳೆ ಸುರಿಸುವ ಸ್ವರವೇ
ಓಂಕಾರವಾಯ್ತು
ನನ್ನ ಬಾಳುವೆಯ ಕೋಯಿಲವ ಬೆಳಗಲು ಬಂದಿದೆಯೆಂದೆ
ಕೋಗಿಲವಿದು
ನನ್ನ ಜೀವದ ಹಕ್ಕಿ ಹಾರಿ ಪಡೆಯಲೆಳಸಿತು ಸಂದೇಶವನ್ನು.

‘ ಕುಹೂ ಕುಹೂ ’ ಎಂದು ಕೊಂಬು ಹಿಡಿದಿದ್ದ ಕೋಗಿಲೆಯ,–
ಭೋಂಕನೆದ್ದು ಭೌಂವ್ವೆಂದು ಬೆದರಿಸಿತು ನೋಡು
ಗಿರಣಿಯ ಭೋಂಗಾನಾದ!
ಸಮಾಧಿಭಂಗವಾಗಿ ಕೋಗಿಲೆಯು ಹಾರಿತ್ತು.
ಆಶಾಭಂಗವಾಗಿ ಜೀವವು ಮರಳಿತ್ತು.
ಸ್ವೈರಸ್ನಿನ ಮಾಯೆ ಜೀವಯುಗಲವನಗಲಿಸಿತ್ತಯ್ಯ!
ಅಗಲಿಸಿ ಬಂಧಿಸಿತ್ತು!

# ನಮಸ್ತೇ !

ಹೋಗಿ ಬರುವೆನು ನನ್ನ ಎಳೆಗನಸುಗಳೆ! ನಿಮ್ಮ
ತಳಿರ್ಗೆಂಪು ಹೂಗಂಪು ತಂಗಾಳಿ ಮುಗಿದು
ಸಮರವನು ಸಾರಿಹುದು ಅಮರ ಶಕ್ತಿಯದೊಂದು,
ಎದೆಮನವ ತಣಿಸಿರುವ ದಿನಗಳನೆ ಹುಗಿದು !
ನಿಂತಿರುವಡೆದುರಾಳಿಯಾಗಿ ನನಸಿನ ಕಹಿಯು,
ಪ್ರಾಣಗಳ ಗಂಟೆಯನು ಗಣಗಣನೆ ಬಡಿದು;
ಪಾಪಸಂಚಯವೆಲ್ಲವಾಗಿ ಕೋಪಿಸಿದಹಿಯು
ಮಲೆತು ನಿಂತಿಹುದೀಗ ಮುಗಿಲುದ್ದ ತಡೆದು :
ಸಾಕಿನ್ನು ಕನಸಿಗನ ದಿವ್ಯ ದೀವಟಿಗೆ !
ಸಾಕು ವಂದನೆಯಿನ್ನು ಒಲವೆಂಬ ನಟಿಗೆ !
ಹೋಗಿ ಬರುವೆನು ಕನಸೆ! ಹೋಗಿ ಬರುವೆನು ಸೊಗಸೆ!
ನನ್ನ ಮರೆಯಲಿ ನಿನ್ನ ಕಂಗಳಾ ಬೊಗಸೆ !

# ಬಣ್ಣದ ಚಿಟ್ಟೆ

'Who breaks a butterfly upon a wheel ?'
—*Pope*

ಚಳಿಗೆ ಕಾತರಗೊಂಡು ರಾಜವೀಥಿಯಲಲೆದು
ನೆಲಕಂಟಿಗೊಂಡ ಬಣ್ಣದ ಚಿಟ್ಟೆಯ
ನಸುಕಿನಲಿ ನೋಡಿದೆನು,—ಬಂಡಿಗಾಲಿಯುದುರುಳಿ
ಕೊಲಲದನು ಮಾಡಿ ಮೂರಾಬಟ್ಟೆಯ.

ಬಣ್ಣಬಣ್ಣದ ಪಕ್ಕಗಳನು ಮಣ್ಣಾಗಿಸಿದ
ನರನವನ ಕಣ್ಣಾಲಿ,—ಬಂಡಿಗಾಲಿ !
ಇಳೆಯೆಂಬ ನಂದನದಿ ಪುಂಡಾಟವಾಡುವನು:
ಹುಲಿಯುಬ್ಬರವು ನಿಲಲು ಇವನ ಹೂಲಿ !

ಸ್ವಾರ್ಥವಿದ್ದರೆ ಕೊಲುವ, ಸ್ವಾರ್ಥವಿಲ್ಲದೆ ಕೊಲುವ
ಮೋಜಿಗೆನಲೊಮ್ಮೊಮ್ಮೆ ಬಂದು ಕೊಲುವ
ಮತ್ತೆ ದೇವರ ದಿವ್ಯ ಸೃಷ್ಟಿಯಲ್ಲಿವ ಮೇಲು
ಕೋಡು ಮೂಡಿಹವಿವಗೆ : ಇವನೆ ಚೆಲುವ.

# ಗಿಳಿವಿಂಡು

ಒಂದರಳಿ ಮರದಲ್ಲಿ
ಸಂಜೆಯಾಗಿರುವಲ್ಲಿ
ಒಂದೊಂದೆ ಮರಳುವವು ನಾಲುಗೊಂಡು :
ಒಂದೊಂದೆ ಮರಳುವವು
ಗಿಳಿಯೆಲ್ಲ ತೆರಳುವವು
ಗೂಡುಗೊಂಡಿಹ ಮರವನಿದಿರುಗೊಂಡು.

ಸಂಧ್ಯೆಯಿಂದೀಚೆಗೆನೆ
ಸ್ಮರಸೆಚ್ಚ ಶರಗಳೆನೆ
ತಾಗುತಿದೆ ಗಿಳಿಹಿಂಡು ಬಂದು ಮರಕೆ.
ಕೊಂಬೆಮೇಲೆಳೆಮರಿಯು
ನಂಬಿ ತಾಯಿಯನರಿಯು-
ತಿರೆ ಮಿಡಿಯಿತೆನ್ನೆದೆಯು ದೀನ ಸ್ವರಕೆ.

## ಅಭ್ಯುದಯ

ಮರ, ಸ್ಮರನ ಬೀಡೆಂದು—
ಗಿಳಿಗಾವಲಿಹುದೆಂದು—
ಗಳಹುತಿದ್ದನು ಹಳೆಯ ದಿನದ ಕವಿಯು :
ಅಂದಿನಾ ಬಾಳಿನಾ
ಇಂದಿನಾ ಹಾಳಿನಾ
ಗತಿ ಬೇರೆ ಶ್ರುತಿ ಬೇರೆ,—ಕಹಿಯು ಸವಿಯು.

ನೂರಾರು ಗಿಳಿಯು ಮನೆ-
ಯೊಳಗೊಂಡ ಮರದ ಕೊನೆ-
ಯೆಲೆಗಳಲಿ ತೂರಾಡಿ ಚೀರಾಡುತ
ಒಂದು ಗಿಳಿಯಿನ್ನೊಂದ-
ನಲ್ಲಿ ಛೀ ಥೂ ಎಂದು,
ತನ್ನದಿದು ತನಗೆಂದು ಹೋರಾಡುತ

ಬರೆ, ಕೇಳಿ ಚೀರ್ದನಿಯು,
ನೋಡಿಲ್ಲಿ! ಹೂಗಣೆಯು
ಹಬ್ಬವಿಹುದೆನಬಹುದೆ ಕಣ್ಣುಮುಚ್ಚಿ ?
ಒಂದು ಗಿಳಿಯಿನ್ನೊಂದ-
ನೆದುರಿಸಲು ಕಡುನೊಂದು
ಕದನವೆಸಗುತ ಕೊಕ್ಕೆ ಚುಚ್ಚಿ ಚುಚ್ಚಿ ?

ಒಂದೊಂದು ಗಿಳಿಗೊಂದು
ಮನೆಯಿಹುದು ಇದ್ದರೂ
ಗಿಳಿಯ ಗೊಂದಣವಿಂತು ಹಾರ್ವುದೇಕೆ ?
ಬೇರೊಂದು ಗಿಳಿಯ ಮನೆ-
ಯನ್ನು ಸೇರುತ ಕಲಹ-
ವೆಸಗಿ ತಿಳಿವಿಲ್ಲದಲೆ ಸಾರ್ವುದೇಕೆ ?

## ಅಭ್ಯುದಯ

ಎಲ್ಲರಿಗೆ ಸವಿಗನಸು,
ಎಲ್ಲರಿಗೆ ಸವಿತಿನಸು,
ಎಲ್ಲರಿಗದೆಲ್ಲವನು ಕೊಡುವಳಿಳೆಯು.
ಕಲ್ಲೆಡೆಯುವರು ಕೆಲರು
ಮೆಲ್ಲುವರದೆಲ್ಲವನು
ಇಲ್ಲಿಹುದು ನೋಡು ಅನ್ಯಾಯದೆಳೆಯು !

ಬಳಿಗೆ ಸುಳಿವಳು ರಾತ್ರಿ
ಇವಳೆ ಎಲ್ಲರ ಧಾತ್ರಿ !
ತಲೆಗೊಂದು ಮಂಚವನು ಮಲಗಲಿತ್ತು
ಹಗಲೆಲ್ಲ ಹಿರಿ ಪಯಣ,
ಮುಗಿಲುದ್ದ ಕುಡ್ಯಾಣ-
ಕಣಿಗೊಳಿಸುವಳು ಗಿಳಿಯ, ಕ್ರಾಂತಿವೆತ್ತು.

# ಗುಬ್ಬಿಮರಿ

ಮಬ್ಬುಗವಿದು ಕತ್ತಲಾಗೆ
ಎತ್ತ ಏನು ಕಾಣದಾಗೆ
ಮಳೆಯು ಹನಿಯು ಮೊತ್ತವಾಗಿ
ಬಂದು ಮೊಗವ ತಿವಿಯುತಿರಲು
ಸತ್ತು ಬಿದ್ದ ಬಂಟನಂತೆ
ಇಳೆಯು ಸುಮ್ಮನೊರಗುತಿರಲು
ಕತ್ತನೆತ್ತಿ ಅತ್ತ ಇತ್ತ
ನೋಡುತಿಹುದು ಗುಬ್ಬಿ ಎತ್ತ
ತನ್ನ ಪಯಣ ಬೆಳೆಸಿತೋ!
ತನ್ನ ಮನವ ಕಳಿಸಿತೋ!

ಮೇಲಿನಿಂದ ಬಿದ್ದ ಮರಿ!
ಸುತ್ತಲಿಹವು ನಾಯಿ ನರಿ!
ಭೋರೆಂದು ಗಾಳಿಮೊಳಗು!
ನೀರೆ ನೀರು ಮೇಲು ಕೆಳಗು!
ಎತ್ತಣಿಂದದೆತ್ತ ಪಯಣ?
ಕತ್ತನೆತ್ತಿ ಎದೆಯನೊತ್ತಿ
ಮರಿಯು ಹೆಜ್ಜೆಯೆಳೆಯಿತು.
ನಾಯುವಂಥ ಬೀಳುವಂಥ
ಮಳೆಯು ನೆಳೆತ ಸೆಳೆಯಿತು!

## ಅಭ್ಯುದಯ

ಮೋಡದಾಚೆ ತಮ್ಮ ಬೆಳಕ
ಬಯ್ತಿರಿಸಿತು ಅರಿಲ ಗಣವು.
ಮನೆಯೊಳೆಲ್ಲ ನಗೆಯ ಬೀರಿ
ನಲಿಯುತಿತ್ತು ಮರ್ತ್ಯಗಣವು.
ಮರಿಯು ಸಿಲ್ಲಲದರ ಸಾವು
ಬರಲದೊಂದೆ, ಒಂದೆ, ಕ್ಷಣವು !
ಕತ್ತನೆತ್ತಿ ಎದೆಯನೊತ್ತಿ
ಮರಿಯು ಹೆಜ್ಜೆಯೆಳೆಯಿತು.
ಸಾಯುವಂಥ ಬೀಳುವಂಥ
ಮಳೆಯ ನೆಳೆತ ನೆಳೆಯಿತು !

ರಕ್ತಪಾತದಿಂದ ಬಲಿತ
ರಾಜ್ಯಗಳಿಗೆ ಸಾವೆ ಇಲ್ಲ !
ವ್ಯರ್ಥವಿರುವನರ್ಥಗಳಾ
ಮೊನೆಗೆ ಕೊನೆಯೆ ಕೊನೆಯೆ ಇಲ್ಲ !
ನಿರಪರಾಧಿಯಾದ ಬಾಳು
ಏಕೊ ಏನೊ ! ಹಾಳು ಎಲ್ಲ !
ನಾಣ್ದೊರೆದನೊ ಲೋಕದೊಡೆಯ ?
ಸಣ್ಣಮರಿಯ ಕಾವರಿಲ್ಲ !
ಕತ್ತನೆತ್ತಿ ಎದೆಯನೊತ್ತಿ
ಮರಿಯು ಹೆಜ್ಜೆಯೆಳೆಯಿತು.
ಸಾಯುವಂಥ ಬೀಳುವಂಥ
ಮಳೆಯು ನೆಳೆತ ನೆಳೆಯಿತು

## ಅಭ್ಯುದಯ

ಎತ್ತಿಕೊಂಡೆ ಸಣ್ಣ ಮರಿಯ,
ಅದುವೆ ಕಿರಿಯ, ನಾನು ಹಿರಿಯ!
ಚಳಿಗೆ ಮರಿಯ ಮೈ ಮುದುಡಿತು
ಆದಕೆ ನನ್ನ ಬಗೆ ಕದಡಿತು
ಕೈಯ್ಯಲಿಟ್ಟುಕೊಂಡೆ ಇನ್ನ
ತೆರೆಯದಿರುವದದರ ಕಣ್ಣು!
ನೆಲಮುಗಿಲಿನ ನಡುವೆ, ಮರಿಯೆ!
ಕೂಡಿ ನಡೆವೆವೆಂದೆನು!
ಇದ್ದ ದೇವನೆಡೆಗೆ ಹೋಗಿ
ಮೊರೆಯಿಡೋಣವೆಂದೆನು.'

# ಬೇಡತಿ

ನದಿಯ ಮದುವೆಯ ಮಂಗ-
ಲೋತ್ಸವದ ಸಮಯವೆನೆ
ಹೂಬಿಸಿಲುಮಳೆಯಾಗ ಸುರಿಯುತಿತ್ತು.
‘ ಇರುವೆ ನಿಬ್ಬೆರಗಾಗಿ ’
ಎಂದು ಮುಗಿಲೆಂದಂತೆ
ನೀರದದ ಕಪ್ಪುಗೆರೆ ಸರಿಯುತಿತ್ತು.

## ಅಭ್ಯುದಯ

ನೊರಡಿಯೊಂದರ ಬಳಿಗೆ
ಸಾಗಿಹಳು ಬೇಡತಿಯು.
ಅವಳ ಬಣ್ಣವು ಸುತ್ತಿನೆರೆಯ ಕಪ್ಪು
ಬಡ ಜಾಲಿ ಮರದಂತೆ
ಬಡಕವಾಗಿಹ ದೇಹ
ಬಾಗಿಹುದು. ಯೌವ್ವನದಲಿಹುದು ಮುಪ್ಪು !

ಮುಳ್ಳುಗಂಟೆಯ ಮುರಿದು
ತುಂಡುಗಳ ಜೋಡಿಸುತ
ಬಂದಿಹಳು ಉರವಲದ ಹೊರೆಯ ಹೊತ್ತು.
ಹಾಯ್ದು ಹೊರೆಯೊಳಗಿಂದ
ಇದೊ ! ಸೀಳುಬಿದಿರೊಂದು
ಉಳಿದ ಉರವಲವದರ ಸುತ್ತುಮುತ್ತು

ತುಸು ತಡೆದು ನಡೆಯಲೆನೆ
ಹೊರೆಯ ಕೆಳಗಿಳಿಸಿಹಳು,
ಆ ಸೀಳು ಬಿದಿರನ್ನೆ ನಿಲಿಸಿಬಿಟ್ಟು
ಊರಿ ನಿಂತಿದೆ ಬಿದಿರು,
ಅವಳೆಡೆಗೆ ಬಾಗಿಹುದು
ತುದಿಗಿರುವ ಒಣಗಿಲದ ಕರಿಯ ಕಟ್ಟು

ಹೆಣ್ಣೆ ಹೊರೆಯಾಗಿಹುದೊ ?
ಹೊರೆಯೆ ಹೆಣ್ಣಾಗಿಹುದೊ ?
ಒಂದಕೊಂದೊಲಿಯುವದ ನೋಡಿ ಕಣ್ಣು
ತಾನೆ ಮಂಕಾಗಿಹುದೊ ? •
ಹೆಣ್ಣಿರಲಿ ಹೊರೆಯಿರಲಿ,—
ಇವಕೆ ತುದಿಮೊದಲಹುದು ಕಾಡುಮಣ್ಣು.

## ಅಭ್ಯುದಯ

ಅಕ್ಕ ತಂಗಿಯರಂತೆ
ಹಾಸುಹೊಕ್ಕಾಗಿಹವು
ನೀತಿದಿರುಬದಿರೊಂದೆ ಬಟ್ಟೆಯಲ್ಲಿ.
ಎಲುಬು - ಪಲುಬಿನ ಕಟ್ಟು
ಇದರವದರದು ಗುಟ್ಟು.
ಏನಿಲ್ಲ ಯಾವುದರ ಹೊಟ್ಟೆಯಲ್ಲಿ!

ಬೇಡರಾಕೆಯ ಮುಂದೆ
ಕಾಡುಹೊರೆ ನಿಂದಿತ್ತು
ಕೇಳಿತ್ತು: ದಾರಿ ಕೊನೆ ಮುಟ್ಟಿತೆಲ್ಲಿ ?
ಒಂದು ಕ್ಷಣ ಮೌನದಲಿ
ಹೆಣ್ಣು ಪಡಿನುಡಿದಿತ್ತು :
'ಕೆಟ್ಟಿವಿಲ್ಲಿಯು! ನಾವು ಅಟ್ಟಿವಲ್ಲಿ!'

ಮರುಕ್ಷಣವೆ ಹೊರೆಯೆತ್ತಿ
ಮುಂದೆ ಸಾಗಿದಳಾಕೆ
ದೂರ ತನ್ನವರ ಗುಡಿಸಿಲವ ಕಂಡು
ಮೊರಡಿಯೊಂದರ ಬಳಿಗೆ
ನಡೆದಿಹಳು ಬೇಡತಿಯು
ಉರವಲದ ಕಿರಿಹೊರೆಯ ಹೊತ್ತುಕೊಂಡು.

## ಕೃಪಣರ ಬಾಳು

ಮುತ್ತುಗಳ ಕಾವಣದಿ ಮುತ್ತಜ್ಜ ಕುಳಿತಿದ್ದ
ಬೇಡಿದೆನು ಮುತ್ತನೊಂದು.
‘ ಹೋದ ಮುತ್ತುಗಳೆಂತು ತಿರುಗಿ ಬರುವವು, ರಸಿಕ !
ಅವು ನನ್ನ ಪ್ರಾಣಬಿಂದು ! ’

ಹೂವರಳ್ದ ತೋಟದಲಿ ಹೂವರಸ ಕುಳಿತಿದ್ದ.
ಹಾತೊರೆದೆ ಹೂವಿಗೆಂದು.
‘ ಶೋಭೆಯಳಿಯದೆ ಹೇಳು, ಹೂವೆದೆಯ ಹಾದಿಗನೆ !
ಕೊಡಲಾರೆ ಹೂವನಿಂದು ! ’

ತಾರೆಗಳ ತಿಂತಿಣಿಯು ಮುಗಿಲಲ್ಲಿ ನೆರೆದಿತ್ತು
ಸಿಗಲೆಂದೆ ತಾರೆಯೊಂದು
ನೂರು ಕ್ರೋಶಗಳಾಚೆ ಬಿದ್ದು ಮಣ್ಣಾಗಿತ್ತು
ನಗುತಿರುವ ತಾರೆಯೊಂದು !

# ಬೆಡಗಿ

ಸುಡು ನಿನ್ನ ಸಿಂಗರವ,
ನಿನ್ನ ಸೊಗವ.
ಬಿಡು ನಿನ್ನ ಬೆಡಗ ಹಾ-
ಳಾಗಿಸಿತು ಜಗವ !
ಆಳಾಗಿಸಿತು ನೂರು
ದೇಹಗಳನು,
ತೊಳಲಾಡಿಸಿತ್ತೆನಿತೊ
ಗೇಹಗಳನು !
ನಿನ್ನ ಮುಖಮುಲು ಮುಖಪ
ಬಣ್ಣಿಸಿದ ಪೆಂಪು,—
ಕಳೆಯಲದು ಸಿಲ್ಲುವವು
ನೂರು ಸಂಪು !
ಓ ಸುವಾಸಿನಿ ! ನೀನು
ತೈಲಿಸಿದ ಕೇಶ,—
ಅದಕೆ ಬರಿದಾಯ್ತು ಜನ
ಶಂಕರಿಯ ಕೋಶ !
ಸುಡು ನಿನ್ನ ಸಿಂಗರವ,
ನಿನ್ನ ಸೊಗವ.
ಬಿಡು ನಿನ್ನ ಬೆಡಗ, ಹಾ-
ಳಾಗಿಸಿತು ಜಗವ !

ನಿನ್ನ ಧಮನಿಯುಲಿರುವ
ರಾಜರಕ್ತ
ಅನ್ಯಾಯಗಳ ತೀರ್ಥ-
ವೆಂದು ವ್ಯಕ್ತ

## ಅಭ್ಯುದಯ

ಕೆಲಸವಿಲ್ಲದೆ ರಾಣಿ-
ವಾಸದಲ್ಲಿ
ಕುಳಿತರಳಿಸಿದ ಮಂದ-
ಹಾಸದಲ್ಲಿ
ನಿನ್ನ ಕುಲಕೋಟಿಯಾ
ಹೆಂಗಳೆಯರು
ಕಂಡಿಹರು ಸ್ವರ್ಗವನು,—
ನೆಲಕಿಳಿಯರು !
ನೂರು ಹೆಣ್ಣಿನ ಹೆಣ್ಣು-
ತನವೆ ಹೋಗಿ,—
ಕೂಲಿ ಹೆಣ್ಣಾಗಿ ಬರಿ
ಯಂತ್ರವಾಗಿ
ನಾಯುತಿರೆ ಕೂಡಿಟ್ಟ
ಹಣದ ಗಂಟು,—
ಅದರಿಂದ ನಿನ್ನ ಚೆಲು
ವಿಕೆಗೆ ಉಂಟು,—
ನರಕದಾ ಮುಗಿಲಿಂದ
ಬಂದ ಮಿಂಚು,—
ನಿನ್ನ ಕೆಂದುಟಿಯ ನಗೆ,
ರಕ್ಕಸರ ಹೊಂಚು !
ಸುಡು ನಿನ್ನ ಸಿಂಗರವ,
ನಿನ್ನ ಸೊಗವ.
ಬಿಡು ನಿನ್ನ ಬೆಡಗ ಹಾ-
ಳಾಗಿಸಿತು ಜಗವ.

ದಿವ್ಯ ಸುಂದರಿಯಹುದು
ನೀನು ಬಾಲೆ.

## ಅಭ್ಯುದಯ

ಸೆರೆಗೊಳುವ ಸೆರೆ ನೀನು;
ಹೆಂಡ. ಹಾಲೆ ?
ನಿತ್ಯ ಸಂಕಟ ಪಡಲು
ನೂರು ನರಪ್ರಾಣಿ,—
ಮೆರೆಯಲೆಳಸುವಿಯಲ್ಲ,
ಆಗಿ ಇಂದ್ರಾಣಿ ?
ಬಾ ಇತ್ತ ಶಪಿಸುತ್ತ
ನಿನ್ನ ಕುಲಕೋಟಿ,—
ಬಾ ಇತ್ತ ಸಂಪದದ
ಸೆರೆಮನೆಯ ದಾಟಿ !
ನೂರು ಗುಡಿಸಲಗಳಲಿ
ಮೀರಿ ನರಳಾಟ,—
ಕಾಸಿಲ್ಲ—ಈಸಿಲ್ಲ-
ವೆಂದು ಹೊರಳಾಟ !
ದೇವ ಕೊಟ್ಟಿಹ ಚೆಲುವ-
ದೊಂದೆ ಸಾಕು.
ಚೆಲು ಗುಲಾಬಿಗೆ ಬಣ್ಣ-
ನೆಯುದೇಕೆ ಬೇಕು ?
ಮಿಸಲಿಡು ಆ ಹಣವ
ಕಾಸಿಲ್ಲದರಿಗೆ.
ಇಳಿಯಾಣ್ಮಾಗೀವುದಿದೆ, —
ಇದೆ ಸುಂಕ, ತೆರಿಗೆ !
ಸುಡು ನಿನ್ನ ಸಿಂಗರವ,
ನಿನ್ನ ನೊಗವ.
ಬಿಡು ನಿನ್ನ ಬೆಡಗ, ಹಾ-
ಳಾಗಿಸಿತು ಜಗವ.

# ಚಂದ್ರಗ್ರಹಣ

**ಮೇಳ**

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರಗ್ರಹಣ
ಇಂದೆ ಚಂದ್ರಗ್ರಹಣೋ !
ಇಂದೆ ಚಂದ್ರಗ್ರಹಣ.

**ಮೇಳದ ಹಿರಿಯ**

ಕೆನೆವೆಳಕಿನ ಸೊನೆಯ ಚಂದ್ರ-
ನಾದನು ಕಪ್ಪಿಡಿದ ಲಾಂದ್ರ
ಪವನವಾಯ್ತು ತಾಮ್ರದ ಪೈ
ಕತ್ತಲೆಯೇ ಎತ್ತಿದ ಕೈ.
ಮರುಳೆಂದವು . ಸೈ, ಸೈ, ಸೈ !
ದೆವ್ವ ಕುಣಿಯೆ : ಹೈ, ಹೈ, ಹೈ !
ತಬ್ಬಿಬ್ಬಾದವು ತಾರೆ
ಮಬ್ಬಿಡಿಯಲು ಹೌಹಾರೆ !

ಮೇಳ

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರಗ್ರಹಣ.
ಇಂದೆ ಚಂದ್ರಗ್ರಹಣೋ !
ಇಂದೆ ಚಂದ್ರಗ್ರಹಣ.

ಮೇಳದ ಹಿರಿಯ

ತುಂಬುದೆರೆಯ ತಂಬುಲವನು
ತುಂಬ ಮೆಲುವ ಹಂಬಲವನು
ತಳೆದರಂತೆ ರಾಹು ಕೇತು :
ನೋಡಿದೆಂಥ ಹೇತು, ಬೇತು !
ಕಾಡಿನಲ್ಲಿ ಕಗ್ಗತ್ತಲೆ,
ಮನೆ ಮನೆಯಲಿ ಮಡಿಬತ್ತಲೆ !
ಬಂದಿತಾವುದೋ ವಿಪತ್ತು
ಮಂದಿ ತಿಳಿಯರದರ ಗತ್ತು.

ಮೇಳ

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರಗ್ರಹಣ.
ಇಂದೆ ಚಂದ್ರಗ್ರಹಣೋ !
ಇಂದೆ ಚಂದ್ರಗ್ರಹಣ.

ಮೇಳದ ಹಿರಿಯ

ರಾಹು ಕೇತು ರಗಳೆ, ಕಂತೆ;
ಅಂಜಿಕೆಗಳ ಬಂಜೆ ಸಂತೆ.
ಮಣ್ಣಿಗರಿಗೆ ಹೊಳೆದಿರುವುದು,—

ಅಭ್ಯುದಯ

ಸತ್ಯಕಥೆಯು ತಿಳಿದಿರುವುದು :
ಹೊಂಗದಿರನಿಗೆದುರಾಗಿ
ಭೂಮಿಯು ಬರುತಿರಲಾಗಿ
ಬೀಳುತಿರುವ ಕಪ್ಪುನೆಳಲು—
ಅದುವೆ ಚಂದ್ರನಳಲು-ಬಳಲು
ಹುಣ್ಣಿಮೆಯನೆ ನುಂಗುವಂಥ
ರಾಹು ನಾವು. ನಮ್ಮ ಪಂಥ
ಪಂಥಾನವ ಸುತ್ತಿದೆ,
ಮುದ್ದು ಮುಗಿಲ ಮುತ್ತಿದೆ :
ಭೂಮಂಡಲ ಕೆಣಕುತಿದೆ,
ಗ್ರಹಮಂಡಲ ಹೆಣಗುತಿದೆ :
ಸಾಯ್ವೆಳಕದು ಮಿಣುಕುತಿದೆ:—

ಮೇಳ

ಒಂದು ಗ್ರಹಕೆ ಬಂತು ಗ್ರಹಣ,
ಇಂದೆ ಚಂದ್ರಗ್ರಹಣ
ಉಳಿದವಕೂ ತುಂಬಿದೆ ದಿನ.
ನಾಳೆ ಸೂರ್ಯಗ್ರಹಣ.

ಮೇಳದ ಹಿರಿಯು

ದೇ ದಾನ್ ! ಸುಟೇ ಗ್ರಾನ್ !
ದೇ ದಾನ್ ! ಸುಟೇ ಗ್ರಾನ್ !

# ಕ್ರಾಂತಿದರ್ಶಿ

ಉಧೋ ! ಉಧೋ ! ಏಳಿರೆನ್ನು !
ಇದೋ ! ಇದೋ ! ಎದ್ದೆವೆನ್ನು !
ಎಲ್ಲು ಇಲ್ಲ ದೇವರು.
ನಾವೆ ನಮ್ಮ ದೇವರು.
ತಾಳಬೇಕು,—ಬಾಳಲು.
ಸಹಿಸಬೇಕು,—ಆಳಲು.

ಬಿನ್ನವಿಸಲು,—ಕೊಡುವದಿಲ್ಲ !
ಗರ್ಜಿಸೆ,—ಕೊಡದಿರುವದಿಲ್ಲ !
ಹಣಕಾಸೆಳೆ ಬೈಲಿಗೆ.
ಕೈಯ್ಯ ಹಚ್ಚು ಥೈಲಿಗೆ.
ಹಣದ ಮೇಲೆ ನಿಂತ ಕಲೆ,—
ಮರೆ ಮೋಸದಿ ಒಗೆದ ಬಲೆ.
ಹಣವು ತಂದ ಚೆಲುವು,—ಹೆಣ !
ದೇಶಕಿರುವ ದಾಸ್ಯವ್ರಣ,
ಸುಟ್ಟುಬಿಡೂ ! ಬಿಡೂ ! ಬಿಡು !
ಮುಂದೆ ಮುಂದೆ ಹೆಜ್ಜೆಯಿಡು !

## ಅಭ್ಯುದಯ

ಆಳು ನಾವು—ಜೋಳದಾಳು,
ಕುಡಿವೆವು ಕಣ್ಣೀರ ಕಾಳು,
ಧರ್ಮವೆ ಮನೆತುಂಬ ಹೊಗೆ,
ಶ್ರದ್ಧೆ ನಮ್ಮ ಹುಗಿವ ಹಗೆ,
ಹಿಂದಿರುವದು ಹಿಂದೆಯಿತ್ತು
ಇಂದು ಮಾತ್ರ ಸಿಡಿಲು ಬಿತ್ತು.
ಊದು ಕಹಳೆ, ಹೊಡೆ ನಗಾರಿ,—
ನಾಳೆ ಬಾಳ್ವೆಯೆಂದು ಸಾರಿ !

ಮನೆ ಮನೆಯಲಿ ಹೊನ್ನು ನಾಳೆ.
ಮನೆಮನೆಯಲಿ ಚೆಲುವು ನಾಳೆ.
ನಾಳೆ ವಿದ್ಯೆ, ನಾಳೆ ಬೆಳಗು.
ನಾಳೆ ಜ್ಯೋತಿ ಹೊರಗು ಒಳಗು.
ಇಂದು ಬಾಳಿದೆಲ್ಲ ಹಾಳು.
ತಿರುಗ ಮುರುಗ ಬರಿಯ ಗೋಳು.
ನಾಳನಾಳದಲ್ಲಿ ನಾಳೆ.
ತುಂಬಿ ಬರಲು,- ಬಹುದು ವೇಳೆ :
ಊದು ಕಹಳೆ ಹೊಡೆ ನಗಾರಿ,—
ನಾಳೆ ಬಾಳ್ವೆಯೆಂದು ಸಾರಿ !

# ಅಭ್ಯುದಯ

ಇಳೆಯನೆಲ್ಲ ತುಂಬಿನಿಂತು
ನಾಟ್ಯವಾಡುತಿರುವ ರೂಹೆ!
ಅಲ್ಲಿ—ಇಲ್ಲಿ ಎಲ್ಲೆಡೆಯಲಿ
ಇದ್ದ ನಿನ್ನ ನಿಲುಕದೂಹೆ!
ಮನವ ಸೆಳೆದುಕೊಳುವ ಶಕ್ತಿ!
ನಿನ್ನ ಮಿರುಗಮಿಂಚಿದೇನು?
ಬಣ್ಣ ಬಣ್ಣಗಳನು ತೋರ್ವ
ನಿನ್ನ ಸಹಜ ಸೃಷ್ಟಿಯೇನು?
ಬಂದ ಮಾವಿನಡಿಗೆ ನಿಂತು
ನಿನ್ನ ಚೆಲುವ ನೋಡಬಹುದು
ನಿನ್ನ ಲತೆಗಳೊಡನೆ ಕೂಡಿ
ಕೇಳ್ದ ವರವ ಪಡೆಯಬಹುದು
ಅಲ್ಲಿ ಇಲ್ಲಿ ನೋಡಿದಲ್ಲಿ
ಎಸೆಯುತಿಹುದು ನಿನ್ನ ಬಳ್ಳಿ!

ನಿಜ ಮನೋಜವಿಹ ವಿಶಾಲ
ದೃಷ್ಟಿಯೊಂದು ಕೊನರುತಿಹುದು.
ಬುದ್ಧಿಗಿರುವ ಕಣ್ಣಿನಲ್ಲಿ
ಮತ್ತೆ ಮತ್ತೆ ಹೊಳೆಯುತಿಹುದು.
ಬಿದ್ದು ನಿದ್ರೆಗೈವ ದಿನ್ನೆ
ಯಮುನ ಕೋಣವಾಗಬಹುದು.
ಒಳಗೆ ಸುಳಿವ ಮರ್ತ್ಯಕನ್ಯೆ

ಸ್ವರ್ಲಲನೆಯೆ ಆಗಬಹುದು.
ಸನಿಯಕಿರುವ ಗೆಳೆಯನೆದೆಯು
ಅಲ್ಲವೇನು ಸ್ಪರ್ಶಮಣಿಯು ?
ತಿಳಿದು ನೋಡೆ,—ಭುವನವಿದು
ಅಲ್ಲವೇನು ಮುದ್ದುಕಣಿಯು !
ಅಲ್ಲಿ—ಇಲ್ಲಿ—ನೋಡಿದಲ್ಲಿ
ಎಸೆಯುತಿಹುದು ನಿನ್ನ ಬಳ್ಳಿ !

ಆದರಿಂಥ ದೃಷ್ಟಿ ಕಳೆದು
ಹುಟ್ಟುಗುರುಡ ಕಂಗಳೇಕೆ ?
ದಿವ್ಯಧಾಮುವನ್ನು ಕಂಡ
ಮನವ, ಮಾಯೆ ಸೆಳೆಯಬೇಕೆ ?
ಮತ್ತೆ ನಿಶೆಯು ಕವಿದು ಹಿರಿಯ
ನೋಟವಿಲ್ಲದಾಗುತಿಹುದು
ನೋಡಿದತ್ತ ಕಾಳ್ಗತ್ತಲೆ
ಮೇರೆವರಿದು ಘೂರ್ಣಿಸುವದು
ಮತ್ತೆ ಕಾಮ-ಮೋಹ ಬೆರಸಿ
ಸೃಜಿಸಿದ ಪುತ್ತಳಿಯು,—ಹೆಣ್ಣು.
ಪ್ರಕೃತಿಯತುಲ ಸೌಂದರ್ಯ-
ಕಿರುವ ಸ್ಫುರಣ,—ಬರಿಯ ಮಣ್ಣು
ಅಲ್ಲಿ—ಇಲ್ಲಿ—ನೋಡಿದಲ್ಲಿ
ಕಾಳರೂಪವೆಸೆವುದಿಲ್ಲಿ !

ಮಾನವಾಭ್ಯುದಯದ ದೇವಿ !
ನಿನ್ನ ಪ್ರೀತಿಗೆಂದು ಲಲ್ಲೆ-
ಯಿಂದ ಬುವಿಯ ಹಿರಿಯರಾಗರು

ಅಭ್ಯುದಯ

ತಮ್ಮ ಬಾಳ ತೊರೆಯಲಿಲ್ಲೆ '
ಆತ್ಮಯಜ್ಞವನ್ನೆ ಹೂಡಿ
ನಿನ್ನ ಹಸಿವ ಹಿಂಗಿಸಿದರು.
' ಏಕೆ ತೆರೆಯನೆತ್ತಲೊಲ್ಲೆ ? '
ಎಂದು ನಿನ್ನ ಹಂಗಿಸಿದರು
' ಮುಂದೆ ಬರುವ ವಂಶಕಿರಲಿ
ಶಾಂತಿ ಕಾಂತಿಯಮಿತವಾಗಿ.
ತಾಯೆ ! ರಜನಿ ಮುಗಿಯಲಿ 'ಂದು
ಪ್ರಾರ್ಥಿಸಿದರು ಪ್ರಾಣ ನೀಗಿ.
ಆದರೇನು ? ನೋಡಿದಲ್ಲಿ
ಕಾಳರೂಪವೆಸೆವುದಿಲ್ಲಿ !

ವ್ಯರ್ಥವವರ ತ್ಯಾಗ ಮತ್ತೆ
ನೀ ಕೇಳಲು ಬಲಿಯನಿಂದು !
ವ್ಯಕ್ತಿಯೊಳನುರಕ್ತಳೆನುವೆ.
ಇಡಿ ಕುಲಕೀ ಭಾಗ್ಯವೆಂದು '
ಆಡಿದಾಟವನ್ನೆ ಆಡಿ
ಬರೆದುದನ್ನೆ ಬರೆಯುತಿರುವೆ.
ಒಂದೆ ಲಿಪಿಯ ನೀ ಪುನರಪಿ
ಬರೆಯುತಳಿಸಿ ಬರೆಯುತಿರುವೆ !
ಗೆದ್ದುದನ್ನೆ ಮತ್ತೆ ಗೆಲಲು
ಮುನ್ನಡೆಯುವರೇನು ? ತಾಯೆ !
ಇಹೆಯಾ ಮಾಯೆಯಂಕಿತದಲಿ ?
ನಿನ್ನೊಳಗಿದವಳು ಮಾಯೆ !
ಆದರೇನು ? ಬೆಳಕು, ನಿಶೆಯು,—
ಇದುವೆ ನಿನ್ನ ಗಮನದಿಶೆಯು !

# ಗೆಲುವು

೧

ನೋಡು ಗೆಳೆಯ ಶ್ರಾವಣವಿದು
ಹೊಸ ಹೊಂಚನು ಹಾಕುತಿದೆ
ಬಿತ್ತಿರುವುದ ಬೆಳೆಯಲೆಂದು
ಗಾಳಿಮಳೆಯು ಜೀಕುತಿದೆ.
ಅದಕಂತೆಯೆ ಎದೆಯುದ್ದಕೆ
ಹೊಲದ ನಿಲುವು ತೂಗುತಿದೆ
ಕಾರ್ಗಾಲದ ಹೊಸ ಹೊಂಚಿದು;
ಕಾಲಪುರುಷನೊಳಸಂಚಿದು :
ಬಾನಂಗಳಕೇಳ್ವುದೆನಲು
ಮುಗಿಲೆ ನೆಲಕೆ ಬಾಗುತಿದೆ !
ನೋಡು, ಗೆಳೆಯ ! ಶ್ರಾವಣವಿದು
ಹೊಸ ಹೊಂಚನು ಹಾಕುತಿದೆ.

ಅಭ್ಯುದಯ

೨

ಜಗದಲೆದ್ದ ಹೊಂಬೆಳಕಿಗೆ
ಕಾರ್ಗತ್ತಲೆ ಕೀಳುತಿದೆ.
ಬಂತೆ ಕ್ರಾಂತಿಯೆಂದು ಹಿಗ್ಗಿ
ಲೋಕವೆಲ್ಲ ಕೇಳುತಿದೆ.
ನಲಿದು ಸತ್ಯಪಥವ ತೋರಿ
ಋಷಿವೃಂದವು ಬಾಳುತಿದೆ
ಸ್ವಾತಂತ್ರ್ಯದ ಸವಿಯುಸಿರಿದು
ಸಮತೆ ಹೊತ್ತ ಹೊಂಬಸಿರಿದು.
ಜಗವು— ಬರುವುದನ್ನು ನೆನೆದು
ಬಂದಿಹುದನು ತಾಳುತಿದೆ
ಜಗದಲೆದ್ದ ಹೊಂಬೆಳಕಿಗೆ
ಕಾರ್ಗತ್ತಲೆ ಕೀಳುತಿದೆ.

೩

ಹೋಗಲಿ ಬಿಡು ನೆನೆವುದೇಕೆ
ಹಿಂದೆ ಬಂದ ಕೇಡನು !
ಅಳಿಗಾಲವೆ ಇದು ಕೊನೆಯೆ ?
ಮುಂದುವರಿಸು ಹಾಡನು !
ಇಂದಿಗಿಲ್ಲಿ ಕಟ್ಟಿಬಿಡುವ
ನಾಡ ಕಟ್ಟುಪಾಡನು !
ಇಂದಿನ ನುಡಿ ಗುಡುಗು ಸಿಡಿಲು
ಅದಕದೋ ! ಅವಿದ್ಯೆ ಮುಡಿಲು.
ನಾಡೆದೆ ಮಂಥಿಸುತ ತರುವ
ಚಂದ್ರನಂಥ ಕೋಡನು !
ಹೋಗಲಿ ಬಿಡು ನೆನೆವುದೇಕೆ
ಹಿಂದೆ ಬಂದ ಕೇಡನು !

೪

ನೋಡು ನನ್ನ ನಿನ್ನ ಜೀವ
ರೆಕ್ಕೆ ಬಲಿತು ಹಾರುತಿವೆ
ನಾಡಿನೊಲವ ನಾಡ ಗೆಲುವ
ಕೊರಲತುಂಬ ಸಾರುತಿವೆ.
ಉಜ್ಜೀವನದುದ್ಯಾಣದಿ
ತಮ್ಮನೆ ತಾವ್ ಮೀರುತಿವೆ :
ಇರಲಿದೆಮ್ಮ ಜೀವನ ·
ಆಗಲಿಂತು ಪಾವನ
ನೋಡು ! ದಿವ್ಯ ಭವ್ಯ ಶಕ್ತಿ
ಕಾಳನೊಡನೆ ಹೋರುತಿವೆ !
ಮತ್ತೆ ನನ್ನ ನಿನ್ನ ಜೀವ
ರೆಕ್ಕೆ ಬಲಿತು ಹಾರುತಿವೆ

# ಅಷ್ಟಷಟ್ಪದಿಗಳು

## ವಿಶ್ವಾಮಿತ್ರ

ಅರಸು ವಿಶ್ವಾಮಿತ್ರ ಮಾತುಗೆಲುವ ಮನೀಷೆ-
ಯಿಂದ ಕಾಡನು ಸೇರಿ ಮುನಿಯಾಗಬಯಸಿದನು.
ಜಯಲಕ್ಷ್ಮಿ ತನ್ನ ವಶವಿರಲೆಂದು ಸಹಿಸಿದನು
ನೂರು ಸಂಕಟಗಳನು. ಪೂರೈಸದಭಿಲಾಷೆ.
ಸ್ವರ್ಲೋಕದವರು ಕಳುಹಿಸಿದ ಮೇನಕೆಯಾಸೆ-
ಗಾಗಿ ಮತ್ತೆ ಪ್ರಪಂಚಭಾರವನು ವಹಿಸಿದನು
ಅರಸೆಂಬ ಹಂಬಲಕೆ ಮನಸೋತು ಸೃಜಿಸಿದನು
ಸೃಷ್ಟಿಯನು ಪ್ರತಿಯಾಗಿ ಒಂದು ಹಿರಿಯ ತಮಾಷೆ !

ತೊಲಗಲೀ ಮದವು ಕ್ಷತ್ರಿಯನಾದ ರಾಜರ್ಷಿ.
ಬಟ್ಟಬಯಲಾಗಿರಲು ಅವನ ಕೋಪಾಟೋಪ,
ಸತ್ಯಸಂಧರ ಹಿಡಿದು ಸತ್ಯದುರುಲನು ಹಾಕಿ
ಅವರ ಕೆಣಕುವ ರೀತಿ ಅವನಾದ ಬ್ರಹ್ಮರ್ಷಿ.
ಅಳುಕಿದವರಿಗೆ ತಪವ ದಾನಗೈದ ವಿವೇಕಿ,—
ಅವನ ನೆನವುಳಿವನಕ ಧರ್ಮಕೆಲ್ಲಿದೆ ಲೋಪ ?

# ದಮಯಂತಿ

ಜಯ ಜಯ ಜಯಂತಿ ನಿನಗಿರಲಿ ಓ ! ದಮಯಂತಿ !
ಎಲ್ಲರಿಗೆ ತಿಳಿದಿರಲಿ ! ಮೂಲೋಕ ಗಮನಿಸಲಿ,—
'ಮಾನವನ ನಲುಮೆಗೀ ಭೂತಲದಿ ಸಮನಿಸಲಿ
ನಾಕದೈಸಿರಿ' ಎಂಬ ಹಿರಿನುಡಿಯು. ಕುವದಂತಿ
ಹಿಂಗಲಿ ನಳರಾಯ ಹಾಕಿಟ್ಟ ಹಿರಿಪಂಕ್ತಿ
ಅಮರ ದೀವಿಗೆಯಾಗಿ ಬೆಳಗಲಿ ! ರಮಿಸಲಿ
ಪ್ರೀತಿ ಮಾನವತೆಯನು. ಜನತೆಯಿದನುಪಮಿಸಲಿ
ಅಮೃತವೆಂದೋಲಾಡಿ ! ಇಂತೊರೆದ ಗುಣವಂತಿ !

ಮೊದಲು ಬೇಟವ ನೀನು ಮನ್ನಿಸದಿರಲು ಸುರರು
ಕಡುಮುನಿದು ತಂದ ಕೋಟಲೆಗಳನು ಸ್ಥಿತಪ್ರಜ್ಞೆ-
ಯಾಗಿ ಸಹಿಸಿದೆ ದೇವಿ ! ಇಂದ್ರ-ವರುಣ-ಕುಬೇರ
ಬೆರಗುಗೊಂಡರು ತಾಳ್ಮೆಯೆದೆಗಾರಿಕೆಗೆ ನರರು
ನಲ್ಮೆಗಿಹ ಮಂಗಳವನರಿತಿಹರು. ಮಂದಾರ-
ದಂಥ ನಿನ್ನೀ ಮಹಿಮೆಯುಹುದನಂತದ ಸಂಜ್ಞೆ.

# ಮಾಸತಿ

ಹಣೆಯಲ್ಲಿ ಕುಂಕುಮದ ಬೊಟ್ಟು, ಮೈಯ್ಯಲ್ಲಿ ಬಹು
ಜಲಿಬಾಳ್ವ ಕೇಸರಿಯ ಬಟ್ಟೆ, ಕೈಯಲ್ಲಿ ಮನ-
ದನ್ನಗೆಸ ಹಿಡಿದ ಹೂಮಾಲೆ, ಮುಡಿಯಲ್ಲಿ ಬನ-
ಮಲ್ಲಿಗೆಯ ಹೆಣಿಕೆ, ಮನದಲ್ಲಿಣಿಕೆ ಈ ನೋವು
ಈಗ ಕಳೆಯುವುದೆಂದು ಬಂದಳಾ ಮಾಸತಿಯು
ಬಾಳುವೆಯ ಬನ್ನವನು ನುಂಗಿರುವ ಯಾತ್ರಿಕನ
ಮೈಮರೆತ ನೋಟವೆನೆ ಕಣ್ದೆರೆಯಲಾ ಗಗನ-
ದಲಿ ಕಂಡಿತಾಕ್ಷಣವೆ ಚಂದ್ರರೋಹಿಣಿಯುತಿಯು

ಚಿತೆಯ ನೇರಿದಳಾಕೆ ತಮ್ಮ ಸುಡುತಿಹ ಜ್ವಾಲೆ-
ಯಿಂದ ತವಕದಲೆದ್ದು ಅವಳನಾವರಿಸಿದುವು.
ಪತಿಯ ಪ್ರಾಣಗಳೊಡನೆ ತನನವೆಂದಿತು ದೇಹ.
ಇದು ನಿಮಗೆ ಮನನವಿರಲೆಂದಳಾ ಬಾಲೆ
ಧಿಗ್ಗನೆದ್ದಿತು ಕಿಚ್ಚು. ಒಂದು ಕ್ಷಣ ಸಂದೇಹ,—
ಹಗಲೊ ದಿಗಿಲೋ ಎಂದು. ಮುಂದೆ ಕಗ್ಗತ್ತಲೆಯು.

## ಮಹಾಪುರುಷ; ಮಹಾವನಿತೆ

ಅಹುದಹುದು ಆ ತರುಣ ಸಿದ್ಧಪುರುಷನ ಬಳಿಗೆ
ಇದ್ದಿತೊಂದಸಮವಿಹ ಪ್ರತಿಭೆ, ಅನುಪಮ ತೇಜ.
ಇಂಥ ಮುನಿವರ್ಯನಿಗೆ ಬಾಗಿ ನಿಲುವುದೆ ಸಾಜ-
ವೆಂದೆನಿಸುತಿತ್ತವನ ಬಳಿ ನಿಂತ ಜನಗಳಿಗೆ
ಎದೆಯೊಲವು ತಿಳಿಯಿರುವ ಭಾವುಕರ ಜಂಗುಳಿಗೆ
ಅವನು ದೇವಪ್ರಾಯ, ಉಳಿದರಿಗೆ ಯತಿರಾಜ
ನನಗಿರಲಿ ಇವನಂಥ ಚಾರಿತ್ರ್ಯ, ಗುಣ, ಓಜ-
ವೆಂದು ಹೊಳೆದಿತ್ತೆನ್ನ ಮನಕೊಂದು ಇನಿಗಳಿಗೆ

ಅವಳಾ ಮಹಾವನಿತೆ ಅವಳ ಕೇಶಕಲಾಪ-
ದಿಂದೆಸೆದಿತೆಲ್ಲೆಡೆಗೆ ಪರಮಪಾವನ ಜ್ವಾಲೆ.
ಇದರಿಂದ ಕಳೆಯುವುದು ಹಿಂದುಮುಂದಿನ ಪಾಪ;
ಯೋಗಿನಿಯು ಸುಕುಮಾರಿಯಿವಳು ಕೋಮಲಬಾಲೆ-
ಯೆಂದಿತ್ತು ಜನ; ಮನವು ಕೇಳಿತ್ತು. ಇವಳಲ್ಲಿ
ಇನಿತು ದಿನ ನೀನರಸಿ ಕಾಣದಂತಹ ನಲ್ಲೆ ?

# ಅಶ್ವಾರೋಹಿ

ಎಳೆಯಸಿರಿ ಕೇರಿಕೇರಿಗಳಲ್ಲಿ ತಿರುಗಾಟ-
ವಾಡುತ್ತ ಗುರಿಯಿಲ್ಲದಲೆಯುತಿರೆ ನಾ ಮೋಹಿ-
ಸಿದೆ ಮೇಲೆ ನೋಡುತ್ತ. ಓರ್ವನಶ್ವಾರೋಹಿ
ಪವನಮಾರ್ಗದಿ ಚಲಿಸುತಿದ್ದ. ಇದು ಕಣ್ಮಾಟ-
ವಲ್ಲೆಂದು ನೂರು ಸಲ ಪರಿಕಿಸುವ ಹಿನ್ನೋಟ
ತಾನೆ ನಿರ್ಧರಿಸಿತ್ತು. ಗೆಳೆಯರೆಂದರು ‘ ಕಾಹಿ-
ಲೆಯ ಕುರುಹು, ಛೀ ! ಹೋಗು !’ ಎಂದು. ನಾನಿದನರುಹಿ
ಸಿಲ್ಲುತಿರೆ. ಹಿರಿಯರೆಂದರು ‘ ಬರಿಯ ಹುಡುಗಾಟ ’.

‘ ಪಗಲಿರುಳು ಕಣ್ಮನವ ಸೆಳೆವಂಥ ಪರಮ ಪಾ-
ವನ ದೃಶ್ಯ ಜೀವನಕೆ ಬಂದುದಾದರೆ ಕರುಣಿ-
ಸೆಮಗಾ ಪ್ರತೀತಿಯನು ’ ಎಂದು ನೇಹಿಗರುಸಿರು-
ತಿರಲಿಂದು ಪಡಿನುಡಿವೆ ಕುಂದದಲಿ ದೇವಯಾ-
ನದಿ ನಡೆದ ರಾವುತನ ಠೀವಿ, ನಿಲುವಿಕೆ, ಸರಣಿ.
ಅಂತಿರಲು ಚಿನ್ನವಾಗುವುದು ಬಾಳ್ವೆಯ ಕಸಿರು !

# ಶೆಲ್ಲಿ

'ಈತನಜರಾಮರನು'; 'ಈತನಿರಬೇಕಿತ್ತು'
ಎಂದು ಕವಿಗಳು ತಮಗೆ ಮನವಂದ ಕವಿವರರ
ಹೊಗಳುವರು. ಹೇಳೆನಗೆ. ಏನೆಂದು, ಗುರುವರ!
ನಾನು ನುತಿಸಲಿ ನಿನ್ನ? ಅಹುದು ನಿನ್ನಯ ತೊತ್ತು
ಧಾರಿಣಿಯು, ಕಾಲನಿವ ಕಾಲಾಳು ಮೂವತ್ತು-
ಮೂರು ಕೋಟಿಯ ಗಣದ ಜೀವಕಳೆ, ಇನ್ನಿತರ
ಪ್ರಾಣಿಗಳ ಪ್ರಾಣಪತಿ, ಮತ್ತೊಂದು ದಿವ್ಯತರ
ಸ್ವರ್ಗದಧಿಪತಿ,-ಬಾಳ್ದಿ ಧರಣಿಯೊಳು ಮೈವೆತ್ತು!

ಬಾಳುವಯ ಹೊಂದೇರಿಗಿನ್ನೊಂದು ಹೊಂಗಳಸ
ವಿಡಲೆಂದು ಹೊಂಬಸಿರನೆಡೆಗೆ ಸಾಹಸಮಾಡಿ
ಹೋಗಬಯಸಿದ ರಥಿಕ, ಚಿರಪಥಿಕ! ನೀ ಲಲ್ಲೆ-
ಯಲಿ ಕಂಡು ಬೆಳಕು-ಕತ್ತಲೆಗಳನು, ಇದು ಎಲ್ಲ
ಚೆಲುವೆಂದು ಸಾರಿದವ! ಜನಕೆ ಬೆಳಕನು ನೀಡಿ
ನಿನ್ನ ನೋಟವ ಕೊನರಿಸಲು ನಡೆದೆ, ಮನದರಸ!

# ಕನ್ನಡ ಕಾವ್ಯದ ಅಭಿಮನ್ಯು*

ಕಡಲ ದಾಂಟುವದೆ ಕಡು ಪಾಪವೆಂದುಸಿರುತಿಹ
ಕುರುಡು ನಂಬಿಗೆಯ ಹಿಂತುಳಿದು ಮುಂದಡಿಯಿಟ್ಟೆ
ನಾಡ ನಿಲಿಸುವ ಯಂತ್ರವಿದ್ಯೆಯೆಡೆ ಗುರಿಯಿಟ್ಟೆ
ನಾಡ ಹಿರಿಯರ ನೋಟದಂತೆ ನಡೆದಿರಲಹಹ!
ಪಡುವಣದ ವಿದ್ಯೆಯೆದೆ ತೆರೆಯೆ ಚಕ್ರವ್ಯೂಹ
ಬರಿ ದಂತಕಥೆಯೆಂದು ನಿನ್ನವರಿಗೆದೆ ಕೊಟ್ಟೆ
ಹೊಸ ಜೀವನದ ಸುವ್ವಿಗೆಯ್ದು ಸುವಿನೆಲೆಯಿಟ್ಟೆ
ನಿನ್ನ ಕನಸಿನ ಕೃತಿಗೆ ಹಿಂಗಿತ್ತು ಸಂದೇಹ.

ನುಗ್ಗಿದನು ಕಚನಂತೆ ದಿವ್ಯ ವಿದ್ಯೆಯ ತಂದ
ರಕ್ಕಸರ ತಗ್ಗಿಸುತ ಪಾರಾಗಿ ಬಂದನಿದೊ!
ವೀರ ಅಭಿಮನ್ಯು ನೂರೊಂದು ಕುತ್ತನು ದಾಟಿ
ಎಂದು ಜನ ತವಕಗೊಳುವನಿತರೊಳೆ ಮೊಗದಂದ
ಕಂದಿತ್ತು, ನಂದಿತ್ತದಕಟಕಟ! ನೋಡದೋ!
ಆರು ಸಾವಿರ ಮೈಲಿಯಾಗಿ ಮೂನ್ನೂರ್ ಕೋಟಿ

* ದಿವಂಗತ ಗೆ. ಪೇಜಾವರ ಸದಾಶಿವರಾಯರನ್ನು ಕುರಿತು

# ತ್ಯಾವಣನಾಯಕ (೧)

ಇದೊ! ನನ್ನ ಸ್ಮೃತಿಪಥದಿ ಎನದನೀ ನಾಯಕನ
ಹಾಳುಹಂಪೆಯಲಿರುವ ಮೂಲಗುಂಪೆಯನೊಂದ
ಶೋಧಿಸುತ ನಡೆದಿರಲು ಹಾಳು ದೇಗುಲವೊಂದ
ಕಂಡೆ ಜನರಗಿಯುತಿಹುದನು ಅವರ ಕಾಯಕವ-
ನೀಕ್ಷಿಸುತ ನಿಂತಿರಲು ಗುಡಿಯ ಕಲ್ಗಂಬವಡಿ-
ಗಿರುವ ಗುಹೆಯೊಂದರಲಿ ಓರ್ವ ವ್ಯಕ್ತಿಯ ಕಂಡೆ,
ಸುತ್ತುವರಿದಿರೆ ಜನರ ಸಂಪಣಿಯು. ಏನೆಂಬೆ!
ಅಂಕುರಿಸಿತೆನ್ನೆದೆಯೊಳನುರಾಗದೊಂದು ಮಿಡಿ

ಆಗ ಬಂದಿತು ಮುಂದೆ ವ್ಯಕ್ತಿ ಮತ್ತೆಂದಿತದು!
ಮೂರು ಶತಮಾನದಾಚೆಗೆ ಜೀವಿಸಿದ ಬೊಂಬೆ-
ಯೆನಬೇಡಿ! ಮಾನಿಸನೆ ನಾನಿಹೆನು ಕಂದಿತದು
ವಿಜಯನಗರದ ಪೆಂಪು ಆ ಬನಸಿರಿಯ ರೆಂಬೆ
ನಾನೊರ್ವನುಳಿದಿಹೆನು, ಅದರ ಸಂದೇಶವನು
ತಂದು ಮುಟ್ಟಿಸಲೆಂದು ನಿಮ್ಮ ಹೃದ್ದೇಶವನು!

## ತ್ಯಾವಣನಾಯಕ (೨)

ತಾಳಿಕೋಟೆಯ ರಣದಿ ಕಣಕಣವು ಸಹ ಹೋಗಿ
ಸಾಮ್ರಾಜ್ಯವಳಿದಿರುವ ಪರಿಯ ನಾ ಧೇನಿಸಿದೆ
ನರಪತಿಯನುಳಿಸಲೆಂಪತಿಯಾಗಿ ಹವಣಿಸಿದೆ
ಮಾಡಲೇನಹುದಿನ್ನು, ಕಾಲಬಂದಿರೆ ಮಾಗಿ
ಅಸಹಾಯನಾಗಿರಲು ಇಂಥ ವೇದನೆ ತಾಗಿ
ರಾಜಧಾನಿಗೆ ಮರಳಿ ಕ್ಲೇಶವನು ಗಮನಿಸದ
ರಾಣಿವಾಸವನುಳುಹಿ ಕ್ಲೇಶವನು ಸಮನಿಸಿದೆ.
ಅಂದಿನಿಂದಿನ್ನುವರಗಿರುವೆ ನಾ ಬೈರಾಗಿ!

ವಿಜಯನಗರದಿ ಮೂರು ದಿನವು ನಡದಿಹ ಕೊಲೆಯ
ನೋಡಲೆಂದವಿತು ಕುಳಿತಿದ್ದೆ ನೆಲಮನೆಯೊಳಕೆ!
ಅಂತೆ ನಿಮ್ಮನು ನಾನು ಕಾಂಬುದಕೆ ಕಾರಣನು!
ಅದಕಂತೆ ಕಾಯ್ದುಕೊಂಡಿದ್ದೆ ನನ್ನಯ ತಲೆಯ.
ಇನಿತು ದಿನವಿರಲಿಲ್ಲವೆನಗೆ ಜನತೆಯ ಬಳಕೆ!
ಇಂದು ನಿಂತಿಹೆ ಬಂದು ನಿಮ್ಮೆದುರು,–ತ್ಯಾವಣನು!

## ತ್ಯಾವಣನಾಯಕ (೩)

ಅಡಗಿದೆನು ಮೂರು ದಿನವೀ ಗುಹಾಭಾಗದಲಿ, -
ತುಂಗಭದ್ರೆಯು ಹರಿದು ರಕ್ತಾನುರಕ್ತೆಯಿರ,
ಯವನಸೇನೆಗೆ ಯವನ ಸೇವೆಯಾಸಕ್ತಿಯಿರ -
ಬಾಳಿದೆನು ಬಲು ಬಳಲಿ ನಾ ಭೀತಿರೋಗದಲಿ
ಆ ಮೇಲೆ ಬಂದು ಸುತ್ತೆಲ್ಲ ದಿಟ್ಟೆಯ ಚೆಲ್ಲೆ
ಸೂರ‍್ಯಾಸ್ತವಾಗಿತ್ತು ವರರಾಜ ಹಸ್ತವದು
ರಾಜ್ಯರನೆಗಿಹ ಪುಕೂಲವ ನೆಳೆಯೆ, ಗ್ರಸ್ತವದು
ಅಭಿಮಾನಧನವೆಂದು ಒರಲಿದಳು ಆ ನಲ್ಲೆ !

ವಿಜಯನಗರವದಂದು ಅಪಜಯನಗರವಾಗಿ
ಸುಖಕಿರುವ ನೆಲವೀಡು ದುಃಖದಾಗರವಾಗಿ
ಕೆನ್ನೀರು ಕಣ್ಣೀರು ಸಿಲಲು ಸಾಗರವಾಗಿ,
ಮನದಿ ಮಲ್ಲಳಿಗೊಂಡೆ : ಎಲೆ ! ಸ್ಮಶಾನವಿದೇನು ?
ಕನ್ನಡದ ವೈಸಿರಿಯು ಬತ್ತಲಾಗಿಹುದೇನು ?
ಕೊನೆವರೆಗು ನಮ್ಮ ನಾಡಿನಲಿ ದುರ್ಗತಿಯೇನು ?

## ತ್ಯಾವಣನಾಯಕ (೪)

ಇಂತಲ್ಲ ಹೊಸತೊಂದು ಸ್ಫೂರ್ತಿಯದು ಜನಿಸುವದು
ನಾಡಿನೊಳು. ಹೊಸತೊಂದು ಸಾಮ್ರಾಜ್ಯವೇಳುವದು
ಕನ್ನಡಕೆ ಹೃದಯವಿರುವನಕ ನೆರೆ ಬಾಳುವದು
ನಾಡ ಹಸುಮಕ್ಕಳಿಗೆ ಇದು ಕಾರ್ಯವೆಸಿಸುವದು
ನಾಡಿನವರೆದೆಯಲ್ಲಿ ಹೊನ್ನಕ್ಕರದಿ ಬರದು
ಬಾಳುವರು ಕಬ್ಬಿಗರು, ತಮ್ಮ ಸಾಹಸಗಳನು
ಅವರ ಸುಖ ದುಃಖವನು, ಉಮ್ಮಳುಲ್ಲಸಗಳನು
ನೆನೆಯುವರು ನೆರೆನಾಡಿನವರು ತಮ್ಮನು ಮರೆದು

ಅದಕಂತ ಕರುನಾಡ ತುಂಬೆಲ್ಲ ಸಂಚರಿಸುವೆನು
ಹಿಂದಿನವರೆನಕ ತಣಿಸದಿಹ ಚಿಂತರದಂತೆ
ಇಂದಿನವರನು ಕನಸಿನಲಿ ಹೋಗಿ ಸುರಸುವನು
ಆವರೆದೆಯು ಪುಟಿಯುವದ ನೋಡಿ ತುಂತುರದಂತ
ಹಿಂದಿನಿರವನು ನೆನೆದು ಮುಂದಿಹುದ ಸ್ಮರಿಸುವೆನು
ಕಂಡುಬರುತಿಹುದೊಂದು ಯುಗ,-ಯುಗಾಂತರದಂತೆ.

# ಮುಂಗಾರು

ಮುಂಗಾರು ನನ್ನ ಮುಂದಾರೆಂಬ ಬಿಂಕದಲಿ
ಮುಂದಲೆಯ ಕೇಶರಾಶಿಯನೆತ್ತಿ ಕಣ್ಕಿಸಿದು,
ಎಬ್ಬಿಸಿದ ಕೆಂಧೂಳಿ ಕಾರ್ಮುಗಿಲ ಮುಟ್ಟಲದು
ರಕ್ಕಸಿಯ ರಕ್ಕಸದಿ ನಿಂತಿದೆ ದಿಗಂತದಲಿ
ಮುಂಗಾರ ಸಿಂಗಾರವಿದು ನಿರಾತಂಕದಲಿ
ಮುಚ್ಚಿಹುದು ಹಗಲ ಬಂಗಾರವನು ಬೆಚ್ಚಿಹುದು
ಮುಂಗಾರ ಸಿಡಿಲು-ಮಿಂಚನು ಮೊದಲುಸಲ ಕಂಡು
ಮಗುವೊಂದು ನಿದ್ದೆ ತೊಲಗಿರೆ ಮಾತೆಯಂಕದಲಿ

ಮರುಕ್ಷಣವೆ ನಗುತಿಹುದು ಓ! ಎಲ್ಲ ಬಯಲಾಗಿ
ಕೊನರಿತ್ತು ರವಿಯ ನಗೆ. ಪ್ರೀತಳು ಧರಾಂಗನೆಯು.
ಅಲ್ಲಲ್ಲಿ ನಿಂತ ಕಿರಿಗೊಳದಿ, ನವ ಮಾಸಗಳು
ಮಾಸಿರುವ ಮೈಯ್ಯ ತೊಳೆವವು ಹಕ್ಕಿ. ನೆರೆಯಾಗಿ
ತಂಪು—ಬರುತಿದೆ ಕಂಪು: ಶಾಂತ ಮೌನದ ಮುಗುಳು
ಬಿಚ್ಚಿಹುದು ಮುಂಗಾರು ಇಂಥ ಸೊಬಗಿನ ನನೆಯು!

# ಮರುಭೂಮಿ

ವರುಷ ವರುಷಕೆ ಮಳೆಯು ಬಾರದಿರೆ ನೊಗಗುಂದಿ
ಬಿಸಿಲಿಗೆದೆಯೆಲ್ಲ ಸಿಗಿಸಿಗಿಯಾಗಿ ಮಲಗಿಹುದು
ಮರುಭೂಮಿ ಕಂಠಗತ ಪ್ರಾಣ ತಾ ಹಲುಬಿಹುದು
ಗಂಗೋದಕವ ಬೇಡಿ ಸಸ್ಯಗಳು ಕಳೆಗುಂದಿ
ನಿಶ್ಚೇಷ್ಟವಿರೆ ಹೆಮ್ಮರಗಳು ನಿಂತಿವೆ ಹೊಂದಿ
ನೂರಾಳು ಕೆಳಗಿರುವ ಜೀವನವ, ತೊಲಗಿಹುದು
ಜೀವಕಳ ಪಕ್ಷಿ ಚಾತಕಪಕ್ಷಿಯನಬಹುದು.
ಇಂಥ ಮರುಸ್ಥಲ ಜಗದಿ ವಿರಲಪೆನುವರು ಮಂದಿ!

ದೇವದೇವನ ಕರುಣೆ ಮಳೆಯಾಗಿ ಬಿದ್ದೊಡನೆ
ನೋಳಕೆಯೊಡೆಯುವುದು ಮರುಭೂಮಿಯೊಳು
ಕಣಕಣದಿ
ನೆಲೆಗೊಂಡ ರಣರಣಿಕೆ ಮಾಯವಾಗಲು, ವೃಕ್ಷ
ಚಿಗಿಯುವವು ಪಕ್ಷಿಸಂಕುಳವೊರೆಯುವದು ಮುದದಿ
ಸುಗ್ಗಿಗಿಹ ಜಾತಕನ ಪ್ರಾಣ ತಿರುಗಿತು ವೃಡನೆ
ಬುವಿಯೊಳವತರಿಸಿದೊಲು-- ತೆರೆಯೆ ಮನದ ಗವಾಕ್ಷ.

# ಚಂದ್ರೋದಯ

ಪೂರ್ವ ವಧುವಿನ ಮನೆಗೆ ಕೊಳ್ಳಿಹೊಡೆದರೂ ಸುರರು !
ಸಾಂದ್ರನಂದನವನದಿ ಕಾಳ್ಗಿಚ್ಚು ಕತ್ತಲೆಯ-
ನಣಕವಾಡುತಲಿತ್ತೊ ! ಆದಿಪ್ರಭೆ ಬತ್ತಲಯ
ಬೆಡಗಿನಲಿ ಕಂಡಿತ್ತೊ ! ಮದುವೆಯಲಿ ಕಿನ್ನರರು
ಹಿಡಿದಿರುವ ಹಿರಿಹಿಲಾಲುಗಳ ಬೆಳಕಿನ ಪಸರು
ನಭದಲಿಂತೆಸೆದಿತ್ತೊ ! ಸುರಹೊನ್ನಿಗಳ ತಲೆಯ
ತರಿದೊಟ್ಟಿ ಕೂಡಿಸಿದ ಹೊನ್ನ ರಸದೋಕುಳಿಯ-
ನೆರಚಿದಂತಾಗಿತ್ತೊ,- ಚಂದ್ರೋದಯದ ಒಸರು !

ಕಳ್ಳುಕುಡಿದ ಪ್ರಮತ್ತ ಪ್ರಮದೆಯರ ಮುಖಮುದ್ರೆ-
ಯನು ತಳೆದು ಮೆಲ್ಲನುದಯಿಸಿ ಬಂದ ಚಂದ್ರಮನು !
ತನ್ನ ಬರವನೆ ಕಾಯ್ವ ಕಣ್ಣ- ಕನ್ನೈದಿಲೆಯ
ಸಾಸಿರವ ಕಂಡು ಕನಸನು ತೊರೆದು ಸುಖನಿದ್ರೆ-
ಯನು ಮರೆದು, ಓಲಗಿಸಲೆಂದು ಬಂದಿರುವರನು
ಓಲಾಡಿಸಿದ ಕಾಂತನಾಗಿ ಪಾಲಿಸುತಿಳೆಯ !

# ಬೆಳುದಿಂಗಳು

ಮೆಲ್ಲಮೆಲ್ಲನೆ ಅಂಬುದಗಳ ಬಂಬಲು ಬಂದು
ಹುಣ್ಣಿಮೆಯ ಹೊಂಗದಿರನನು ಮುತ್ತಲೆಳಸುವದು
ತಾರೆಗಳ ಒಳಗವನು ಚದರಿಸುತ ಬಳಸುವದು,-
ಮುಗಿಲ ಮಂಡಲದೀಚೆ ಕಾರ್ಮುಗಿಲೊ ಎನೆ ನಿಂದು,
ಮಿಡುಕಿದೆನು ಮನದೊಳಗೆ ಏಕಿದೀ ಬಗೆಯೆಂದು.
ಕಾರಣವನರಿಯದಲೆ ಲೋಕ ಕಳವಳಿಸುವದು.
ಹೊಳೆಯದಿರೆ ಗೂಢವಿದು ಮನವು ಹಳಹಳಿಸುವುದು.
ಆಗ ಕಂಡಿತು ನೊಂದ ಕಾದಲರ ಜೋಡೊಂದು.

ಎಲೆಲೆ ! ಚಿತ್ರವಿದೆನಲು ನಿಕಟ ಕಲಹವನೆಸಗಿ
ಕಡುನೊಂದ ಕಾದಲರು ಒಮ್ಮಿಗಿಲೆ ಒಂದಾಗಿ
ತಬ್ಬುವರು, ಮುತ್ತಿಡುವರಲ್ಲ ರೋದನವಳಿಯೆ !
ಬರುತಿಹುದು ಮತ್ತಾಗ ಬೆಳುದಿಂಗಳದು ಮಸಗಿ.
ಹೋಗಿಹುದು ಮುಗಿಲೋಳಿ ತಾನಿಲ್ಲದಂತಾಗಿ
ಚಿಕ್ಕೆಗಳು ಮಿನುಗುವವು, ನಗುತ ನಿಂತಿಹಳಿಳೆಯೆ !

# ರೋಹಿಣಿ

ಜ್ಯೋತಿಗಳ ಸಾಸಿರವನೊಳಕೊಂಡ ನಭದಲ್ಲಿ
ನೂರು ಸೂರ್ಯರ ನಡುವೆ ನಿಂತು ಮಿನುಗುವ ತಾರೆ !
ನಿನ್ನ ಕಿರುವೆಳಕ ದೊರೆವೆತ್ತಿಹೆನು, ಮೈದೋರೆ
ನಿನ್ನ ಸುಂದರ ದೀಪ್ತಿ ನನ್ನ ಜೀವಿತದಲ್ಲಿ
ನಿನ್ನೀಮ ನಿರವೇದ್ಯವನ್ನರಿವರಿಹರೆಲ್ಲಿ
ಭೂತಲದಿ ? ನನಗಿಲ್ಲ ಎಣ್ದೆಸೆಗಳಲಿ ಸೂರೆ-
ಯಾಗುತಿರುವಗ್ಗಳಿಕೆ ಎಳೆತನವ ನೀ ಬೀರೆ,
ನಿನ್ನ ಹಿರಿತನಕೊಪ್ಪಿ ಒನೆದಿಹೆನು ನಿನ್ನಲ್ಲಿ

ರೋಹಿಣಿಯೆ ! ಹೊಳೆಹೊಳವ ನಿನ್ನ ರತ್ನಕಿರೀಟ-
ದೊಂದು ಹರಳೊಳು ಮೂಡಬಹುದು ವಿಶ್ವದ ಗುಟ್ಟು,
ನೂರು ಸೂರ್ಯರ ಪ್ರಭೆಯ ಪ್ರತಿಬಿಂಬ, ಚಲುವತಿಯ
ಸಾಮ್ರಾಜ್ಯ ! ಜನರೆಲ್ಲ ಕಂಡು ನಿನ್ನೀ ಮಾಟ-
ವನ್ನು ನುಡಿಯುವರಾಗ : “ ರೋಹಿಣಿಯ
ಹೊಸ ಹುಟ್ಟು
ಕಿರಿದಲ್ಲ. ಅದು ಮೂಡಿಸಿದೆ ಚಿರಂತನ ಕಥೆಯ !”

# ಮುದಿಯಾನೆ

ಆನೆ, ಮುದ್ದಾನೆ, ಮದ್ದಾನೆ ಬಂದಿತು ತಾನೆ,
ಮುದಿಯಾನೆ! ಕಳೆದಿರಲು ಯೌವ್ವನದ ಹೊರಮಿಂಚು
ಅನುದಿನವು ಸಿಂಹಗಳಿಗಿಂತು ಕೊನೆವರೆಗಂಜು-
ತುತ್ತಮಾಂಗದ ಮುತ್ತು ಮುಗಿದಿರಲು, ಹಿರಿಬೇನೆ
ಮದವ ಹದಗೆಡಿಸಿರಲು, ಕೊಳದ ಬಳಿ ಬಂದಾನೆ
ನಾಯ್ವ ಪಣ ತೊಟ್ಟಿತದು ಹೊಳೆಯ ಮಸಣದ ಹೊಂಚು
ಮೆಲ್ಲನೈದಿತು ತಾನು ಮೆಚ್ಚಿರುವ ಹೊಸಲಂಚು
ಕಂಡು ಮುಳುಗಿರಲೆಂದು ಏಕೆ ಈ ವಿಧಿ ಕಾಣೆ!

ಕೊಳದ ಬಳಿಯಲಿ ಹರಿದ ಹೊನಲಿನಲಿ, ಕನಲಿರುವ
ಗಜಗಳೆಣಿಕೆಯ ಮೀರಿ ಸಂದಿಹವು: ಇದು ಒಂದು!
ಒಂದು ಕ್ಷಣ, ಮಾರ್ಮಲೆವ ಸೀರ ಸಿಟ್ಟಿಸಿನೋಡಿ
ತ್ವೇಷದಲಿ ಕರವೆತ್ತಿ ಆನೆ ಘೀಳಿಟ್ಟಂದು,—
ನಡುಗುವವು,— ಆಜನ್ಮ ಆನೆಯನು ಪೀಡಿಸಿಹ
ಸಿಂಹಗಳು, ಕೊನೆಗೊಮ್ಮೆ ಬೆದರಿ ದಿಕ್ಕೆಟ್ಟೋಡಿ!

# ಗರುಡಪಕ್ಷಿ

ಅಂತರಿಕ್ಷಕೆ ತನ್ನ ಗುರಿಯಿಟ್ಟು ಸಾಗಿಹುದು
ಗರುಡ ಪಕ್ಷಿಯು ಅದರ ಗಾನವಿಕಲಿತ ಹೃದಯ
ನಾಗಭೀಷಣವಿಹುದು. ತಾಳದೆಯೆ ಕೂಗಿಹುದು
ಸರ್ಪದಂಶವು ಹೆಚ್ಚಿ. ಗರುಡವಾಹನನಭಯ-
ವೆಲ್ಲಿ ಕೇಳಿಸದೀಗ ಇಂತು ಪೀಯೂಷಮಯ-
ವಾದ ಸಿರ್ಭಯ ಪಯಣ ನಂಜೇರಿದಂತಿರಲು
ಮಂಜುಮುಸುಕಿದೆ ಮುಗಿಲ ಮೋರೆಯನು ವಿಷನಮಯ-
ವೆನೆ ಅದರ ಮೈ ಅಪಕೆ ಭಾರವಾಗಿದೆ ಹೊರಲು

ಇಂತು ವಿಷದುಣಿಸದಕೆ ಬಾಯ್ತನಕ ಬಂದಿರಲು
ಮುಗಿಲೆಡೆಗೆ ಮನವಿಟ್ಟು ರೆಕ್ಕೆ ಬಡಿವುದು ಹಕ್ಕಿ!
ರಕ್ತಧಾರೆಗೆ ಮೈಯ ಬಣ್ಣ ಕಳೆ ಕುಂದಿರಲು
ಒಮ್ಮನದಿ ಸಾಗುತಿದೆ ಪವನ ವೀಥಿಯು ಮಿಕ್ಕಿ.
ಸಾವಿನುಣಿಸುಣಿಸಲೆಂದಿದೆಯೊ ಹಾವಿನ ಸೃಷ್ಟಿ ?
ಏನೊ ತೋರಿಸಲೆಂದೊ, — ಗರುಡ ಪಕ್ಷಿಯ ದೃಷ್ಟಿ!

## ರಾಜಹಂಸ

ಇಂತಿಹುದು ರಾಜಹಂಸದ ಮರಣ. ಸುಳಿಗಾಳಿ-
ಯುಸಿರುವದು ಕಿವಿಮಾತಿನಲಿ,—ಬಂತು ಕೊನೆಯೆಂದು.
ಧವಲಗಿರಿಯಿಂದಾಚೆ ಬಳಿಸಾರಿ ಬರುವಂದು
ರೆಕ್ಕೆಗಿಹ ಬಲವೆಲ್ಲ ಕುಂದಿಹುದು. ಮೈದಾಳಿ
ಬೆಳಕೆ ಬಂತೇನೆಂಬ ರೂಪು ಮುದುಡಿದೆ. ಬಾಳಿ
ಮಾನಸದಿ ಪಟ್ಟ ಸುಖಗಳ ಪ್ರಜ್ಞೆಯೊಂದುಂಟು
ಆ ಪರಮ ಸಲಿಲವನ್ನಿಂತು ಕನಸಿನ ನಂಟು!
ಬೀಳ್ಕೊಳುತಲದೆ ಕೊಳವ ದಂಡೆಗುಂಟದು ತೇಲಿ!

ನಡುಗತ್ತಲಾಗಿರಲು ಕೊನೆಯ ಹರಕೆಯ ಬೀಸಿ,
ನಡು ನೀರಿನಲಿ ಮಂದಮಂದಗತಿಯಿಂದೀಸಿ,—
ಕಮಲಗಳ, ತಾರೆಗಳ ವಿಮಲ ಪ್ರೇಮವ ತಳೆದು
ನಸುವೆ ದುಗುಡವು ಬೆರೆತ ಇನಿದನಿಯನೆತ್ತುವದು
ಅಮರ ಗಾನದಲಂದು. ಆ ಗಾನ ಮುತ್ತುವದು
ಬಾನೆದೆಯ, ರೆಕ್ಕೆಗಳು ಮಾಯವಾಗಿರೆ ಹೊಳೆದು!

# ಹಿತ್ತಲ ತುಳಸಿ

ನೋಟವನು ರಂಜಿಸಳು. ಬಗೆಬಗೆಯ ಹೂವಿಲ್ಲ
ಬಣ್ಣದಾಟವ ಹೂಡಲೆನೆ. ಹಚ್ಚಹಸಿರಿರುವ
ಸೀರೆಕುಪ್ಪಸ ತೊಟ್ಟು ಮಂದಗತಿಯಿಂದಿರುವ
ಪಲ್ಲವಾಂಗಿಯು ಇವಳು. ಭೃಂಗ-ಕೇಲಿಯದಿಲ್ಲ
ಇವಳ ಬಳಿಯಲಿ ಇವಳ ಹುಬ್ಬು ತಿಳಿಯದು ಬಿಲ್ಲ
ಮಣಿತವನು, ಕಾಮುಕಸ್ತೂರಿಯಾ ತೆನೆಗಿರುವ
ಕಂಪಿಲ್ಲ. ಹಳ್ಳಿಪಳ್ಳಿಗಳಲ್ಲಿ ಬೆಳೆದಿರುವ
ಹುಡಿಗೆಯಾಗಿಹಳಿವಳು ನಾಗರಿಕತೆಯೆ ಇಲ್ಲ !

ಇರಲೇನು ? ಮನವಂದು ತುಳಸಿಯನು ವರಿಸಿದನು
ವಿಷ್ಣು ಸಾಕ್ಷಾತ್ ತಾನು ! ಧಾರ್ಮಿಕರು ನುಗ್ಗಿದರು
ತಾಯಡಿಗೆ ತಲೆಯಿಡಲು. ಸನ್ನಿಧಿಯ ಹರಸಿದನು,—
ಒಸಗೆಯಿವಳಿಂದೆಂದು ವಿಜ್ಞಾನಿ ಹಿಗ್ಗಿದನು.
ಸ್ತ್ರೀಗಣದ ದೇವಿಯನು ನುಡಿಯುವರೆ ಮೂದಲಿಸಿ ?
ಅಹುದೆ ತುಳಸೀದೇವಿ ಬರಿಯ ಹಿತ್ತಲ ತುಳಸಿ ?

# ರಾಮಲಿಂಗ ದೇವಾಲಯ

ಲಕ್ಷ್ಮೇಶ್ವರದ ರಾಮಲಿಂಗ ದೇವಾಲಯದ-
ಲೊಂದು ಸಾವಿರಲಿಂಗ ಮೂಡಿರಲು ಪಿಂಡದಲಿ
ರಾಮೇಶ್ವರವೆ ಆಗುತದು ಭರತಖಂಡದಲಿ
ಮೆರೆಯಬಹುದಿತ್ತೆಂದು ಜನರೊಂದು ವಿಸ್ಮಯದ
ಮಾತ ನುಡಿವರು. ಅಕಟ! ಕೋಳಿ ಸೂರ್ಯೋದಯದ
ಕಾಲಕ್ಕೆ ಕೂಗಿತ್ತು. ಆ ಶಿಲಾಖಂಡದಲಿ
ಮೂಡಲಿಹ ಕೊನೆಯ ಲಿಂಗವನಳಿಸಿ! ದಿಂಡದಲಿ
ಎಲ್ಲ ಲಿಂಗಗಳರಳಿ ಮುಡಿಗೆ ಬರೆ,— ಹೋಯ್ತು ಹದ!

ಸುತ್ತಲೊಂಭೈನೂರು ತೊಂಭತ್ತರೊಂಭತ್ತು!
ಇರಲೇನು? ಸಾವಿರಕೆ ಬರಿ ಒಂದು ಕಡಿಮೆಯಿರೆ
ಗಣಿತವಾಯಿತು ವ್ಯರ್ಥ ಗಿಡಗಂಟಿಯದು ಸುತ್ತ
ಬೆಳೆದಿಹುದು. ದೇಗುಲವ ನೋಡಬಯಸುವರಿಲ್ಲ
ಸಮೃದ್ಧಿಗೂ,—ಅಮೃತಸಿದ್ಧಿಯು ಕೊನೆಗೆ ಬಾರದಿರೆ,-
ಇಡಿಯ ಜನ್ಮವೆ ವ್ಯರ್ಥ. ಇದನು ಬಲ್ಲವ ಬಲ್ಲ.

# ಬೋಳಗುಮ್ಮಟ

ಬೋಳಗುಮ್ಮಟವಿದುವೆ ಮುಗಿಲು, ಬುದ್ಧಿಗೆ ದಿಗಿಲು.
ಕೆಳಗೆ ಬಿದ್ದರೆ ಮಣ್ಣಿನಲಿ ಮಣ್ಣು, ಬೇರಿಲ್ಲ.
ಧ್ವನಿಗಳಲೆಗಳು ದಿಗಂತಕೆ ಹಬ್ಬಿದಾ ಮಿಗಿಲು
ಇಲ್ಲಿದೆ ಅಸಂಖ್ಯಾತ ನಕ್ಷತ್ರವಿಲ್ಲಿಲ್ಲ-

ವೇನು ? ನಾದದನಂತ ಗಡಚಿಕ್ಕಿಸದೆ ನಿಂತು
ಕಿವಿಯು,- ಎಣಿಕೆಯ ನೂರಿ ದನಿಯಲ್ಲಿ ತಿಂತಿಣಿಸೆ ?
ಸಪ್ತಗ್ರಹಗಳ ತೆರದಿ ಮಾರ್ನುಡಿಯದೋ ಬಂತು !
ತಿರುವಿಟ್ಟು ಮುಗಿಲ ಕೊಪ್ಪರಿಗೆ,— ಗುಮ್ಮಟವೆಣಿಸೆ !

ಬೋಳಗುಮ್ಮಟವಿದನು ಬಿಟ್ಟು ಬಾ ಬಯಲಲ್ಲಿ
ಹೊರಗಿಲ್ಲಿ ಗಾಳಿ ಕೊರಲನ್ನೆ ಕದ್ದೊಯ್ಯುವುದು
ಗೊಮ್ಮಟೇಶ್ವರನಂತೆ ಹಿಗ್ಗಿ ಜೀವವದಿಲ್ಲಿ
ಬೆಳೆದು ನಕ್ಷತ್ರ ಮಂಡಲವನಾರಯ್ಯುವುದು

ಸತ್ತವರ ಮೇಲಿಟ್ಟ ಗುಮ್ಮಟವು ಬರಿಮಣ್ಣು.
ಜೀವನಿಗೆ ಮುಡುಪಿಟ್ಟ ನಭಕೆ ತೆರೆವುದು ಕಣ್ಣು

# ಶಿಲಾವೃಕ್ಷ

ಭೂಗರ್ಭಶಾಸ್ತ್ರಜ್ಞನೆತ್ತಿ ಹಿಡಿದನು ಕೊಳದ
ತಳಕಿರುವ ಶಿಲೆಯೊಂದ   ಬಂಡೆಗಲ್ಲದು ಸವೆದು
ಹರಳಾದುದೆನ್ನುವನು, ಮತ್ತದರ ಮೇಲುಳಿದ
ಮರದ ಕಿರಿಯಾಕೃತಿಯದಿಂತು   ಮುದಿಮರ ತವಿದು

ಕೊಳದ ನೀರಿನ ಕೆಳಗೆ ಬಿದ್ದಿರಲರೆಯ ಕೂಡಿ
ಕಾಲೋವಧಿಯ ಹೊನಲ ತೆರೆತೆರೆಗೆ ತಲೆಬಾಗಿ
ಕಾಲಾಂತರದಿ ಹರಳಮೇಲೆ ಚಿತ್ರವು ಮೂಡಿ
ನಿಂತಂತೆ ತೋರುವುದು! ಹಳೆಯದನೆ ಹೊನ್ನಾಗಿ-

ಸುತ್ತ ಕುದಿವನು ಜ್ಞಾನಿ ಮತ್ತೆ ವಿಜ್ಞಾನಿ ಸಹ!
ಕಾಮಾರ್ಥಧರ್ಮಮೋಕ್ಷಗಳ ಕುರಿತ ವಿಚಾರ-
ವೆಂದಿನಂತಿಹುದೆಂದು ನುಡಿಯೆ ಜನಸಂದೋಹ,—
ನಮ್ಮ ಜನಜೀವನವ ಮುತ್ತಿಹುದನಾಚಾರ!

ಹಳತೆಲ್ಲ ಕೊಳೆತಿರಲ; ಮತ್ತೆ ಮೊಳೆತೀತಂತೆ.
ಹೊಚ್ಚಹೊಸ ಬಾಳುವೆಯು ಬರಲಿ ಹೊಂಗನಸಂತೆ.

# ಏಸಿಯ - ಯುರೋಪು

ಕೈಲಾಸವೆನ್ನತಿದೆ ವಿಂಧ್ಯಾದ್ರಿಯನು ಕಂಡು
' ದಕ್ಷಿಣಾಪಥಕೆಂದು ದಾಂಟಿದನು ಸಾಹಸಿಯು
ನಿನ್ನನಡಿಮುಡಿ ಮೆಟ್ಟಿ. ನನ್ನನೇರುವ ಗಂಡು
ಯಾರವನು ' ಬಿಳಿಮೋರೆಗಂಟಿಕೊಂಡಿತು ಮಸಿಯು,

ಕರಿಮೊಗವು ಬಿಳಿದಾಯ್ತು, ನನ್ನಡಿಯೆ ಕೈಲಾಸ
ಮಾನವಗೆ; ಮತ್ತೆನ್ನ ಮಂಜು ಮುಸುಕಿದ ಮುಡಿಯು
ಮೂಡಿಸಿದ ನಗೆ,— ನರನ ಭಾವನೆಯ ಪರಿಹಾಸ!'
ವಿಂಧ್ಯೆ ನುಡಿಯಿತು ' ನಾಳೆ ನಾನಿಹೆನು,
ನೀ ಹುಡಿಯು.'

ಗಿರಿಯು ಕಂದರವಾಗಿ ಕಂದರವ ಗಿರಿಯಾಗಿ
ಪಲ್ಲಟಿಸಿದಾ ಕಾಲನೆತ್ತಿದ ಹಿಮಾಲಯವ,
ವಿಂಧ್ಯೆಯನು ಸದೆಬಡಿದು ಮುಂದೆ ಹಿಮಗಿರಿ ಬಾಗಿ,
ವಿಂಧ್ಯೆಯುನ್ನತಿ ಮೆರೆಯೆ, ಭೋಗಿಸಿರದೇ ಲಯವ ?

ಮೂಜಗದಿ ಯೂರೋಪದಿಂದು ಮೆರೆದಿರಲೇನು ?
ಏಸಿಯವದಿರಬಹುದು ನಾಳಿನಾ ಸುರಥೇನು

## ಕಾದಲ

ನನ್ನ ಕಾದಲಳಿವಳು ನಿತ್ಯವಿಹಳೆನ್ನ ಸೂರ್ಯ
ಅವಳನ್ನು ಸುತ್ತುತಿಹ, ನುತಿಸುತಿಹ ಪೃಥ್ವಿ ನಾನು !
ನನ್ನ ಮನದನ್ನೆ ಕಲ್ಪದ್ರುಮದ ದಿವ್ಯ ಕುಸುಮ,
ದೇವನಿಂದವಳನ್ನು ಪಡೆದ ನೇಹಿಗ ನಾನು !

ನಲ್ಲೆಯಿವಳೆನ್ನ ಕಣ್ಮನನ ತುಂಬಿರುವ ಬೆಳಕು,
ಅವಳ ಕಾಂತಿಯನಿಳೆಗೆ ಬಿಂಬಿಸುವ ಚಂದ್ರ ನಾನು !
ಅಹುದವಳು ದೇವನೊಡನಾಡುವ ಇಡಿಯಾದ ವಾಣಿ,
ಅದರ ಸಂದೇಶವನು ಬೀರ್ವ ಸಾರುತ ನಾನು !

ನನ್ನವಳು ಸೌಂದರ್ಯದನುಕರಣೀಯ ಮೂರ್ತಿ,
ಅವಳ ನಲುಮೆಯ ಪಡೆದ ಚಿರಮುಕ್ತ ಭಕ್ತ ನಾನು !
ಅವಳ ಕರುಣೆಯಲಿಹುದು ಸಂಜೀವಿಸಿರುವ ಶಕ್ತಿ,
ಅವರ ಮಹಿಮೆಯನುಸುರುತಿಹ ವಾಣಿ-ವೀಣೆ ನಾನು !

ಬಣ್ಣನೆಯು ಸಾತಿಶಯವಿರಬಹುದು, ಇದ್ದರೇನು ?
ಸತ್ಯ ಸೌಂದರ್ಯಗಳು ನುಡಿಸಿಹವು, ಧನ್ಯ ನಾನು !

# ಸೌಂದರ್ಯಾರಾಧಕ

ಏಳೇಳು ಚಲುವತಿಯೆ! ನಿನಗಾಗಿ ತವಕಿಸುತ
ನಿಂತಿಹರು ಯೋಗಿಗಳು, ಪಂಥವನೆ ತೊಟ್ಟಿಹರು
ಕವಿವರರು ನಿನ್ನ ನೋಡುವದೆಂದು, ಬಿಟ್ಟಿಹರು
ದಿನದಿನೆಗೆ ಬೆಳಕಿನಂಬುಗಳನ್ನು ಚದರಿಸುತ
ಕತ್ತಲೆಯನರಸಿಗರು ತಾರೆಗಳು ಚಮಕಿಸುವ
ತಮ್ಮ ಕಿರುವೆರಳನ್ನು, ನಲಿಯುವವು. ಮೆಟ್ಟಿಹರು
ಪಾಮರರು ಸಲ್ಲದಾಸೆಯ. ಬೀಡುಬಿಟ್ಟಿಹರು
ಮುಗಿಲಮಂಡಲದಾಚೆ ಕನಸಿಗರು ಶೋಧಿಸುತ.

ನಿನ್ನ ಬರವಿಂದೆನ್ನ ಹೃದಯಮಂದಿರವು ನಹ
ವಿಮಲವಿರಬಹುದೆಂದು ಕಾಯುವೆನು. ಎಲೆ ಚೆಲುವೆ!
ಇರಬಹುದು ಕೆಲವರೊರೆವಂತೆ ನೀ ಬರಿ ಕನಸು.
ನಿತ್ಯಳೆಂದುಸಿರುತಿರು; ಆಡಗಲೆನ್ನಯ ದಾಹ
ನಾನು ಜೀವಿಸುವನಕ ಇಂತೆಸಗು; ಮರುಕ್ಷಣವೆ
ನೀನಿಹುದು ಶುದ್ಧಸುಳ್ಳೆಂದು ಡಂಗುರ ಹೊಯಿಸು!

# ಕನ್ನಡಿಗನ ಹೃದಯರಾಗ

ಅಲ್ಲೊಮ್ಮೆ ಇಲ್ಲೊಮ್ಮೆ ತಾನೆ ಹರಿವುದು ಮನಸಿ-
ನಿರುವಿಕೆಯು. ದಿವ್ಯಹರ್ಮ್ಯವನೊಮ್ಮೆ ಬೇಡುವುದು
ಅರಸತ್ವಸಿರಿಯೆಲ್ಲ ಬೇಕೆಂದು ಕಾಡುವುದು.
ಅನುದಿನವು ಕೊರಗುವುದು ತನ್ನ ಸ್ಥಿತಿ ಕೆಡುಕೆನಿಸಿ.
ಒಮ್ಮೆ ಚೆಲುವೆಯರಾದ ಲಲನೆಯರನತಿ ನೆನಸಿ,—
ಅವರ ಚಂಚಲ ದೃಷ್ಟಿಯಂತೆ ಪರಿದಾಡುವುದು
ಪದಸಂಪದಕೆ ಸೋತು ಕಳೆಗುಂದಿ ಬಾಡುವುದು.
ಮರುಗುವುದು ಇನ್ನನಿತೊ ಕೊರತೆಗಳ ಗುಣಿಸೆಣಿಸಿ.

ಎಲೆಲೆ! ಈ ಮೃಗಜಲವ ಬೆನ್ನಟ್ಟಿ ಬರುವಂಥ
ವಿಷಯಲೋಲುಪನಲ್ಲ! ಕನ್ನಡದ ನಾಡು, ನುಡಿ,
ತನ್ನ ನಡೆವಳಿಕೆ ಸಹ ಬೆಳಗಲೆಂಬೀ ಪಂಥ-
ವಹುದು ಹೆಗ್ಗುರಿ ಅದಕೆ ತನು ಮನವನಿತ್ತಿಹನು.
ನಾವಿಗಿಂತಲು ಭಾಷೆತಪ್ಪಿ ನೋವ್ ನೂರುಮಡಿ!
ತನಗೊಡಂಬಡುವಂಥ ಭಾರವನು ಹೊತ್ತಿಹನು.

# ಕಮ್ಮಟ

ಇದು ನನ್ನ ಕಮ್ಮಟವು. ರಾಜಮುದ್ರೆಯನೊತ್ತಿ
ಹಣವನೋಡಾಡಿಸುವುದಲ್ಲ. ಆಡಳಿತಗಳ
ವ್ಯವಹಾರವನು ನಿಯಂತ್ರಿಸುತ ದಿಗ್ದೇಶಗಳ-
ನೊಲಿಸ ಬಯಸುವುದಲ್ಲ ಕಲ್ಲುಬಂಡೆಯ ಕೆತ್ತಿ
ಬೋಳಗುಮ್ಮಟಗಳನು ಬಾಳ ಬಯಲಿನಲೆತ್ತಿ
ನಿಲ್ಲಿಸುವ ಸಾಮರ್ಥ್ಯವಿದಕಿಲ್ಲ ತಾರೆಗಳ
ಕೋಟಿ ಹೊನ್ನನು ತಂದು ಆಗಸದ ಮೇರೆಗಳ
ತುಂಬುವಳವಿದಕಲ್ಲ ಅದು ದೇವನುಪಪತ್ತಿ

ನನ್ನ ಕಮ್ಮಟದಲ್ಲಿ ಅನುದಿನವು ಜನಿಸುವವು
ಕಮ್ಮಲರ ನರುಗಂಪು ಹಿಡಿದ ಹೊಂಗನಸು, ಇಡಿ
ನಾಡ ಬಗೆಯನು ನಳಿಪ ಸೊಗಸುಗಾರಿಕೆ, ಬಾನ
ಮುಟ್ಟಿ ಮುತ್ತಿಡುವಂಥ ಭಾವಗಳು, ಇಲ್ಲಿಹವು—
ಈ ನುಡಿಯ ಬೆಡಗಿನಲಿ—ನಾನೊಲಿದ ತಾಯ ಮುಡಿ-
ಗೆಂದು ಸಲ್ಲಿಸಿದ ಹೂ, ಅನುಸಂಧಿಸಿದ ಗಾನ!

# ಕವಿ

ಸುಗ್ಗಿ ಬರುತಿರೆ ನಲಿದು ಶುಕಪಿಕಗಳುಲಿಯುವವು
ತಮ್ಮರಸವಾತಿನೊಳು ತಂಗಾಳಿಯೂದುವವು.
ಇಳೆಯನೆಲ್ಲವ ತುಂಬಿ ಕೊನೆಗೊಮ್ಮೆ ಮೋದವದು
ಧ್ವನಿತವಾಗಿರೆ ಜೀವಕೋಟಿಗಳು ನಲಿಯುವವು
ಎಳೆಮಾತಿನಲಿ ನುಡಿದು ಹಸುಮಗಗಳೊಲಿಯುವವು
ಅವರ ತೊದಲ್ನುಡಿಗಳಲಿ ಪಕಿವಾತ ಕಾಣುವದು,
ಮತ್ತೆ ಪರಮಾರ್ಥವನು, ತಾಯುದಿರ ಪ್ರಾಣವದು !
ಇಂತು ಹಿರಿಯೊಸಗೆಯಲಿ ಕರುಳೆಲ್ಲ ಬಲಿಯುವವು

ಕವಿಯು ನಲ್ಮಾತಿನಲಿ ಸಹ ನಮಗೆ ಗೋಚರಿಪ
ಅರ್ಥವಿದೆಯೆಂಬಲ್ಲ, ಅರ್ಥವಿಲ್ಲದೆಯಿಲ್ಲ !
ಪಿಕದಂತೆ ಪಸುಗೂಸಿನಂತೆ ನುಡಿವನು ಕವಿಯು.
ಅದರರ್ಥವೆಲ್ಲವನು ಬಲ್ಲವನೆ ತಾ ಬಲ್ಲ !
ತಿಳಿಯಲಿಕೆ, ಕವಿಯಂತೆ ತಾಯಿಯಂತಾಚರಿಪ
ಸರಲ ಹೃದಯವು ಬೇಕು, ಆಗ ಕಾವ್ಯದ ಸವಿಯು !

# ಹುಟ್ಟುಗುರುಡ

‘ ಹುಟ್ಟುಗುರುಡನು ಇವನು, ಈ ಮಗನಿಗೆಂದೆನ್ನ
ಮನೆಗೆ ಮನೆಯೇ ಹಾಳು ಆದ ಸಾಲವು ಸಾಲ-
ದೆನುವಂತೆ ಆಗಿಹನು ಋಣಗೂಳಿಗಿವ ಮೂಲ
ಓದುವದದೇಕಿವನು ಕೊಂಡು ಗ್ರಂಥಗಳನ್ನು ’
ಕುರುಡರಿಗೆ ಶಾಲೆ! ಭಲೆ! ಏನು ತಿಳಿಯುವದಣ್ಣ,
ಆಳರಸುಮನೆತನಕೆ! ಇದು ಎಂಥ ಅಳಿಗಾಲ ’
ಕುರುಡ ಮಕ್ಕಳಿಗೆ ವಿದ್ಯೆಯನು ಕೊಡಿಸುವ ಶಾಲ-
ವೊಂದು ತಾಗಿತು ಒಂದು ಅಲ್ಲದೇನಿಹುದಿನ್ನು ?’

ತಂದೆಯಾಡಿದ ಮಾತ ಕೇಳಿ ಕುರುಡನು ತೊರೆದ
ಪಿತೃಗೃಹದ ನರಕವನು. ದಾನಕೊಡಬಹುದೆಂದು,—
ದಾನಿಗಳಿರಲು ಜಗದಿ,— ಹಾಡುತೊಲಿಸಿದ ಜಗವ
ಜನರೆಂಬರ್ ‘ ಇವನೆ ಕವಿ, ಇವನು ಬಾಯಿಂದೊರೆದ
ಪದವೆ ಕಾವ್ಯವು ರತುನವನ್ನೆ ಬಿಸುಟೊಗೆದನವ
ಮೂರ್ಖ ತಂದೆಯು ’ ಎಂದು ಜನ್ಮಾಂಧರಾರಿಂದು ’

# ಆದರ್ಶವಾದಿ

‘ ನಿನಗೀಗ ಬರಿ ಐದು-ಇಪ್ಪತ್ತು ಬೆಳೆದಿಂತು
ಬಹಳ ಎತ್ತರವಾದೆ ’ ಯೆಂದು ನುಡಿವಳು ತಾಯಿ.
‘ ನಿಂತಿಹೆವು ದಡದಲ್ಲಿ ; ನಿನ್ನ ಹಡಗದ ಹಾಯಿ
ಮುಂದೊಯ್ಯುತಿದೆ ನಿನ್ನ ’ : ಸಖರೊರೆವರೊಲವಾಂತು
ಎಳೆಯರೆಲ್ಲರು ಕೂಡಿ, ‘ ನೀನು ನೋಂಪಿಯನೋಂತು
ಪಡೆವ ಬಗೆಯನ್ನರುಹು. ತೊದಲು ನುಡಿಯುವ ಬಾಯಿ
ಪ್ರೌಢಿಮೆಯ ಪಡೆವುದೆಂದೊ ’ರೆದು ಮನವನು ತೋಯಿ-
ಸುವರು ಆನಂದದಲಿ ನಾನು ಚಿಕ್ಕವನೆಂತು,

ಮತ್ತೆ ದೊಡ್ಡವನೆಂತೊ, ನಾನರಿಯೆ ! ನೆಲದಷ್ಟು,
ಮುಗಿಲಷ್ಟು ವರುಷಗಳು ನನ್ನ ಮಾಸಿಹವೆಂದು
ಜೀವ ನುಡಿವುದು ನಿತ್ಯ. ದಿಟವೆ ತಾಯಿಯ ಎಣಿಕೆ ?
ಗಣಿತ ತಪ್ಪಿರಬೇಕು ನಿರ್ಧರಿಪ ಬಗೆಯೆಂತು,
ಜೀವಾತ್ಮ ಪ್ರಾಚೀನನಿರೆ ಕಾಲನಿರುವಷ್ಟು ?
ಒಂದಣುವಿನಂತರವು ವಾರ್ಧಕ್ಯ- ಯೌವ್ವನಕೆ !

# ತಂದ

ಈಕೆ ನನ್ನ ಯಶೋದೆ. ಇವಳೆನ್ನ ಸಲಹುವಳೊ
ನಾನಿವಳ ಸಲಹುವೆನೊ ನನಗರಿದು. ಕೈಯೆತ್ತಿ
ರೆಕ್ಕೆಯೊಲು ಬಡಿವಾಗ, ಕಣ್ಣನರಳಿಸಹತ್ತಿ
ಕುಲುಕುಲನೆ ನಗುವಾಗ,—ಇವಳೆ ಅನುಭವಿಸುವಳೊ
ಹಿರಿದಾದ ಸಂತಸವ, ನಾನೊ ? ಇದು ನನಗರಿದು.
ಕೇಕಿಯನು ಹಾಕಿವಳು ಕುಣಿದು ಕಳೆಯೇರುತಿರೆ,—
ಅವಳ ಸುಖ ಮಿಕ್ಕಿ ನನ್ನೆದೆಯು ಉಕ್ಕೇರುತಿರೆ,—
ಉಭಯತರು ನಲಿಯುವೆವು ಬಾಳ ಭಯವನು ಮರೆದು.

ಇಂತು ನಲಿವ ಯಶೋದೆ ಬೆಳೆದು ದೊಡ್ಡವಳಿರಲು
ಯಾರ ಮನೆದೀವಿಗೆಯ ಹಚ್ಚಿ ಸಂತಸದಿಂದ
ಒಲಿಯುವಳೊ ನಾ ಕಾಣೆ ! ತುಸುವೆ ಕೊಂಕಿರ ಕುರುಳು
ಮೆಲುಗಾಳಿ ನೋಂಕಿಂದ, ನಲುಮೆಯುತ್ಸವದಿಂದ
ಬುದ್ಧಿ ತುಸು ಮಂಕಾಗೆ, ಮನವಿತ್ತು ಮುತ್ತೈದೆ-
ಯಾಗಿ ನಿಂತಿರಲಿವಳು ;— ಯಾರ ಮನೆಯ
ಯಶೋದೆ ?

# ಗೆಳೆಯ

ಇರ್ವರಿದ್ದೆವು ಗೆಳೆಯರೊಮ್ಮೆ ಕದನವ ಮಾಡಿ
ನೊಂದಿರಲು ನಾನತ್ತೆ; ಗೆಳೆಯ ನಕ್ಕನು.  ನನ್ನ
ಮೊಗವು ಕೆಂಪೇರುತಿರೆ ಬೈಗಂತೆ, ಬಾವನ್ನ-
ದುಸಿರನನುಭವಿಸಿದೊಲು ತಣ್ಣಗಿದ್ದನು ನೋಡಿ.
ಕಂಪಿಸಿತು ನನ್ನ ಮೈ, ಗೆಳೆಯ ಗಹಗಹಿಸಿದನು
ಬಿಸುಸುಯ್ದು; ಉಕ್ಕಿ ಬರುತಿರುವ ಕಂಬನಿ ಮಿಡಿದೆ.
ಆಗ ಬಡವನ ಹಳಿವ ಧನಿಕನಂದದಿ ಬರಿದೆ
ಅಣಕುವಾಡಿದ ಗೆಳೆಯ.  ಅದನೆಲ್ಲ ಸಹಿಸಿದೆನು.

ಮುಂದೊಮ್ಮೆ ದೇಶಾಂತರಕೆ ಪಯಣ ಬೆಳಸಿರಲು
ನಾನು, ಗೆಳೆಯನು ಬಂದ; ಮೌನವ್ರತವನು ಮುರಿದು,
ಅಗಲುತಿಹ ನನ್ನನಾಲಿಂಗಿಸಿದ, ಕಣ್ಣೀರು
ಕೋಡಿವರಿಯಲು ತೋಳೆನ್ನ ತಕ್ಕೈಸಿರಲು,—
ಎದೆಯಾಳದಿಂದುಕ್ಕಿ ಬಂತೊಲುಮೆ ಮೇಲ್ವರಿದು
ಅದರಾಳವನು ಹೋಲಬಹುದಾವ ಮುನ್ನೀರು '

# ವಿದ್ವಾಂಸ

ಇವನು ವೈಯಾಕರಣಿ, ಷಟ್ಶಾಸ್ತ್ರಕೋವಿದನು,
ವೇದಪಾರಂಗತನು ವಿದ್ಯೆಗಳಿನಲು ಬುದ್ಧಿ-
ಯನು ಬೆಳೆಸಲೆಂದಿವನು ಪಟ್ಟ ಕಷ್ಟಸಮೃದ್ಧಿ-
ಯನು ಬಣ್ಣಿಸಲು ಬೇಕು ಎಂಟಡೆಯ ಬಂಟತನ.
ಗ್ರಂಥಭಾರವ ಹೊತ್ತ ಶೇಷನಿವ. ಒಂಟಿಗನು
ಹಿರಿಯ ಪಾಂಡಿತ್ಯದಲಿ ಇವನು ಪಡೆದಿಹ ಸಿದ್ಧಿ-
ಯಹುದು, ನಿಸ್ಸಂದೇಹ, ಮಾನವ್ಯದಭಿವೃದ್ಧಿ.
ಇಹನು ಸುಜ್ಞಾನ-ಮಾರ್ಗದಲಿ ನಿಷ್ಕಂಟಕನು

ಬಡತನವು ತಾಂಡವಿಸೆ ಮನೆಯಲ್ಲಿ ಐರಿ ಪೋಯಲು.
ಹತ್ತುಮಕ್ಕಳ ಕೊರಲು ಒಣಗುತಿದೆ ಅನ್ನ ನಮ-
ಗನ್ನವಿಲ್ಲಿಂದೊರಲಿ. ನಡೆಯೆ ಪಂಡಿತ ಗೋಷ್ಠಿ,—
ಬೆಂದೊಡಲೆ ಇವನ ಪಾಲೆಂದನಾ ಪರಮೇಷ್ಠಿ
ಮಸಣದುರಿಯಂತ ಧಗಧಗನೆ ಬಿಸಿಲೊಳಗಮವು!
ಹಾಳು ಸುರಿಯುವದಿವನ ಬಾಳು ಬಯಲೋಬಯಲು.

# ಗೊಂಬೆಯಾಟ

ಒಂದು ಹಳ್ಳಿಯ ಬಯಲು. ಕತ್ತಲಾಗಲು ಜನರ
ಸಂದಣಿಯು ನೆರೆದಿಹುದು ಗೊಂಬೆಯಾಟವ ನೋಡ
ಲೆಂದೆಣಿಸಿ ಇಂತಿಗೋ! ಸೂತ್ರಧಾರನು ಆಡ-
ಲೆಸಗುವನು. ಕುಣಿಯುವವು ಗೊಂಬೆಗಳು. ವಾನರರ
ನಾಯಕನು ಬಂದನಿದೊ! ಮಾರುತಿಯು ದಾನವರ
ಕೆಡವಿದನು, ವ್ಯಥೆಗೊಂಡು ಕಂಡು ಸೀತೆಯು ಪಾಡ!
ದಾಶರಥಿ ದಶಕಂಠನೊಡನೆ ಯುದ್ಧದಿ ಸೇಡ
ತೀರಿಸಿದ ಬರಿಬೊಂಬೆ ಇರಲೇನು' ಬಾನ್ನವರ

ಲೋಕಕೊಯ್ವುವು ಮನವ ಸೂತ್ರಧಾರನ ಧ್ವನಿಯೆ
ಪಾತ್ರಗಳ ಮೂಲಧ್ವನಿ; ಕಿಷ್ಕಿಂಧ ಲಂಕೆಗಳು
ಒಂದೆ ಸ್ಥಲಕಿಹ ಭಿನ್ನನಾಮಗಳು ಇರಲೇನು?
ಜನರ ಕಲ್ಪನೆಯೆದುರು ತೆರೆದು ನಿಂತಿದೆ ಖಣಿಯೆ!
ಅವರ ಕಿವಿ ಹೊಗುತಿಹುದು ನವರಸದ ನುಡಿಜೇನು!
ಗೊಂಬೆಗಳು ಅವರ ಕಲ್ಪನೆಗಿರುವ ರೆಂಕೆಗಳು!

# ಚಲಚ್ಚಿತ್ರ ಮಂದಿರ

ಇದು ಚಲಚ್ಚಿತ್ರಗಳ ಛತ್ರ. ಕಾಣುವದಿಲ್ಲಿ
ಎಲ್ಲ ಸೃಷ್ಟಿ ವಿಚಿತ್ರ. ರವಿಯ ನಟ್ಟದ ಮಹಿಷಿ-
ಯಾದ ಛಾಯಾದೇವಿ ಇದರ ಭಾರವ ವಹಿಸಿ
ಬಳಗದೊಡನೆಯೆ ಬಂದು ಪ್ರತಿಬಿಂಬಿಸುವಳಿಲ್ಲಿ
ಲೋಗರಾ ದುಗುಡ-ನಲುಮೆಗಳ. ಕೇಂದ್ರಿಸುತಿಲ್ಲಿ
ಕಿರಣವ್ಯೂಹವನವಳು ಉಸಿರಾಗಿ ನೂರ್ಮಡಿಸಿ
ನಿಲ್ಲುವಳು, ಉಸಿರ ಬೆಳಕಾಗಿಸುತ. ಇಮ್ಮಡಿಸಿ
ಕಾಣುವವು ನೂಗವವಳ ಮಾಯೆ ಬೀಸಿರುವಲ್ಲಿ!

ಸತಿಯ ನಡತೆಯ ಕಂಡು ರವಿಯು ಮುನಿದಿಹನಂತೆ;
ಮತ್ತವಳ ಮೈದುನನು, ಗುರು ತಾನು! ಇದಕೆ ಸಾ-
ಕಿಹುದಂತೆ ಕಣ್ಣೆರಡು, ಒಳಗಣ್ಣು ಬೇಕಿಲ್ಲ—
ಶ್ರಾವ್ಯ ಕಾವ್ಯವ ಮರತ ದೃಶ್ಯಕೆನೆ ಇದೆಯಂತೆ
ಇಂದ್ರಿಯಗಳಿಂದ್ರಸ್ವೈಭವವಿಲ್ಲ ಇಂದ್ರಿಯಾ-
ತೀತವನು ನಲ ಮರತು, ಭರತಮುನಿ ಇದ ಬಲ್ಲ!

# ಹೊಸೂರು

ಮನೆಮನೆಗೆ ಮಲ್ಲಿಗೆಯ ಬಳ್ಳಿ ಕೊನರಿಹವಿಲ್ಲಿ
ಮಧುಮಾಸವಿಲ್ಲಿರುವ ಪಥುಪೆನಲು ಚಿರನವ-
ಸ್ವಾಲನದಿ ಎಸೆಯುತಿದೆ ಕೆಂಪಳಿರು, ಸುಚಿರನಯ-
ನೋನ್ಮೀಲನದ ಮುದದಿ ಕಮ್ಮಲರ ಜೊಂಪಿಲ್ಲಿ
ದೂರ ಮುಗಿಲ ಕಮಾನು ನೆಲವ ಮುತ್ತಿಡುವಲ್ಲಿ
ಮಾಂದಳಿರು ಕಟ್ಟಿಹುದು ತೋರಣವ. ಬರುವನವ,---
ಸುತ್ತಲಿಹ ಬನದೊಡೆಯ, ವೀರ ಮನ್ಮಥರಾಯ-
ನೆನೆ ಚೆಲುವೆಯರ ಕೂಟ ನಂದಣೆಸುತಿಹುದಿಲ್ಲಿ

ಕಂಡಿತಿಂತು ಹೊಸೂರು ಎಳೆಯಸಿರ ಹೊಸದಾಗಿ.
ಇಂದಿಗೋ! ಭಣಗುಟ್ಟುತಿಹುದವರ ಹಣೆ. ಬನವ
ತುಂಬಿಹವು ಶ್ವಪಚಗಳು. ಊರಿನಲಿ ಮಾತುಗರು
ಕೊಲುತಿಹರು ದುರ್ದಮ್ಯಕಾಲವನು ತೂಬಾಕಿ-
ಯನು ಕೊಂಡು ಬಹರು ಬಳಿಯರು ಬೇಟೆಗೆನೆ ಮತವ
ಕೋಳಲೆಂದು ಹಳ್ಳಿಗರ ಮನವೊಲಿಸಿ ಬೂತುಗರು!

# ನಾಗರಪಂಚಮಿ

ಬಂತು; ನಾಗರಪಂಚಮಿಯು ಬಂತು. ಮಳೆಗಾಲ-
ವುಯ್ಯಾಲೆಯಾಡುತಿದೆ; ಜಿದ್ದಿನಲಿ ಹೊಬಿಸಿಲು
ಎದ್ದು ಬಿದ್ದೇಳುತಿದೆ. ಸುತ್ತು ಹಚ್ಚನೆ ಹಸಿರು
ನಿಂತು ತಲೆದೂಗುತಿದೆ, ಸವಿಸವಿದು ನೊರೆವಾಲ
ಮಿಡಿನಾಗರವು ತೂಗುವಂದದಲಿ. ಇದು ಸಾಲ-
ದೆನುವಂತೆ ಹಸುಮಕ್ಕಳೊಡನೆ ಹಿರಿಯರು ಬಹರು
ಉಯ್ಯಾಲೆಯಾಡಲಿಕೆ. ಸಂತಸದ ಅರೆವೊಹರು
ಅರಳಿಸಿದೆ ಮನಗಳನು. ಕಾಲ ಲೀಲಾಲೋಲ !

ಪಂಚಮಿಯ ದಿನ ನಾಗ ಕಚ್ಚಿ ಕೊಲ್ಲುವ ನರನು
ನೃಪತಿಯಾಗುವನೆಂದು ತಿಳಿದ ಹಳ್ಳಿಗನೊಬ್ಬ
ಒಂದು ಹುತ್ತನು ಸಾರಿ ಶ್ರದ್ಧೆಯಲಿ ಹಿರಿದೆಳೆದ
ಕೈಯೆಲ್ಲ ರಕ್ತಮಯವಾಗಿಸುವ ನಾಗವನು.
ಜನರೆಲ್ಲ ಮರುಗಿದರು. ಗೋಳಿಟ್ಟು ಅವನಳಿದ.
ಸಂಜೆಗಾಯ್ತಂತ್ಯವಿಧಿ. ಇಂತು ಮುಗಿದಿತು ಹಬ್ಬ.

# ಕೊಳಲು

ಹಿಡಿಯಿಂದನು, ಇದುವೆ ಆ ಕಥೆಯ ತಬ್ಬಲಿಗೊಳಲು.
ಗೆಳೆಯನಿದನಾಯ್ದು ತಂದನು ಬನದ ಬಿದಿರು ಮೆಳೆ-
ಯೆದುರು ಗಣೆಯಾಗಿರಲು. ಅದ ತಿದ್ದಿ ತೀಡಿ ಕೊಳೆ,—
ಒಳಗೆಲ್ಲ ಕಾಣಿಸಿತು ತುಂಬಿ ಬಂದಿಹ ತೀಳಲು.
ಅದನು ಕೊರೆಯುತ ಸವರಿ ಹನಿ ಹೆಜ್ಜಗಳನಿಡಲು
ಹರಿದಿತಿವರೊಳಗಿಂದ ಗಾನದಿನಿದನಿಯ ಹೊಳೆ.
ಕೊಳಲ ನುಡಿಸಲು ಗೆಳೆಯ ಮೆಲುಮೆಲನೆ ಪ್ರೀತಿವೊಳೆ-
ವಂತೆಲ್ಲರೆದೆಯಾಳದಲಿ, ಹಿಗ್ಗಿತಿಡಿ ಹೊಳಲು!

ಒಂದೆರಡು ವರುಷಗಳ ಮೇಲೆ ಕುಗ್ಗಿತು ಕೊರಲು,
ಒಲಿಯುದಾ ಚೆಲುವೆಯಲ್ಲೊಸೆದ ಸಖ ಕಣ್ಣಿನಲಿ
ಒಗುಮಿಗುವ ಶೋಕವನು ಮುರಲಿಯಲಿ ಹರಿಸಿದನು.
ಅವನ ದೇಹವದೀಗ ಬೂದಿಯಿರೆ ಮಣ್ಣಿನಲಿ—
ಕಾಣದಿದೆ ಈ ಕೊಳಲು ತನ್ನ ನುಡಿಸಿದ ಬೆರಳು.
ಮಂತ್ರಿಸಿದ ಕೊಳಲಯ್ಯ! ಎಚ್ಚರದಿ ನುಡಿಸಿದನು.

# ತೋಳ

ತೋಳ ಬಂದಿತು ತೋಳ ಹುಲಿಯ ಚರ್ಮವ ಹೊದ್ದು,
ಸುಭಗಾಕೃತಿಯ ಮಾನಿಸನ ರೂಪವನು ತಳೆದು
ಶೀಲ ಸಭ್ಯತೆಗಳಲಿ ಉಚಿತವಾಗಿಯೆ ಬೆಳೆದು,
ತೋಳ ಬಂದಿತು ತೋಳ ಮನುಜಾಕೃತಿಯ ಕದ್ದು !
ಅತಿಥಿಸತ್ಕಾರದಿಂದಾದರಿಸಿದೆನು ಎದ್ದು,
ನಯವಿನಯದಿಂದದರ ಪಾದದ್ವಯವನು ತೊಳೆದು.
ನನ್ನೆದೆಯಲಂಕರಿಸೆ ಭಯದಂಕುರವು ಮೊಳೆದು,—
ತೋಳ ಬಂದಿತು ತೋಳ ಹುಲಿಯ ಚರ್ಮವ ಹೊದ್ದು.

ತೋಳದುಸಿರಿಗೆ ನಂದಿತೆನ್ನ ನಂದಾದೀಪ
ಆದರ ನೋಟಕೆ ಕಮರಿತೆನ್ನ ಮನೆಹೂಬಳ್ಳಿ
ಬಾಳ್ವುದೆನಲೀ ವೃಕೋದರನ ಸೋಲಿಸಿ, ತಳ್ಳಿ,—
ಮೆಲಕಾಡಿಸಿತ್ತದುವೆ ಸಾಕುಮೊಲವನು ಮೆದ್ದು.
ದೂರದಲಿ ಮಾನಿಸನು; ತೋಳ ಬರಲು ಸಮೀಪ !
ತೋಳ ಬಂದಿತು ತೋಳ, ಮನುಜಾಕೃತಿಯ ಕದ್ದು !

# ಚರ್ಚಿಲ್ ವಿರೋಧಿಯ ಉದ್ಗಾರಗಳು

ಆಂಗ್ಲರಾ ರಾಕ್ಷಸೀ ರಾಜಕಾರಣ ನಿಪುಣ !
ಆಂಗ್ಲರಾ ಸಾಮ್ರಾಜ್ಯಮದ ಹೆತ್ತ ಚಾಣಿಕ್ಯ !
ಕೃಷ್ಣಕಾರಸ್ಥಾನಿ ! ತೃಷ್ಣೆಯಿಂದಸುರಗಣ-
ವಿಟ್ಟಾಕಿರೀಟದಲಿ ಕೆಚ್ಚಿರುವ ಮಾಣಿಕ್ಯ !

ವೈಶ್ಯಪುತ್ರರ ಕೈಲಿ ಕುಣಿವ ಕುಹಕ ಕುತಂತ್ರಿ !
ಆಂಗ್ಲವೀರರ ಕೀರ್ತಿಯನ್ನು ನುಂಗುವ ರಾಹು !
ಸೈತಾನನನುವಂಶದನುದಿನದ ಧನ್ವಂತ್ರಿ !
ನಿನ್ನಂಥ ಕೇತುಗಳಿಗೂ ಭೂಮಿಯಲಿ ತಾವು !

ನೋಡದೋ, ರೋದಿಸುವರಾಂಗ್ಲ ಕವಿವರರೆಲ್ಲ
ತಮ್ಮ ನಾಡಿನಲೆಂತು ಕೇಡಿದುದಯಿಸಿತೆಂದು !
ಕಣ್ಣಿಲ್ಲ, ಕಿವಿಯಿಲ್ಲ, ತಲೆಯಿಲ್ಲ ಚರ್ಚಿಲ್ಲ !
ಬಾಯೊಂದೆ ನರಕದಗಲದಿ ತೆರೆಯುತಿಹುದೆಂದು:

ಶೆಲ್ಲಿ ರಸ್ಕಿನ್ನರಾ ಶಲ್ಯಕ್ಕೆ ನಿನ್ನ ಹರಣ
ತಲ್ಲಣಿಸೆ, ನಿಲ್ಲುವದು ಅನ್ಯರಾಜ್ಯಾಪಹರಣ

## ಲಕ್ಷ್ಮೀಭಕ್ತ

‘ಹೇಳಿದರು ಕೆಟ್ಟ ಸುದ್ದಿಯು; ನೀನು ಹೋದುದನು.’
ಹೀಗೆ ಸಾಯುವುದುಂಟೆ, ತೋರಿದೆಲ್ಲ ಬಿನ್ನಾಣ ?
ಈ ಭೂಮಿಯಿತ್ತಯ್ಯ ನಿನಗೆ ಪಂಚಪ್ರಾಣ.
ಇದು ಸ್ವರ್ಗವೆನುತಿದ್ದೆ. ಚಹ-ಕಾಫಿ-ಪಾನವನು
ಮಾಡಿ ಭೂಸುರನಾದೆ. ಭಾಸುರಾಂಗನೆ ತಾನು
ಕೃಷ್ಣ ! ನಿನ ರುಕ್ಮಿಣಿಯು. ನೀನಹುದು ತುಸು ಜಾಣ;
ಗರ್ಭಶ್ರೀಮಂತಿಕೆಯೆ ನಿನ್ನ ಮುಖ್ಯ ತ್ರಾಣ.
ತಾರುಣ್ಯ ಮುಗಿದಿಲ್ಲ; ಮುಗಿಸುವರೆ ಲೀಲೆಯನು ?

ಇನ್ನೆಂದು ಮಾಗುವದು ಫೋರ್ಡುಕಾರಿನ ಬಯಕೆ ?
ಬರಿ ವಿದೂಷಕನೆಂದು ಹೆಸರಾದ ನೀನೆಂದು
ತೆನ್ನಾಲನಾಗುವದು ? ಸೊಗಸುಗಾರನ ಭಾಗ್ಯ-
ವೊಂದು ಲಭಿಸಿತು ನಿನಗೆ. ಅಂತಿರಲಿ ನಿನ್ನಾಕೆ
ಇನ್ನು ಕಾಣುವದೇನು ? ಪರಮ ವಸ್ತುವನಿಂತು
ಬಿಟ್ಟು ತೆರಳಿದೆಯಯ್ಯ ! ಅದು ಅವಳ ದುರ್ಭಾಗ್ಯ !

## ಕಾಮಿ

ನೋಡದಿರೆಲೋ! ಪಾಪಿ! ಕಣ್ಣೆತ್ತಿ, ಸಾಗುತಿಹ
ಅಂಗನೆಯಃ. ಅಂಗಾಂಗವಿರಲು ಅಸ್ತವ್ಯಸ್ತ,—
ಇವಳಲ್ಲ ನೃತ್ಯಾಂಗನೆಯ ಗೆಳತಿ. ತಾ ಮಸ್ತ-
ಕದಿ ಹೊತ್ತ ಉದಕಪಾತ್ರೆಯ ಭಾರ, ಬಗಲಲಿಹ
ಬಿಂದಿಗೆಯಲಂಕಾರದಿಂದ ಬಳಕುವ ದೇಹ-
ವವಳದದು. ಇತ್ತಿಲ್ಲ ನಿನಗೌತಣವ ವಸ್ತ್ರ-
ಒಡವೆಗಳ ಧರಿಸುತ್ತ. ಮೀನಾಕ್ಷಿಯಿರೆ, ಬೆಸ್ತ-
ರವನು ನೀನೆಂದೆನ್ನದಿರು. ಸಲ್ಲದಿದು ಮೋಹ.

ಅಲ್ಲಿವಳು ಬಿಡಿಹೆಣ್ಣು. ತುಂಬಿರುವ ಕೊಡಹೊತ್ತ
ಕುಲವಧುವು ಕಾಣಿವಳು! ಒಂದು ಸಂಸಾರಕಿಹ
ಹಂಸಗಮನೆಯು, ಒಂದು ಮನೆಯ ನಂದಾದೀಪ!
ನೀ ಕಂಡಿಹುದೆ ಸೂಳೆ, ನೀನಾಡಿಹುದೆ ಲೆತ್ತ.
ಈ ಭಾಷೆ ನಿನಗರಿದು. ಇರಲೇನು? ನೀನರುಹ-
ಬೇಕಿದನು ನಿನ್ನಂಥ ಮೊದ್ದರೋಳಿಗೆ, ಭೂಪ!

# ಕಾಮುಕ

ನಾನು ಕಾಮುಕನೆಂದು ಹಳಿಯುವರು. ಗ್ರಂಥಗಳ-
ನೋದಿ ನರಕವೆ ಲೇಸು ಈ ಪಶುವಿಗೆನ್ನುವರು.
ನಾಲ್ಕು ದಿನ ತಮ್ಮ ಮಲಬದ್ಧತೆಯ ಕಳೆದವರು
ಇವನು ವ್ರಣಕಾಯನೆಂದೊರೆಯುವರು ಪಂಥಗಳ
ಡಾಂಭಿಕರು ಜರೆಯುವರು ಅಂಧ ಇಂಧವುಗಳಾ
ಪಂಥಾನದವನೆಂದು. ಈ ಜನರ ಕೊಲ್ಲಲೆನೆ
ಒಂದು ಕೊಂತವು ಸಾಕು, ಜೋಡೆಯೊಡನೊಂದು ದಿನ
ಸುಮ್ಮನಿಹೆ ನಗೆಗೇಡು, ಕೊಲಲಿಂಧ ತಂತುಗಳ?

ಕಾಮಾಂಧನೆನಬೇಡಿ ನಾನಿರಲು ಕಾಮಾಂಧ,
ನೀವಹುದು ಧರ್ಮಾಂಧ, ವಿದ್ಯಾಂಧ, ಶ್ರದ್ಧಾಂಧ,
ಜನ್ಮಾಂಧ! ನಿಮಗೇನು ಹೊನ್ನುಗೋರಿಯ ಕಟ್ಟಿ
ಕೈಮುಗಿದು ನಿಂತಿಲ್ಲ ಕಾಳನವ. ಸದೆಬಡೆದು
ನನ್ನೊಡನೆ ಮಣ್ಣಿನಲಿ ಕೊಡೆದೆಳೆಯುವನು ಮೆಟ್ಟಿ
ನಿಮ್ಮೌಪನಿಷದ-ಪ್ರಾಣಗಳನಂಗಕೆ ತೊಡೆದು!

# ಗೃಹಸ್ಥ

ಕನಸಿನಲಿ ಕಂಡಿದ್ದೆನೊಮ್ಮೆ ಚಲುವತಿಯನ್ನು.
ಅವಳೊಂದು ಮೃದುಹಾಸ ನನ್ನ ಮನವನು ಸೇರಿ
ಅನುದಿನವು ಸಂಚರಿಸುತಿತ್ತು ಹೆಣ್ಣನು ಸಾರಿ .
ಆ ನಗೆಯು ಅರಳುವುದ ನೋಡಬೇಕೆಂದೆನ್ನ
ಕಣ್ಣುಗಳು ಬಯಸಿದುವು. ಓರ್ವ ಬಾಲಕಿಯನ್ನ
ಆ ನಗೆಯಲಂಕರಿಸಿಹುದ ನೋಡಿ ಕಳೆಯೇರಿ
ನನ್ನ ತನು-ಮನ-ಧನವನಾಗಮಾಡುತ ಸೂರಿ-
ಮದುವೆಯಾದೆನು ಅಯ್ಯೊ! ಮುಂದೆ ಕಂಡವು . ಹೊನ್ನ

ತೊಡಕುಗಳು, ಹೆಣ್ಣೆದೆಯ ಅಳುಕುಗಳು, ಹುಟ್ಟಿದಣು-
ಗರ ದೀರ್ಘರೋದನವು. ಎಲ್ಲಿ ಮರೆಯಾಯ್ತೇನೊ
ಆ ನಗೆಯು! ಈಗದರ ಸುಳಿವಿಲ್ಲ. ! ಮೃಗಜಲವ
ಬನ್ನಟ್ಟಿ ಕಾಡುಮಿಗಗಳಿಗೆ ಉಣಿಸಾಯ್ತೊ ತನು ?
ಈಗ ಬಿಸುಸುಯ್ಯುವೆನು. ಬಾಳಿಹುದೆ ಇಂತೇನೊ!
ತೊಗಟೆಯಲಿ ಜೇನು, ತಿರುಳಿನಲಿ ಹಾಲಾಹಲವೊ?

# ಜಂತು; ವಿತಂತು

ಈತನು 'ಮಹಾಶಯನು' ನಾಲ್ಕು ಜನರಲಿ ಗಣ್ಯ-
ನೆಂದು ಮನ್ನಣೆವೆತ್ತ ಸಾಮಂತ. ಎಂತೆಂತು
ಲಕ್ಷ್ಮಿಯನು ಒಲಿಸುವುದು,— ಇದರಲಿವಗಿಹ ಪುಣ್ಯ-
ವೆಲ್ಲ ವ್ಯಯವಾಗಿಹುದು. ಇವ ತನ್ನನುಳಿದನ್ಯ-
ರನ್ಯಾಯವನು ತಡೆಯ. ಯಮುನ ಕೊಂತಕೆ ಕಂತ
ವನು ಕೊಡುವ ಮುಂಚಿತವೆ ಸುಖಿಯಾಗಬೇಕೆಂತ
ವ್ಯೆಯೊಣಗಿಸುವನಿವನು,— ತೇಜ ಕುಂದಿಪ ತಂತು—

ಬರಿಜಂತು ! ಇವನ ಮನೆಯಲಿ ವಾಸಿಸಿಹಳೊರ್ವ
ಬಾಲವಿಧವೆಯು. ಎದೆಯೊಳಮಿತ ದುಃಖವನಾಂತು
ಮೋರೆಯಲಿ ಮಾರಿ ಮಿಡಿಯುವ ನಗೆಯ ತಳೆದಿಹಳು.
ವಿತ್ತವಿದೆ; ಗೊತ್ತಿಲ್ಲ. ರೂಪವಿದೆ ಬಳಿಸಾರ್ವ
ಬಾಳ ನಾಯಕನಿಲ್ಲ; ಒಮ್ಮನದಿ ಬೆಳೆದಿಹಳು,—
ಒಂದು ದಿನ ಇದು ಎಲ್ಲ ಮುಗಿವುದೆನುವ ವಿತಂತು.

# ಪ್ರಥಮ ಪ್ರಯತ್ನದ ಕವಿ

ವಾಗ್ದೇವಿ ಭಾಂಡಾರ ಮುದ್ರೆಯೊಡೆದಿಹ ರನ್ನ
ನಾನಲ್ಲ. ಹೇಳಿದರೆ ನಾನೆ ಹೇಳುವದೆಂದು
ಯಾವ ಮಹರಾಯನೂ ಹೇಳಿಲ್ಲ. ನಾನಿಂದು
ತಿಳಿದಿಲ್ಲವಹುದೆಂದು ಸಕಲಗುಣಸಂಪನ್ನ.
ಇಲ್ಲಿರದು ಬಹುರೀತಿ, ದಂಗುವಡಿಸುವ ಶಬ್ದ
ಬಿರುದುಬಿದ್ದಣವಿರವೆ ಬರೆಯುವುದ್ಯಮಕಿಂತು
ಅಣಿಗೊಳುವದೇಕೆನಲು,— ಮೂಕಭಾವವನಾಂತು
ಮುನ್ನೋಡಿ ಬರೆಯುವೆನು: ಅದು ನನ್ನ ಪ್ರಾರಬ್ಧ.

ಒಂದು ದಿನ ತಾನಾಗಿ ತೆರೆಯುವದು ಭಾಂಡಾರ.
ಮುಂದೊಮ್ಮೆ ತಲೆದೂಗಬಹುದು ರಸಿಕರು ಬಂದು.
ನನ್ನ ಕಾವ್ಯದ ಭವ್ಯ ಭವನದಲಿ ಸರಸತಿಯು
ಬಂದು ವಾಸಿಸಬಹುದು, ಹೆಚ್ಚುತಿರೆ ಸಿಂಗಾರ.
ನೆರವಣಿಗೆ ಬೇಕೆನುವ ಬುದ್ಧಿಗಿಲ್ಲವೆ ಮಿತಿಯು ?
ಬಾಳುವರೆ ಮೊದಲಗಿತ್ತಿಯು ದುರ್ನಯದಿ ಕೊಂದು !

## ವಿಮರ್ಶಕ, ೧೯೩೩

“ ಪದ್ಯವನು ಬರೆವ ಚಟ ಹೆಚ್ಚಾಯ್ತು, ದುಃಸಾಧ್ಯ,
ದೈವವಶವೀ ಕವಿತೆ. ‘ಉದ್ಯಮ’ವ ಗೈಯ್ಯುವರು
ಎಲ್ಲ ವೊದ್ವರು ಇದನು; ತಿಣಿತಿಣಿಕಿ ಬರೆಯುವರು.
ಇದರಿಂದ ನಮಗೆ ತಗಲುವ ಹಾನಿಯನವದ್ಯ.
ಕಿತ್ತುಹಾಕಿರಿ ಕವಿಯ; ಕಾವ್ಯಧೇನುವು ವಧ್ಯ.
ಗದ್ಯವನು ಬರೆಯುವದು ” ಎಂದು ನಿಶ್ಚಯಿಸುವರು
ಇಂದಿನ ವಿಮರ್ಶಕರು. ಕವಿಯಲ್ಲದಣ್ಣದಿರು
ಇದಕೆ ತಲೆಹಾಕುವರು: ‘ಅಹುದು ಗದ್ಯವು ಹೃದ್ಯ’.

ಕವಿಗಳರ್ಥವ ತಿಳಿಯದಲೆ ಹರಟುತಿಹರಿಂತು.
ಕಾವ್ಯವನು ಕೊಲ್ಲಲೆಣಿಸುತ ಗದ್ಯವನೆ ಕೊಂದು
ಬಾಳುವರು. ಪದ್ಯಗದ್ಯಗಳೆರಡು ಅನುಭವದ
ಅರ್ಧನಾರೀಶ್ವರನ ರೂಪಗಳು. ಉತ್ತಮರ
ಗದ್ಯಪದ್ಯಗಳೊಂದೆ. ನಮಗೆ ಬೇಕಿಹುದು ಹದ.
ಅದುವೆ ದೈವಾಯತ್ತ. ಶಬ್ದಮಯವೀ ಸಮರ.

# ನವ್ಯ ಸಾಹಿತಿ

ನೀವೆ ಟ್ರೀ. ಕಾ. ಏನು ? ಅಲ್ಲಗಳೆಯುವಿರೇಕೆ ?
ಆ ಹೆಡಿಗೆ ಪಾವುಡವೆ ಹೇಳುವದು. ಅದು ಕುರ್ಚಿ,—
ಇತ್ತ ಬನ್ನಿರಿ ಹಸೆಯ ಮೇಲಿಂತು. ಊಂ ? ಚರ್ಚೆ ?
ಆಧುನಿಕ ಕವಿತೆಯನು ಕುರಿತೊ ? ಮೋರೆಯ ಮೇಕೆ-
ಕಳೆಯ ಕಳೆಯಿರಿ ಮೊದಲು ! ಸಾಲೆ ಹುಡುಗರ ಕೇಕೆ-
ಯೆನ್ನುವಿರ ಈ ಕವಿತೆ ? ಇಲ್ಲಿ ನೋಡಿರಿ, ಬರ್ಚಿ !
ಹೃದಯದಲಿ ನಾಟುವದೊ ? ಅಂತೆ ಕವಿತೆಯು. ಮೂರ್ಛೆ
ಹೋಗುವಿರ ಪ್ರಾಸರಹಿತವು ಎಂದು ? ಅದು ಏಕೆ ?

ಹೆಂ.ಟ್ರೀ.ಕಾ,ಗಂ.ಟ್ರೀ.ಕಾ. ಯಾವ ಟ್ರೀ.ಕಾ. ನೀವು?
ಷಟ್ಪದಿ, ಷಡಕ್ಷರಿಯು ಬೇಕೆ ? ಆ ಷಟ್ಶಾಸ್ತ್ರ-
ದಾವರಣ ಬೇಕೆ ಕವಿತೆಗೆ ? ನಿಮಗೆ ಬ್ರಹ್ಮಾಸ್ತ್ರ
ಬೇಕಿಹುದು. ಇಂತೇಕೆ ? ಭೋಂಕನೆದ್ದಿರಿ ಬಿಟ್ಟು
ಚರ್ಚೆಯನು? ಮೌನದಲಿ ಬುಸುಗುಡುತಿಹುದು ಸಿಟ್ಟು!
ಇಲ್ಲಿದೋ ! ನಾನು ಪರಬಿಟ್ಟ ನಾಗರಹಾವು !

# ಮದುವೆ

" ನಿನಗೆ ಒಳ್ಳೆಯದಿರಲಿ; ಇಂದಾದೆ ಸಕುಟುಂಬ.
ಮರೆಯದಿರು ಗೆಳೆಯರನು " ಎಂದಿತಾ ಪರಿವಾರ
" ಆ ಮನೆಗೆ ಕರೆಸುತ ನಮ್ಮನೆಲ್ಲ ವಾರಂವಾರ
ನೆರಸಿ ಮಾಡಿಸಬೇಕು ಸವಿಮಾವಿನುಕಡಂಬ,
ಚಕ್ಕುಲಿ ಜಿಲೇಬಿಯನು ನೆಲ್ಲಿಕಾಯಿಗುಳಂಬ-
ವನು ಬಡಿಸಬೇಕೆಂದು. ಹಚ್ಚುತುಪ್ಪುಕಾರ-
ವನು ಕೊಡದಿರವಲಿಯನು. ಅಲ್ಲವದು ಆಚಾರ
ನೋಡು ಹೀಗಿರಬೇಕು ಹೊಸ ಬಾಳಿನಾರಂಭ ! "

ನಸುನಕ್ಕು ಹಸೆಯ ಮೇಲ್ ಕುಳಿತ ಮದುಮಗನೆಂದ :
" ಆಹ ! ಒಳ್ಳೆ ವಿಚಾರ ! ಲಗ್ನವಾಗಿಹ ನೀವು
ಎಷ್ಟು ಜನರನು ಕರೆಸಿ ಸರಸಗೋಷ್ಠಿಯಲಿಹಿರಿ ?
ಮದುವೆಯಾಗಲು ಒಂದು ಹೊಟ್ಟೆ ಎರಡಾಗುವದು,
ಎಣಿಸದಷ್ಟಾಗುವವು. ಹಸಿವ ಹಿಂಗಿಸಲೆಂದು,
ಸವಿಯುಣಿಸನುಣಲು ಹಾಕಿದ ಹೊಂಚೊ ಈ ಲಹರಿ ?"

# ಎರಡು ದನಿಗಳು

“ ಅದು ಇಲ್ಲ ! ಇದು ಇಲ್ಲ ! ಯಾವುದೇನೆನಗಿಲ್ಲ-
ವೆನಬೇಡ. ಎಲ್ಲವಿದನಾರು ಪಡೆದರು, ಹೇಳು ?
ದೈವವಿತ್ತಿಹ ಕೂಳು, ದೇವನಿತ್ತಿಹ ತೋಳು-
ಬಲವ ನಂಬಿರಬಾರದೇ ! ಆಲಿಸೀ ಸೊಲ್ಲ !
‘ ಬಾ ’ ಎಂದವನೆ ಗೆಳೆಯ; ಬಾಯ್ಗೆ ಬಿದ್ದುದೆ ಬೆಲ್ಲ !
ಕೊರೆದಿಟ್ಟ ತಾಣದಲಿ ಕೊನರುತಿರಲೀ ಬಾಳು.
ಫಲೋನ್ಮುಖತೆಯಾ ಕಾಲ ಬರಬಹುದು, ತುಸು ತಾಳು.
ಹಾಡಿ ದೂರುವ ಕವಿಯು ಬರಿಯ ಮಾತಿನ ಮಲ್ಲ ” !

“ ನೀನೊರೆಯುವದು ನಿಜವು. ಸೃಷ್ಟಿಯಲಿ ವೈಷಮ್ಯ-
ವಿಹುದೊ ನಮ್ಮೊಳಗಿಹುದೊ,— ತಿಳಿಯದಾಗಿಹು-
ದೆಮಗೆ.
ಈ ಪ್ರಪಂಚದ ಹೊಂಚೆ ಬೇರೆಯಿರಬೇಕಿನ್ನು.
ಇಲ್ಲದಿರೆ ನಾವ್ ಬದುಕುವದೆ ಪಾಪ, ಅಕ್ಷಮ್ಯ.
ಬೇರೆ ನೆಲ ಬೇಕಿನ್ನು, ಇಲ್ಲದಿರೆ ಹಣೆಗಣ್ಣು.
ಇಂತಿದರ ಭಾವವಿದೆ ಎಂತು ಬರಬಹುದೊಸಗೆ ? ”

# ಸೆರೆಯಾಳು; ದಾರಿಹೋಕ

“ ಹಾಯ್ ! ಹಾಯ್ ! ಉಳಿಸೈ ! ಕತ್ತಲೆಯ ಚಲಿಸೈ !
ಕೊತ್ತಳದ ನೆಲಮನೆಯ ಬುಡದಲ್ಲಿ ಬಳಲುವೆನು.
ಕಾಣಲಾರದೆ ಕೇಳಲಾರದೆಯೆ ತೊಳಲುವೆನು !
ಉದ್ಧರಿಸು ! ಈ ಸಮಸ್ಯೆಯನು ಬಗೆಹರಿಸೈ ! ”
ಗೋಡೆಯೊಳಮೈಯಣಕವಾಡುತಿದೆ : “ ಸೈ ! ಸೈ !
ಸೆರೆಸಿಕ್ಕ ಪಾಪಿಗಿಹ ದುರ್ದೈವವೈಸೆ !
ಕೊಳೆಯುವದೆ ದಿಟವು. ಉಳಿಯುವದು ಬರಿ ಆಸೆ !”
ಎನುತಿಹದು ಆ ದನಿಯು. ಓ ! ಪರಾಂಬರಿಸೈ !

ಆಲಿಸಿದ ದಾರಿಹೋಕನು ಮರುಚಣದಿ ನುಡಿದ :
“ ಕೋಟಿಕಟ್ಟುವ ಶಾಸ್ತ್ರವೆಂದುಗಮಿಸಿತೊ ಅರಿದು.
ಕೋಟೆಯೊಡೆಯರದಿಂತು ನೆಲಮನೆಯ ಸೆರೆಮನೆಯ
ಮಾಡುವದು ನೀತಿಗಮ್ಯವೊ ಏನೊ ನಾ ತಿಳಿದು
ನಿನ್ನ ನಡತೆಯ ಪರಿಕಿಸುತ ಮೇಲ್ವಿಚಾರಣೆಯ
ಮುಗಿಸಿ ತಿಳುಹುವೆ ” ನೆಂದು ಪುಣ್ಯಾತ್ಮನವ ನಡೆದ !

# ಪ್ರಶ್ನೆ

ನೀನು ನಡೆಯುವ ದಾರಿ ನನ್ನದಿರಲೆಂದು ನಾ
ಬೇಡುವೆನು ಅನುದಿನವು. ನಿನ್ನ ಹೆಜ್ಜೆಯ ಗುರುತು
ನನ್ನ ಬಿಜ್ಜೆಯದಾಗಲೆಂಬ ಹರಕೆಯ ಹೊರತು
ಮತ್ತಾವುದನು ತಿಳಿಯೆ. ಬಯಲಿನಾ ಕಾಡಿನಾ
ಸುಳಿವಿನಲಿ ನೀನಿರುವ ಹೊಳವಿರಲಿ ಚಿಧ್ನನಾ!
ನನ್ನ ಸಂಗಡಿಗ ನೀನೆಂಬ ಸಂಗತಿಯರಿತು
ನಡೆದ ದಾರಿಯೆ ದಾರಿ. ಸಾಗುವೆನು ಮೈಮರೆತು
ನಿನ್ನ ಜೊತೆಯಲಿ ಬೆರೆತು. ನೀನೆ ಇಲ್ಲದ ವಿನಾ

ಬಾಳುವೆ ವಿನಾಶವದು! ಕಂಡು ಬಿಡಬೇಕೆಂಬ
ಹಂಬಲವು ನನಗಿಲ್ಲ. ಬಾ ಬಳಿಗೆ ನೆಳಲಾಗಿ
ಕಾಣದಲೆ, ಸುಳಿಗಾಳಿಯಾಗಿ ಮೈಸೋಂಕದಲೆ!
ನಿನ್ನ ದನಿಯಲೆಯಂಚೆ ಬರಲು ನಿನ್ನನು ಕಾಂಬ
ಹಿಗ್ಗು ಬರುವದು ತಡವೆ? ಪಯಣ ಮುಗಿದಿರಲಾಗಿ
ನಲುಮೆಯಿಂದೊರಗುವದು ತಡವೆ ನಿನ್ನಂಕದಲಿ?

# ಉತ್ತರ

ದಾರಿಹೋಕನೆ ! ಕೇಳು ! ನಾಸಿರುವೆನೇಕಾಂಗಿ !
ರಾಜವೀಥಿಯಲಲೆಯುತಿರುವೆ ನಾನನುದಿನವು.
ಕಾಯುವೆನು ಮಂದಿರದ ಒಳಹೊರಗು, ಜನಮನವು
ಒಲಿಯಬಹುದೇನೆಂದು. ಒಂದು ಮರದಡಿ ತಂಗಿ
ನೋಂತಿಹೆನು ಚಾತಕವ್ರತದಿ ದುಃಖವ ನುಂಗಿ !
ಆರೋಗಣೆಯು ಇಲ್ಲ; ಇಲ್ಲದಾಗಿದೆ ತನುವು !
ಕೊರಗುವೆನು ಯಾರಿಲ್ಲವೆಂದು ನನಗಿಂತನುವು-
ಆಪತ್ತು ಬರಲೊಮ್ಮೆ. ಎಲ್ಲರೆದೆಯೊಳಗಿಂಗಿ

ಕಾಣದಾಗಿದೆ ನಲುಮೆ. ಅಂಗವಿಸಿ ಬಹ ಮಂದಿ
ಶೃಂಗರಿಸುವರು ನನ್ನ ಪ್ರತಿಮೆಯನು, ಕಂಡರಿಸು-
ವರು ಶಿಲಾಮೂರ್ತಿಯನು ! ಭೇದಿಸುವರಿಂತೆನ್ನ
ಹೃದಯವನು. ಯಾವ ಯಾತ್ರಿಕರು ಮಂತ್ರಿಸಿ
ಸ್ಫುರಿಸು-
ವರೊ ನನ್ನ ಭಾವನೆಯ, ನನ್ನ ಸನ್ನಿಧಿ ಹೊಂದಿ,—
ಮಾರಿಕೊಂಡಿಹೆನವರ್ಗೆ ಮೀಸಲಾಗಿಹ ನನ್ನ !

## ಕನಸು - ನನಸು

ದುಃಖಾಶ್ರುವಿನ ಪಸರದಿಂದ ಜನಿಸಿದ ಮಂಜು,
ಅಜ್ಞಾನದಾವರಣ, ಕನವರಿಕೆ, ಅನುತಾಪ-
ದಲಿ ಕಳೆವ ಸಂತಸವು, ಸಿರಿಯೆಂಬ ಹಿರಿನಂಜು,
ಬಟ್ಟಬಯಲಾಗುತಿಹ ಪ್ರೀತಿಯೆಂಬೀ ಧೂಪ
ನಮ್ಮ ಭಾವನೆ ತಂದ ಮೇಲುಬೆಳಕಿನಭಾವ
ನಿಷ್ಕರುಣೆ, ಇದರಿಂದ ಕುರುಡಾಗಿಹುದು ಕಾಣ್ಕೆ.
ಜೀವದಮರಾಪಗೆಯು ತೊರೆದು ತನ್ನಯ ರಾವ
ಮಳಲಿನಲಿ ಹಿಂಗುವಳು,— ಇದುವೆ ನಮ್ಮಯ ಮಾಳ್ಕೆ!

ಬರಿದಾದ ಎದೆ, ಶೂನ್ಯವಿಹ ದಿಶೆಯು, ನಿರ್ಗತಿಕ-
ರಳುದನಿಯು: ಇದರಲ್ಲಿ ಮುಸಣವನೆ ಹೊಂದಿದವು
ಎದೆಯ ತೃಷೆಯನು ಹಿಂಗಿಸುವ ಬುಗ್ಗೆಗಳು; ಪಥಿಕ-
ರನು ಪೊರೆವ ದಾರಿಕೈದೀವಟಿಗೆ ನಂದಿದವು!
ದೇವನಿತ್ತಿಹ ಕನಸುಗಳು ದಿವ್ಯಲೀಲೆ, ಕಂದ!
ನೋಡು ನರನವಕೆಲ್ಲ ಸಿಡಿಲೆರಗಿಸಿರುವಂದ!

# ಸ್ತ್ರೀ

ಬ್ರಹ್ಮನಿತ್ತಿಹ ಮನಸು, ವಿಷ್ಣುವಿತ್ತಿಹ ಕನಸು,
ರುದ್ರನಿತ್ತಿಹ ಮುನಿಸನಳವಡಿಸಿಕೊಳುತಿಲ್ಲಿ
ನೀ ಬೆಳೆದೆ ಗಂಡೆದೆಯ ಕಣ್ಣೆ, ಹೆಣ್ಣೇ! ನೆನಸು
ನಿನ್ನ ರೂಪ-ವಿರೂಪಗಳ ನೆನೆದಿರುವಲ್ಲಿ.

ಮುಂದಾದೆ ‘ಚಂದ್ರಮುಖಿ’, ‘ಕುಂದ ಕುಟ್ಮಲರದನೆ’
‘ಮೀನಾಕ್ಷಿ’, ‘ಹರಿಣಿ’, ‘ಬಿಂಬಾಧರೆ’ಯು ‘ತನ್ವಂಗಿ’
ಭೂಮಿಯಲಿ ಸ್ವರ್ಗದಾ ಸುಖವೀಯುವಂದವೆನೆ
ಕೀರ್ತಿವೆತ್ತಿತು ನಿನ್ನ ರೂಪ-ಧ್ವನಿ-ರಸಭಂಗಿ!

ಎಲ್ಲರಂತೆಯೆ ದೇವ ನಿನ್ನ ಸೃಜಿಸಿದನು, ಹೆಣ್ಣೆ!
ಸ್ವಪ್ನದಾಭರಣಗಳ ತಂದು ತೊಡಿಸಿದನು ಕವಿಯು.
ಎಲ್ಲರಂತೆಯೆ ಅರ್ಧಚೈತನ್ಯ, ಅರ್ಧಮಣ್ಣೆ!
ಅರ್ಧ, ಬಾಳಿನ ರವಿಯು, ಅರ್ಧ,— ಬಾಳುವೆಯ ಗವಿಯು.

ಕವಿ ವರ್ಣನೆಗೆ ಸೋತು ನಿನ್ನೆಡೆಗೆ ಬರುವ ಗಂಡು
ಮರಳುವದು ಅಲ್ಲಿಯೂ ದೇವಸೃಷ್ಟಿಯನು ಕಂಡು!

# ನಲ್ಲ - ನಲ್ಲೆ

ನನ್ನಾಕೆ ಇವಳು ತಾ ಬಲು ಬಿಂಕದಾಕೆಯೆನೆ
ಒಮ್ಮೆ ಬಿಮ್ಮನೆ ಬಿಗಿದು ನಿಲ್ಲುವಳು. ನೂರು ಸಲ
ಮಾತನಾಡಿಸಲೇನು ? ಸುಮ್ಮನಿರುವಳು, ಕಮಲ
ಸುರಭಿಯನು ಹೊರದೂಡುವಂದದಲಿ. ' ಸುಮ್ಮಾನೆ !
ಇಂತೇಕೆ, ಮಾನಿನಿಯು ?' ಎಂದು ಕೆಣಕಲು ತಾನೆ
ಸಲಿಲಮಯವಾಗುವದು ನೇತ್ರ. ನಲ್ದಾಯಮಳ-
ರಲ್ಲವೇನೆನೆ ನಾವು, ಕೋಡಿವರಿಯುವ ಹೊನಲ
ಧಾರೆ ಸಂತತವಾಗಿ ಹರಿಯುವದು, ನನ್ನಾಣೆ !

ಇನ್ನೊಮ್ಮೆ ಕಮ್ಮಲರ ಕೋದು ಮುಡಿಯಲ್ಲಿಟ್ಟು
ಹೊಂದಟ್ಟೆಯಲ್ಲಿರುವ ವೀಳ್ಯ ಹೊಂದುಟಿಯನ್ನೆ
ನೋಡುತಿರೆ ನಸುನಗುತ ತಡೆಯುವಳು ಮನದನ್ನೆ.
ನಿದ್ದೆ ಬರಲೆಚ್ಚರಿಸುವಳು ಮೆಚ್ಚಿ, ಕಣ್ ಚಿವುಟಿ,
ಮೆಯ್ ಸೋಂಕಿ. ಮಾತುಕತೆಗಿಲ್ಲ ಸೀಮೆಯು ಕಟ್ಟು,
ಅಂದೆಲ್ಲ ನುಡಿಸುವಳು ಎದೆಯ ತಂತಿಯ ಮೀಟಿ.

# ಪ್ರೀತಿ

ರಮಣನೊಡಗೂಡಿ ನೆರೆದಿಂಗಳೂಟವನುಣಲು,—
ಅವಳಿಗೆನಿಸಿತು ಬಾಳ್ವೆ ಸುಖದ ಬಿದ್ದಣವೆಂದು.
ಭಾವಿಸಿದಳವಳದುವೆ ಚಿಂತೆಗಿಹ ಬಯಲೆಂದು
ನೋಡ ನೋಡುತ್ತ, ನಸುವೆ ಓರೆಯಾಗಿರೆ ಹಗಲು.
ಮಳೆಯಾಗಿ ಮಿಂಚು ಸಿಡಿಲಿಂದ ಕೂಡಿರೆ ಮುಗಿಲು,
ಸೂರ್ಯನಾರಾಯಣನು ಕಾಣದಾಗಿರೆ, ನೊಂದು
ಥೇನಿಸಿದಳಾ ಸತಿಯು ಬಾಳುವೆಯ ಕುರಿತಂದು :-
ಇದು ಭಯಾನಕವಾದ ಕೂಟಪ್ರಶ್ನೆಯು, ದಿಗಿಲು !

ಮುಂದೊಮ್ಮೆ ನಲ್ಲನೊಡಗೂಡಿ ಸಮರಸವಾಗಿ
ಬೆರೆತಿರಲು ಹೊಳೆಯಿತೀ ಮಾತವಳ ಚಿತ್ತದಲಿ :
ಬಾಳುವೆಯು ನಲುಮೆಯಿಂದಿತ್ತೊಂದು ಮುತ್ತಲ್ಲೆ ?
ಪ್ರೇಮಯುಗಲಕೆ ದೇವನಿತ್ತ ಕಾಣಿಕೆಯಲ್ಲೆ ?
ದೇವದೇವನು ಕೂಡ ಬರುವ ಮೋಹಿತನಾಗಿ,—
ಅನುದಿನವು ಜೀವಿಸಲು ನಾವಿಂತು ನೇಹದಲಿ !

# ಇಬ್ಬಗೆ

ಪ್ರೀತಿಪಾತ್ರರು ತಾವು ದೂರವಿರುತಿರುವಾಗ
ಮುಗಿಲ ಚಿಕ್ಕೆಯನೆಣಿಸೆ ಬರುವ ರೋಮಾಂಚನವು
ಬರುತಿಹುದು. ಪ್ರೀತಿಯೊಳಗೊಂದಮೃತಸಿಂಚನವು
ಕಾಣುವದು. ಒಲಿದವರ ರೂಹು ಮರೆಯಾದಾಗ
ಎದೆ ಕೊರಗುವದು ಕೇಳಿ ಎಂದು ಬಹರವರೀಗ ?
ಹಾತೊರೆಯುವದು ಒಲುಮೆಗಣ್ಣು ತನಗಂಜನವು
ಬೇಕೆಂದು. ಬಂದಿರುವ ಕನಸು ನಿರ್ವಂಚನವು
ಅಂದೆಲ್ಲ. ಮುಂದೊಮ್ಮೆ ಪ್ರಿಯರು ಬಂದಿರುವಾಗ

ಮೂಗವಡಿದಿದೆ ಬಾಯಿ. ಬೇಸರಿಯುವದು ನೇತ್ರ.
ಕೇಸರಿಡುವದು ಮನವು,— ಏಕಾಂತಮಯವಿರಲಿ
ಬಾಳು ಕಾಂತಾರದಂತೆಂದು ಒಡಸುಡಿಯುವದು.
ಇದುವೆ ಪ್ರೀತಿಯ ಸೂತ್ರ : ಎಂದಿಗಿರದು ಸುಸೂತ್ರ !
ಬರವ ಬಯಸುವದಿರವ ಸಹಿಸದದು ! ಕೆಳೆಯಿರಲಿ,
ಮದುವೆಯೂ ಮುದವಿರಲಿ,— ಇಂತದಿಬ್ಬಗೆಯಿಹುದು!

# ರಿಂಗಣ

ಚೆಲುವು 'ಬಾ' ಎಂದು ನಿಂತಿದೆ ಹಾಕಿ ರಿಂಗಣವ
ಮುಗಿಲಂಗಣದಿ ಅಮರಜ್ಯೋತಿಗಳು ತೂಗಾಡಿ
ಕೇಳುವವು: "ಎಲ್ಲಿಹನು ನಮ್ಮೊಡತಿಯೊಡನಾಡಿ?'
ಮುಗಿಲಿನೊಳಮುಗಿಲಿಂದ ದನಿಯೊಂದು ಪ್ರತಿಕ್ಷಣವು
ಮೊಳಗುವದು: 'ಮೂರ್ಮುಲಿವ ಸಾಹಸಿಯು ತಾ ಪಣವ
ಕಟ್ಟಿ ಬಂದನೆ? ನರ್ತಕನು ಬೇಕು ಸರಿಜೋಡಿ'.
ಇಂತು ಚಿರಯೌವ್ವನವಿಲಾಸದಾಟವ ಹೂಡಿ
ಚೆಲುವು ನಿಂತಿದೆ ಕೆರಳುತಖಿಲ ಸೃಷ್ಟಿಯ ಮನವ.

ಅಣಿಯಾಗುವನು ನರನು ಕುಣಿತದಲಿ ಮನ-ಬುದ್ಧಿ-
ದೇಹ-ಪ್ರಾಣಗಳೆಲ್ಲ ಲಯವಿರಲು. ಹೆಣ್ಣೊಂದೆ
ಅವನ ಬಿಣ್ಣವ ಕುಂದಿಸಿಹುದು ಸಿರಿಗುಣಿತದಲಿ.
ಚೆಲುವುಗಾತಿಯು ಒಂದು ಮಳೆಬಿಲ್ಲ ಮಣಿತದಲಿ
ದಣಿಯುವವು ಗೋಲಗಳು. ಬಯಕೆ ತೀರಿಸಲೊಂದೆ
ಅವಳ ಪರಮೋಪಾಯ: ಪ್ರಳಯನೃತ್ಯದ ಸಿದ್ಧಿ!

# ಪ್ರಕೃತಿಯಲ್ಲಿಯ ಪುರುಷ

ಸೃಷ್ಟಿನಿರ್ಮಾಣದೊಳಗಿರುವ ದೇವನ ಗುಟ್ಟು
ಹೊಳೆಯಬಹುದೆಂದೆಣಿಸಿದಾ ಕನ್ನೆ ಮಿಡುಕಿದಳು
ಅದರ ಸುಳಿವಿಲ್ಲೆಂದು. ಸಂಭ್ರಮಿಸಿ ಹುಡುಕಿದಳು
ಮುಕುಲನಿಕರವ, ಪುಷ್ಪಮಂಜರಿಯ ಮುತ್ತಿಟ್ಟು.
ಪ್ರಕೃತಿಯಾಚೆಗೆ ಪುರುಷ; ನೋಡಿದಳು ಮನವಿಟ್ಟು :
ಚೆಲುವ ಚೈತನ್ಯವನು ಪಡೆಯಲತಿ ದುಡುಕಿದಳು.
ಪರಮ ಪುರುಷನ ಕಾಣಲಿಂತವಳು ಮೊರೆಯಿಡಲು,—
ಅವನು ಮರೆಯಾಗುವನು ರೂಪವನು ಬಚ್ಚಿಟ್ಟು !

ಕೊನೆಗೊಮ್ಮೆ ನೋಡಿದಳು ಕಣ್ಣೆತ್ತಿ ಮುಗಿಲೊಳಗೆ.
ಧೀರ ಗಂಭೀರವಿಹ ರಜನಿ ಮೇಳವಿಸಿತ್ತು.
ಎಣ್ದೆಸೆಗಳಲಿ ಭೋಂಕನೆದ್ದ ಸೆಳೆಮಿಂಚಲ್ಲಿ
ಮುಗಿಲೊಡ್ಡಣದ ಮೇಲೆ ನಿಡಿದೋಳ್ಗಳನು ಚೆಲ್ಲಿ
ನಿಂತು ತಕ್ಕೈಸಿತ್ತು. ನಿನದಿಸಿರೆ ನಭದೊಳಗೆ
ಓಂಕಾರವೆಂಬಂತೆ,— ಮೊಳಗೊಂದು ಮೊಳಗಿತ್ತು.

# ಬಿನದ

ಜೀವನದ ಜ್ವಾಲೆಗಳು ಸುಟ್ಟ ಹೃದಯವು ಬೆಂದು
ತಾಳಲಾರದೆ ನೋವ, ತನ್ನ ತಾ ಮರೆಯಲೆನೆ
ಬಿನದವನೆ ಮರೆಹೊಕ್ಕು ತೋಯುವದು ತಪತಪನೆ
ಸರಸಗೋಷ್ಠಿವಿಹಾರದೊಂದು ರಚನೆಯಲಿಂದು.
ಜಕ್ಕವಕ್ಕಿಗಳ ಬೆಳದಿಂಗಳೂಟವ ತಂದು
ತಿನಿಸುವದು. ಹೂಗಣೆಯ ಗುರಿಯನೆಸಗುವ ಸ್ಮರನೆ
ಬಂದಂತೆ ಕುಣಿಸುವದು. ಇಳೆಯ ಸ್ವರ್ಲೋಕವೆನೆ
ಹರಡುವದು ಸುಖದ ನರುಗಂಪನೆಲ್ಲೆಡೆ. ಎಂದು

ಬಹುದಿದಕೆ ಮಿಗಿಲಾದ ಹಿರಿಬಿನದ ? ಕಾರ್ಮೋಳಗು
ನಿನದಿಸಲು ಮುಗಿಲೋಳಿ ಮುತ್ತಿ ಮೇಲೂ ಕೆಳಗು
ಆಣೆಕಟ್ಟೆನುವಂತೆ ನಿಂತು ಮಳೆಗರೆಯುತಿದೆ,—
ಶಾಂತಸುಂದರನಾಗಿ ಒಂದು ಮೆಲುನಗೆ ನಕ್ಕು
ಮೆಲ್ಲಡಿಯನಿಡುವ ಬೆಂಗದಿರನನು ನೋಡಿದಿರೆ ?
ಹಿರಿಬಿನದವದು; ಬಂತು ಉಬ್ಬೆಗಡೆದೆಯ ಹೊಕ್ಕು.

# ಎರಡು ಜ್ಯೋತಿಗಳು

ಸುಪ್ಪಿಗೆಯ್ಯುವೆ ನಿನ್ನ ಬಾ ! ಬಾ ! ಪರಂಜ್ಯೋತಿ
ಇಂತು ಹವ್ವಗೆ ಬಂದೆ ತಮಸಿನೆದೆಯೊಳಗಿಂದ.
ನಿನ್ನ ಮೋರೆಯಲಿಹುದು ಚಕ್ರಪಾಣಿಯ ಚಂದ
ಅಲ್ಲದಲೆ ನಿನ್ನದಿದೆ ಲೋಕೈಕ ವಿಖ್ಯಾತಿ !
ನಿನ್ನೊಳೊಗುಮಿಗುತಿರುವ ತೇಜದೊಂದು ದಿಧೀತಿ
ತರಿದು ಪರಿವರಿಯಾಗಿ ಮಾಡುವದು ನೋವುಗಳ,
ಮಾಲೆಯಾಗಿಸಿ ಧರಿಸಿ ಸಾವುಗಳ ಹೂವುಗಳ !
ಕಲ್ಲೆದೆಯ ಮಲ್ಲಿಗೆಯನಾಗಿಸುವದೀ ರೀತಿ.

ಹೃದಯಕಾಸಾರದೆಡೆ ನೀಲೋತ್ಪಲ ಪ್ರಸರ-
ಸಮವಿರುವ ನಲುಮೆಯಂತಃಪುರದಿ ಮಿನುಗುತಿಹ
ಚೆಲುವ ನಂದಾದೀಪ ! ಈ ಹಿರಿಮೆ ನನಗೆಂದು ?
ಅನುದಿನವು ಕಾಯುವೆವು ಒಳಗಿನಿಂದಿದು ಪ್ರಖರ-
ವಾಗಿ ಬಂದೀತೆಂದು. ಅಂತು ಬರೆ ಕೊರಗುತಿಹ
ಮಾನವನ ಬಾಳುವೆಯು ಬಾಳ್ವುದಿಲ್ಲದೆ ಕುಂದು.

# ಧ್ಯೇಯ

ಅದೊ ಮಸಳುತಿದೆ ಗುರಿಯನಂತಕಾಲದ ಹಿಂದೆ.
ದಣಿದು ತೇಗುವ ಜೀವ ಮರಳುತಿದೆ. ಸಹಿಸಬೇ-
ಕಂತೆ ಕೋಟಲೆ ಕೋಟಿಗಟ್ಟಲೆಯೆ, ವಹಿಸಬೇ-
ಕಂತೆ ನಿರವಧಿ ಕಾಲವನು. ತಿಳಿವು ಬರದಿಂದೆ.
ಮೂಡಣದ ಮೂಡು- ಮುಳುಗುಗಳ ತೆರೆಗಳ ಹಿಂದೆ
ಅಸ್ತವಾಯಿತು ಗುರಿಯು. ಕನಸುಗಳ ಗಾಳಿಗೋ-
ಪುರದಾಚೆ, ಸುಖದ ಮಳೆಬಿಲ್ಲೀಚೆ, ಇಲ್ಲಿಗೋ !
ಬೇಹಿನವರನು ಕಳುಹು. ರಜನಿ ಕುಣಿವುದು ಮುಂದೆ !

ದೂರ ಮಸುಳಿದ ಗುರಿಯ ನೋಡಿ ದುಃಖಿಸಬೇಡ.
ಮೊಗ್ಗೆಯಿರದೊಮ್ಮೆಗಿಲೆ ಸುಮನವಾದಂಕುರವು
ಸುಗ್ಗಿಯಲಿ ಸಹ ಸಿಗದು. ಬರುವೊಂದು ಕಾಲದಲಿ
ನೆಲಮುಗಿಲು ಒಂದಾಗಿ ನಿಂತಿರುವದನು ನೋಡ !
ವಿಶ್ವಪತಿಯಾಗಿರುವ ಜೀವಕೆಲ್ಲಿಯ ಮರೆವು ?
ಸೂರ್ಯಚಂದ್ರರು ನರ್ತಿಸುವರದರ ತಾಲದಲಿ !

# ತಿರುಗಿ ಬಾ ! ಹೃದಯವೇ !

ತಿರುಗಿ ಬಾ ! ಹೃದಯವೇ ! ಹುಲ್ಲುಮಾನವರೊಡನೆ
ದಂದುಗವು ಸರಿಬರದು. ನಿನ್ನ ಪಲ್ಲವನೇತ್ರ
ಬೆಳಗುಜಾವವಿದೆಂದು ಮೋಹಗೊಂಡಿತು ಮಾತ್ರ.
ಅಲ್ಲಿಹುದು ಕತ್ತಲೆಯ ಮೊನೆ, ಹೇಯವಿಹ ನಟನೆ!
ತಿರುಗಿ ಬಾ: ತ್ಯಜಿಸಿಬಿಡು ರಜನಿಯನು, ಆ ಮೃಡನೆ
ಮುಟ್ಟದಿಹ ಬೂದಿಯನು. ಇನ್ನು ಮೌನವೆ ಸೂತ್ರ-
ವಾಗಿರಲಿ. ಅಂತಿರಲು ಈಶಕರುಣೆಗೆ ಪಾತ್ರ-
ವಾಗುವುದು ದಿಟ. ಹೃದಯವೇ ! ಇನ್ನು ನೆನೆಯಿದನೆ !

ಮೌನವದು ಗಾನವನು ಹೊಂಬಸಿರಿನಲಿ ಹೊತ್ತು
ವಿಶ್ವವನೆ ರಚಿಸುವ ಮಹಾಶಕ್ತಿ; ಉರವಣಿಸಿ
ಕೊನೆಗೊಮ್ಮೆ ಭುವನವನೆ ಬೆಳಗಿಸುವ ಚಿನ್ಮಾಯೆ.
ಒಮ್ಮೆ ಕೊನರಲದಿಂತು ಆದಿಮೌನದ ಬಿತ್ತು,—
ಬಿಡಬಹುದು ಹದಿನಾಲ್ಕು ಲೋಕದವರನು ತಣಿಸಿ.
ಈ ದೇವಗರ್ಭ ಮೊಳೆವಂತೆ ಕರುಣಿಸು ತಾಯೆ !

# ಪ್ರತೀಕ್ಷಣೆ

ಮುಂದೇನು ? ಮುಂದೇನು ? ಓ ! ಹಸುಳ ಜೀವವೇ !
ನಿನ್ನ ಹಾರಿಕೆಯೆಲ್ಲಿ ? ಕತ್ತಲೆಯು ಕವಿದಿರಲು
ಮುಳ್ಳುಗಾಡನು ಸೇರಿ ಕಾಲೆಲ್ಲ ನವೆದಿರಲು
ನಿನ್ನ ನಂಬಿಕೆಯೆಲ್ಲಿ ? ಆಧಾರ ? ಭಾವವೇ
ನಿನ್ನನ್ನು ತಿನ್ನುತಿದೆ. ನಿನಗಾಗದಾದವೇ
ನಿನ್ನ ರಕ್ತವನುಂಡು ಬೆಳೆದ ತತ್ತ್ವಗಳಿರಲು
ಜಿಪುಣ ಜಿಗಳೆಗಳಂತೆ ? ವಿಷನೀಲವಿರೆ ಕೊರಲು
ಬುವಿಯು ವಿಷಮುವ ನುಂಗಿ ಕನಸೆಲ್ಲ ಕಳೆದವೇ ?

ಅರ್ಪಣವೆ ದೇವನನು ಬಿಂಬಿಸುವ ದರ್ಪಣವು.
ಸಹನಶೀಲತೆ ವಜ್ರದೆದೆಯ ಕರಗಿಪ ಜ್ವಾಲೆ.
ಸತ್ಯಪ್ರಿಯತೆಯು ನಿತ್ಯ ಬೆನ್ನಿಗಿರುತಿಹ ಬಲವು.
ಕಾಯುತಿರು, ಓ ಜೀವ ! ಮಾಯಬಹುದೀ ವ್ರಣವು.
ಆಗಬಹುದೀ ಬಾಳು ಧ್ಯೇಯಗಳ ಮೊಗಸಾಲೆ,
ಇಳೆಯ, ಮನೆ-ಮನವ ತುಂಬುತ್ತ ಬರಬಹುದೊಲವು.

# ಕರುಣೆ

ಅರ್ಥ ತಂದೊಡ್ಡಿರುವ ಹಿರಿ ಸಮಸ್ಯೆಗೆ ಸೋತು
ಕಾಮ ಹರವಿರುವಿಂದ್ರಜಾಲವೆಳೆಯಲಿ ಸಿಲುಕಿ
ಧರ್ಮ ಕಲೆಹಾಕಿರುವ ಸಂಕಟಗಳಿಗೆ ಜೋತು
ಬಿದ್ದ ಪರಿಹಾರವನು ನಿಲುಕಲಾರದೆ ನಿಲುಕಿ,—

ಮೋಕ್ಷದಾ ದಾರಿಯನು ಹೊನ್ನಿಹುಳಗಳ ತೆರದಿ
ಕಲ್ಪನೆಗಳಲೆದಾಡಿ, ಚಲಿಸಲಾರದೆ ನಿಶೆಯು,
ಘೋರತರವಾಗಿಸಲು, ಕಡುನೊಂದು ಸಂಗರದಿ
ಜೀವವಾಲ್ಪರಿಯುತಿದೆ, ನೋಡುತಿಪ ದಶದಿಶೆಯು.

ಎಲ್ಲಿಂದಲೋ ಬಂದ ಶಾಂತಿದೂತನು, ನೋಡು!
ಅಂದು ದೈವೀ ಕರುಣೆ ನಿನ್ನ ರಕ್ಷಿಸಿದಂತೆ
ಮತ್ತೆ ಸಲಹುವದೆಂಬ ಭರವಸೆಯ ಪಡೆ! ಓಡು!
ಬಾಳಿರದು ಪ್ರತಿಕ್ಷಣವು ನೀ ಪ್ರತೀಕ್ಷಿಸಿದಂತೆ.

ತಮದ ವರ್ತುಲವಹುದು ಬಾಳುವೆಯು ಅಂದು, ಇಂದು;
ಜ್ಯೋತಿಮಯವಾಗುವುದು ದ್ಯೋತಿಸಲು ಪ್ರಾಣಬಿಂದು.

# ಅಹಮಹಮಿಕೆ

ಸಾಕುಚಿಗರೆಯು ಹೋಗಿ ಗಿರಿಶೃಂಗದೆಡೆ ತೆರಳೆ
ಮೆಲುಮೆಲನೆ ಮನವಾರೆ ಹೊಳೆಯುವದು ಅದಕಿರುವ
ದಾಸ್ಯವದು. ನಗರದಲಿ ಮನೆಗೆ ಹೋಗುವ ಬರುವ
ಜನರ ಬೆರಳೊಳು ಮೂಗನಿಟ್ಟು ನಿಂತಿರುವೆರಳೆ
ಈಗ ನೆಗೆವುದು ಮುಕ್ತ ಜೀವನದ ಸ್ಮೃತಿ ಮರಳೆ
ಕಂಡು ಗಿರಿಕಂದರವ, ತಂಗೊಳದಡಿಯ ನಿಲುವ.
ನೆಗೆವನಾತುಮನಿಂತು ಕಂಡನಂತದ ಚೆಲುವ.
‘ನಾನೆಂ’ಬ ನಾಗರವು ಮಾತ್ರ ಆತುಮಗುರಲೆ ?

ಆಡಿಕೊಳ್ಳಲು ಬೇಡ, ಕೊಲಲೆಂದು ದುಡುಕದಿರು
‘ನಾನೆಂ’ಬ ನಾಗನನು. ಜ್ಞಾನರವಿಯುದಯದಲಿ
ಹೊರಗೆ ಬರಬಹುದದುವೆ ತನ್ನ ಬಿಲವನು ಬಿಟ್ಟು.
ಆಗ ಮಾಂತ್ರಿಕ ಪುಂಗಿಯೂದಿ, ಹೆಡೆಯೆತ್ತುತಿರು-
ವಾಗದರ ವಿಷ ಹೀರುವನು. ಮುಂದೆ ಧರಣಿಯಲಿ
ಮನ್ನಿಸುವನದ ಚಂದ್ರಮೌಳಿ ಕೊರಳೊಳಗಿಟ್ಟು !

# ದೈವ (೧)

ಬಲುದಿನಗಳಿಂದಿಡುತ ಅಷ್ಟಷಟ್ಪದಗಳನು
ಬೇಸರಾಯಿತು ಎಂದು ಹಿರಿಹೆಜ್ಜೆಗಳ ಹಾಕಿ
ಸಿರಿಗೆಜ್ಜೆ ಕುಣಿತದಲಿ ನಲಿಯುವೆನೊ! ಎಂದೆನಿಸಿ
ಬಂದು ನಿನ್ನಡಿಗೆರಗಿ ತಲೆವಾಗಿ ಕೈಮುಗಿದು
ನಿಂತಿಹೆನು. ಒರೆಯುವದು ನಿನ್ನ ಅರಸಾಣತಿಯ,
ನೀನಿತ್ತ ಗರಿಗಳನು ಚದರಿಸೆನೆ ದೆಸೆದೆಸೆಗೆ?
ನೀನಿತ್ತ ಒಳಹಾಡುಗಳನೊಯ್ದು ಮುಗಿಲ ಕಿವಿ
ಚಳತುಂಬು-ಬೆಂಡೋಲೆಯಾಗಿ ಮಾಡೆನೆ? ನಿನ್ನ

ಅಮರ ಕರಸಂಸ್ಪರ್ಶವಾಗೆ ಮೃಣ್ಮಯ ದೇಹ,
ನನ್ನ ಚಿನ್ಮಯ ಬುದ್ಧಿ, ನನ್ನ ತನ್ಮಯ ಪ್ರಾಣ
ಚಿಗಿತಲರ್ತು ಮಲರುಮಲರಾಗದಿಹವೇ? ಎಲರೆ!
ಬೀಸು ಮನಬಂದತ್ತ! ಸೃಷ್ಟಿ! ತೆರೆಯನು ಸರಿಸು.
ನಿನ್ನೊಲವು ತಿಳಿದತ್ತ! ಕಣ್ಣಾಗಿ ನಿಂತಿಹೆನು.
ಇಂದು ನನ್ನೀ ಕಣ್ಣು ಹೊಳೆವ ನೇಸರಗಣ್ಣು.

## ದೈವ (೨)

ಅರಿಯದಲೆ ಧಾವಿಸಿದೆ. ಹಸುಳನನು ಕ್ಷಮಿಸುವದು.
ನಿನ್ನ ಕಣ್ಣೆಲರೊಲವು ಬಂದು ಬೀಸಿತು ನನ್ನ
ಆತುಮನ ನಂದನದಿ. ಉತ್ತಿಬಿತ್ತಿದ ಬೀಜ
ವೃಕ್ಷವಾಯಿತು ಇಂದು. ನಿನ್ನ ಗೆಳತಿಯರಿವರು
ಅಪ್ಸರಿಯರೆಲ್ಲ ನೀರೆರೆದ ಕೂದಲಿನಿಂದ
ತಂದೀಂಟಿಸಿದರೆನಗೆ ದಿವ್ಯ ಜೀವಾಮೃತವ.
ಹೂಬಿಸಿಲಿನಲಿ ಹಸಿರು ತಲೆದೊಡಿಗೆಯನು ಧರಿಸಿ
ಕಿನ್ನರರು ಬಂದು ಎಲೆಯಾಟವನು ಹೂಡಿದರು.
ಮನ್ಮಥ ವಸಂತರೀ ಜೀವರಾಶಿಯನೆಲ್ಲ
ಕೊನರಿಸುತ ಮಲರುಮಲರಾಗಿಸಲು ಜೀವವಿದು
ಸುರರ ಕರಸ್ಪರ್ಶದಲಿ ಮಿಡಿಗೊಂಡು ಕೊನೆದಿಹುದು.
ಇಂದೋರ್ವ ದೇವಿಯಾ ಪರಮ ಕೋಮಲ ಸ್ಪರ್ಶ-
ದಿಂದ ಬಂದಿತು ಫಲೋನ್ಮುಖತೆಯೀ ಬಾಳುವೆಗೆ.
ನೀನು ಬೆಳೆಸಿದ ಹಣ್ಣು,— ನಿನ್ನಿಚ್ಛೆಯೆಂದಿಹೆನು !

# ದೈವ (೩)

ದೈವವೇ! ಬ್ರಹ್ಮಾಂಡಗಳನು ಮುತ್ತಿಡುವಂಥ
ಭವ್ಯ ಅಪರಂಪಾರ ಶಕ್ತಿಯೇ! ದೇವನಲಿ
ಮೇಲಾಟವನು ಹೂಡಿ ಮೇಲೆಕೆಳಗಾದಂಥ
ಮೇಲ್ಮೆಯೇ! ನೀನೆ ಬೆಂಗಾವಲಿಗ! ಕಾವಸಲಿ
ಸ್ಪರ್ಧೆಯೇ? ಸಿನ್ನ ತಿರುಳಿನ್ನ ಎದೆಹೊಗಲಿನ್ನು.
ನಿನ್ನ ಹುರುಳಿನ್ನ ಕೊರಳುಸಿರಾಗಿ ಪಸರಿಸಲಿ!
ನಿನ್ನ ಹೆಸರನೆ ಹೇಳಿ ಸೊಗಸು-ಕೋಟಲೆಯಿನ್ನು
ಬಂದು ಬಾಗಿಲವನ್ನು ನೂಕಿರಲಿ! ಭುವನದಲಿ
ನಿನ್ನ ಎದೆಗಾರಿಕೆಯ ಬೆರಗು ಬಿದ್ದಣವಿರಲು
ಹೆದೆಯೇರಿಸಲು ನಾನು ಹಿಂದೆಗೆಯುವೆನೆ? ನನ್ನ
ಬಾಳುವೆಯು ನಿನಗೆಂದು ಮೀಸಲಾಗಿರುವರಳು!
ಕಿರಿದಹುದು. ಇರಲೇನು? ಅರಳಲಿದೆ. ಅರಿದೆನ್ನ
ನೆತ್ತಿಕೊಳಿ ನನ್ನ ನರುಗಂಪು ವಿಭ್ರಮಿಸಿ
ಬಿಡಬಹುದು ಹದಿನಾಲ್ಕು ಲೋಕಗಳ ತಣಿಸಿ!